ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಡಿಸೆಂಬರ್ 30, 2009 ರೂ. 12/-

50 ತುಂಬಿದ ಲೋಕಾಯತ



ಸಹವಾಸ ದೋಷ ಸನ್ಯಾಸಿ ಕೆಟ್ಟ

BMP
ರ್ಡ್ ವಾರ್

ಪದ್ಮನಾಭನಗರದಲ್ಲಿ ಅಶೋಕ್ ಕಿತಾಪತಿ






ನೊಳಂಬರ ಅಸಾಮಾನ್ಯ 'ಸ್ವಾಮಿ'

ಶಿವಮೊಗ್ಗ ಪಾರ್ಕ್‌ಕಳ್ಳ ಮಹಿಪಾಲ

ಒಬಾಮಾನ ನೊಬೆಲ್ ಭಾಷಣ: ಹೂಗುಚ್ಛದ ಮರೆಯಲ್ಲಿವೆ ಯುದ್ಧ ಟ್ಯಾಂಕರ್‌ಗಳು!

ಶತ್ರುವನ್ನು ಸಹೋದರರು ಎಂದು ಕರೆಯುವ ಕಿಂಗ್ ಪರಂಪರೆಯವನು ತಾನೆಂದು ಹೇಳಿಕೊಳ್ಳುವ ಒಬಾಮಾ ಜಗತ್ತಿಗೆ ಹೇಳುತ್ತಿರುವುದು ಮಾತ್ರ ಬುಷ್ ಹೇಳಿದ್ದನ್ನೇ! ಒಂದೋ ನೀವು ನಮ್ಮ ಪರವಾಗಿರಬೇಕು. ಇಲ್ಲವಾದರೆ ನೀವು ಶತ್ರುಗಳ ಪರವಿದ್ದಂತೆ! ಇದೇ ಶಾಂತಿದೂತ ಒಬಾಮಾನ ನಿಜವಾದ ಬಣ್ಣ.




ಈ ಬಾರಿ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಬರಾಕ್ ಒಬಾಮಾ ಗೆದ್ದಿದ್ದಕ್ಕೆ ನೆಮ್ಮದಿ ಮತ್ತು ಶಾಂತಿಯುತ ಬಾಳ್ವೆಯನ್ನು ಬಯಸುವ ಜಗತ್ತಿನ ಕೋಟ್ಯಂತರ ಹೃದಯಗಳು ಹರ್ಷಗೊಂಡಿದ್ದವು. ಅದರಲ್ಲಿ ನಮ್ಮ ಸಂಪಾದಕರಾದ ಗೌರಿ ಲಂಕೇಶರಂತಹ ಬಲ್ಲವರಿಂದ ಹಿಡಿದು ಅಂತರರಾಷ್ಟ್ರೀಯ ತಿಳಿವಳಿಕೆ ಇಲ್ಲದ ಸಾಮಾನ್ಯರೂ ಇದ್ದರು. ಅಮೆರಿಕದ ಸಾಮ್ರಾಜ್ಯಶಾಹಿ ವಿಸ್ತರಣೆ ಮತ್ತು ಯುದ್ಧಕೋರತನವನ್ನು ನೋವು ಮತ್ತು ಅಪಮಾನಗಳನ್ನೇ ಉಂಡುಟ್ಟು ಬೆಳೆದ ಒಬಾಮಾ ನಿಲ್ಲಿಸುತ್ತಾನೆ, ಅಮೆರಿಕದ ಬಾಂಬರ್‌ಗಳಿಂದ ಗಾಯಗೊಂಡು ನರಳುತ್ತಿರುವ ಜಗತ್ತಿಗೆ ಪ್ರೀತಿ ಮತ್ತು ಶಾಂತಿಯ ಮುಲಾಮು ಹಚ್ಚುತ್ತಾನೆ ಎಂಬ ಅಪಾರ ನಿರೀಕ್ಷೆ ಅವರೆಲ್ಲರದ್ದಾಗಿತ್ತು.

ಚುನಾವಣಾ ಪ್ರಚಾರ ಸಮಯದಲ್ಲಿ ಆತ ಮಾಡುತ್ತಿದ್ದ ಹೃದಯ ತಟ್ಟುವಂಥ ಭಾಷಣಗಳು, ಅಮೆರಿಕ ಸಮಾಜದಲ್ಲಿರುವ ವರ್ಣ ತಾರತಮ್ಯದ ನೆಲೆಯನ್ನು ಮರೆಯದೆಯೂ ಭವಿಷ್ಯದತ್ತ ದೃಷ್ಟಿಯನ್ನಿಟ್ಟುಕೊಂಡು ಶಾಂತಿ ಮತ್ತು ಸಹಬಾಳ್ವೆಯ ಹೊಸ ಮನ್ವಂತರವನ್ನು ಪ್ರಾರಂಭಿಸೋಣ ಎಂಬ ಆತನ ಕರೆಯನ್ನು ಬಿಳಿಯರು ಮತ್ತು ಕರಿಯರೆಲ್ಲರೂ ಸಂಭ್ರಮದಿಂದ ಸ್ವಾಗತಿಸಿದರು. ಆರ್ಥಿಕ ಹಿಂದ್ಸರಿತದಿಂದ ತತ್ತರಿಸುತ್ತಿದ್ದ ಜಗತ್ತಿನ ಆರ್ಥಿಕತೆಗೆ ಶ್ರೀಮಂತರು ತಮ್ಮ ದುರಾಸೆಯನ್ನು ಕಡಿಮೆ ಮಾಡಿಕೊಂಡು ಉಳಿದ ಸಹಜೀವಿಗಳೊಂದಿಗೆ ಹಂಚಿಕೊಳ್ಳುವುದೊಂದೇ ಇರುವ ದಾರಿ ಎಂಬ ಒಬಾಮಾನ ವಿಶ್ಲೇಷಣೆ ಅವನಿಗೆ ಬಿಳಿಯ ಮತ್ತು ಕರಿಯರಿಬ್ಬರ ಓಟನ್ನೂ ಗಳಿಸಿಕೊಟ್ಟಿತ್ತು.

ಅಮೆರಿಕದ ನಿಕಟಪೂರ್ವದಲ್ಲಿ ಅಮೆರಿಕದ ಮತ್ತು ಜಗತ್ತಿನ ಜನರ ಹೃದಯಗಳೊಂದಿಗೆ ಹೀಗೆ ನೇರವಾಗಿ, ಆತ್ಮೀಯವಾಗಿ ಸಂಭಾಷಣೆ ನಡೆಸಿದ ಮತ್ತೊಬ್ಬ ಅಧ್ಯಕ್ಷನಿರಲಿಲ್ಲ. ಹೀಗಾಗಿಯೇ ಆತನ ಭರವಸೆಯ ಸಾಧ್ಯಾಸಾಧ್ಯತೆಗಳ ಬಗ್ಗೆ, ಆತನ ಪ್ರಚಾರಕ್ಕೆ ಬಿಲಿಯಾಂತರ ಡಾಲರ್‌ಗಳನ್ನು ನೀಡಿದ ಕಾರ್ಪೊರೇಟ್ ಉದ್ಯಮಿಗಳ ಹಿನ್ನೆಲೆ ಬಗ್ಗೆ, ಅವರು ಮಾಡುತ್ತಿರುವ ಅನಾಹುತ ಮತ್ತು ಅದರ ಬಗ್ಗೆ ಒಬಾಮಾನ ಮೌನದ ಬಗ್ಗೆ, ಇರಾಕ್, ಪ್ಯಾಲೆಸ್ತೀನ್ ಮತ್ತು ಅಫ್ಘಾನಿಸ್ತಾನಗಳ ಬಗ್ಗೆ ಆತನ ಮತ್ತು ಆತನ ಪಕ್ಷವಾದ ಡೆಮಾಕ್ರಟರ ನಿಲುವಿಗೂ ಬುಷ್‌ನ ನಿಲುವಿಗೂ ಏನೂ ವ್ಯತ್ಯಾಸ ಇಲ್ಲದಿರುವ ಬಗ್ಗೆ ಗಮನ ಸೆಳೆದರೆ ಸಹಜವಾಗಿ ನಮ್ಮ ಸಂಪಾದಕರನ್ನೂ ಒಳಗೊಂಡಂತೆ ಅವರ ಮಿತ್ರರಿಗೂ ಕೋಪವೇ ಬರುತ್ತಿತ್ತು, ಜೊತೆಗೆ ನಮಗೆ "ಸಿನಿಕರು" ಎಂಬ ಪಟ್ಟ ಪುಕ್ಕಟೆಯಾಗಿ ಸಿಗುತ್ತಿತ್ತು.

ಇರಲಿ. ಒಬಾಮಾನನ್ನು ವಿಮರ್ಶಿಸಬಾರದೆಂಬ ಧೋರಣೆಗಿಂತ ಜಗತ್ತು ಎದುರಿಸುತ್ತಿರುವ ಬವಣೆಗಳನ್ನು ಕನಿಷ್ಠ ಆತನಾದರೂ ಬಗೆಹರಿಸಲಿ ಎಂಬ ನಿಸ್ಸಹಾಯಕ ನಿರೀಕ್ಷೆ ಹಾಗೂ ಬೇರೆ ಯಾವ ದಾರಿಯೂ ಗೋಚರಿಸದೇ ಉಂಟಾದ ಹತಾಶೆ ಎರಡೂ ಅದರಲ್ಲಿ ಬೆರೆತಿವೆ. ಆದರೆ ಒಬಾಮಾ ಈ ಬಗೆಯ ನಿರೀಕ್ಷೆಗಳೆಲ್ಲ ಹುಸಿಯೆಂಬುದನ್ನು ಅಧಿಕಾರ ವಹಿಸಿಕೊಂಡ ಆರಂಭದಿಂದಲೇ ಸಾಬೀತುಮಾಡಲು ಪ್ರಾರಂಭಿಸಿದ್ದಾರೆ.

ಒಬಾಮಾ ಸರ್ಕಾರದ ವಿದೇಶಾಂಗ ನೀತಿಯಂತೂ ಬುಷ್‌ಗಿಂತ ಹೀನಾಯವಾದ ದಾರಿಯನ್ನು ತುಳಿದಿರುವುದು ಗಾಂಧಾರಿ ಕುರುಡಿರದ ಯಾರಿಗಾದರೂ ಸ್ಪಷ್ಟವಾಗಿ ಕಾಣುತ್ತದೆ. ಲಾಡೆನ್ ಅಫ್ಘಾನಿಸ್ತಾನದಲ್ಲಿ ಅಡಗಿ ಕೂತಿದ್ದಾನೆಂಬ ನೆಪ ಒಡ್ಡಿ ಬುಷ್ ಸರ್ಕಾರ ಆ ದೇಶದ ಮೇಲೆ ಸತತ ಕಾರ್ಪೆಟ್ ಬಾಂಬ್ ದಾಳಿ ಮಾಡಿ ಸಾವಿರಾರು ಮುಗ್ಧ ಮಕ್ಕಳು, ಹೆಂಗಸರು ಮತ್ತು ವೃದ್ಧರನ್ನೂ ಕೊಂದು ಹಾಕಿದ್ದಲ್ಲದೆ ಆ ದೇಶದ ಆರ್ಥಿಕತೆಯನ್ನೇ ಸರ್ವನಾಶ ಮಾಡಿತು. ಅದಲ್ಲದೆ 2001ರಿಂದಲೂ 21,000ಕ್ಕೂ ಹೆಚ್ಚು ಅಮೆರಿಕನ್ ಸೈನಿಕರನ್ನು ಅಲ್ಲಿ ನೆಲೆಗೊಳಿಸಿತ್ತು. ಆದರೆ ಶಾಂತಿದೂತನಂತೆ ಮಾತಾಡುತ್ತಾ ಅಧಿಕಾರ ಪಡೆದ ಒಬಾಮಾ ಮಾಡಿದ್ದೇನು? ಅಲ್ಲಿಂದ ಸೇನೆಯನ್ನು ವಾಪಸ್ ತೆಗೆದುಕೊಳ್ಳುವ ಬದಲಿಗೆ ಇನ್ನೂ ಹೆಚ್ಚು ಅಮೆರಿಕನ್ ಪಡೆಯನ್ನು ಕಳಿಸುವ ತೀರ್ಮಾನ ತೆಗೆದುಕೊಂಡ. ಮೊನ್ನೆಮೊನ್ನೆ ಇನ್ನೂ 35,000 ಹೆಚ್ಚುವರಿ ಸೈನಿಕರನ್ನು ಕಳಿಸುವ ತೀರ್ಮಾನವನ್ನು ಒಬಾಮಾ ಸರ್ಕಾರ ಕೈಗೊಂಡಿದೆ. ಈಗ ಅಫ್ಘಾನಿಸ್ತಾನದಲ್ಲಿ ಇರುವ ಅಮೆರಿಕನ್ ಮತ್ತು ಇನ್ನಿತರ ಆಕ್ರಮಣಕಾರಿ ದೇಶಗಳ ಸೈನಿಕರ ಸಂಖ್ಯೆ



1,50,000 ಕ್ಕಿಂತ ಹೆಚ್ಚು. ಇದರಲ್ಲಿ ಶೇ.80ರಷ್ಟು ಅಮೆರಿಕನ್ನರು ಶಾಂತಿಪ್ರಿಯ ಒಬಾಮಾ ಸರ್ಕಾರ ಕಳಿಸಿದವರು!

ಇರಾಕ್, ಇರಾನ್, ಉತ್ತರ ಕೊರಿಯಾ, ಪ್ಯಾಲೆಸ್ತೀನ್ ಮತ್ತು ಇತರ ಕಡೆಗಳಲ್ಲಿ "ನ್ಯಾಯ ನೀತಿಗಳ" ಕಗ್ಗೊಲೆಯನ್ನು ಒಬಾಮಾ ಸರ್ಕಾರ ಯಾವುದೇ ಎಗ್ಗಿಲ್ಲದೆ ಮುಂದುವರೆಸಿಕೊಂಡು ಹೋಗುತ್ತಿದೆ. ಆದರೆ ಕವಿ ಮನಸ್ಸಿನ ಒಬಾಮಾ ತನ್ನ ಆಕರ್ಷಕ, ಮನಮೋಹಕ ಮತ್ತು ಸಿಹಿಮಾತಿನ ಲೇಪನವನ್ನು ಹಚ್ಚಿ ಜಗತ್ತು ಅಮೆರಿಕದ ಈ ಯುದ್ಧಕೋರತನವನ್ನು ಮತ್ತು ಸಾಮ್ರಾಜ್ಯಶಾಹಿ ಧೋರಣೆಯನ್ನು ಒಪ್ಪಿಕೊಳ್ಳುವಂತೆ ಮಾಡುತ್ತಲೇ ಬರುತ್ತಿದ್ದಾನೆ.



ಇಂಥಾ ಒಬಾಮಾನಿಗೆ ಮೊನ್ನೆ ನೊಬೆಲ್ ಸಮಿತಿ ಈ ಸಾಲಿನ ಶಾಂತಿ ಪ್ರಶಸ್ತಿಯನ್ನು ಕೊಟ್ಟದೆ! ಅದೂ ಅಫ್ಘಾನಿಸ್ತಾನ, ಇರಾಕ್ ಹಾಗೂ ಇರಾನ್‌ಗಳಲ್ಲಿ ಆಕ್ರಮಣವನ್ನು ಇನ್ನೂ ಹೆಚ್ಚಿಸುವ ಮತ್ತು ತೀವ್ರಗೊಳಿಸುವ ಘೋಷಣೆಯನ್ನು ಒಬಾಮಾ ಮಾಡಿದ ಕೇವಲ ಎರಡು ದಿನಗಳಲ್ಲಿ!

ಒಬಾಮಾನಿಗೆ ನೊಬೆಲ್ ಶಾಂತಿ ಪ್ರಶಸ್ತಿ ಕೊಟ್ಟದ್ದೇಕೆ ಎಂಬುದಕ್ಕೆ ನೊಬೆಲ್ ಸಮಿತಿಯವರ ಬಳಿಯೇ ಸರಿಯಾದ ಕಾರಣಗಳಿಲ್ಲ. ಆದರೆ ಮೊನ್ನೆ ಡಿಸೆಂಬರ್ 11ರಂದು ಆ ಪ್ರಶಸ್ತಿಯನ್ನು ಸ್ವೀಕರಿಸುವಾಗ ಒಬಾಮಾ ಮಾಡಿದ ಭಾಷಣವು ಆತ ನಿಜವಾಗಲೂ ಯಾರೆಂಬ ಬಗ್ಗೆ ಯಾರಿಗೂ ಯಾವುದೇ ಅನುಮಾನವನ್ನು ಉಳಿಸುವಂತಿರಲಿಲ್ಲ. ವಾಸ್ತವವಾಗಿ ಶಾಂತಿ ಪ್ರಶಸ್ತಿಯನ್ನು ಸ್ವೀಕರಿಸುತ್ತಾ ಆತ ಮಾಡಿದ್ದೆಲ್ಲಾ ಯುದ್ಧದ ಘೋಷಣೆಯೇ!

"ಜಗತ್ತಿನಲ್ಲಿ ಶಾಂತಿ ಮುಖ್ಯವಾದದ್ದಾದರೂ ಹಲವಾರು ಸಾರಿ ಯುದ್ಧದ ಅಗತ್ಯವಿದ್ದೇ ಇರುತ್ತದೆ. ಅಹಿಂಸೆ ಮತ್ತು ಶಾಂತಿ ಅತ್ಯುತ್ತಮವಾದ ಆದರ್ಶಗಳೇ ಆಗಿದ್ದರೂ ಒಂದು ದೇಶದ ಅಧ್ಯಕ್ಷನಾಗಿ ಮತ್ತು ಅಮೆರಿಕದ ಜನರ ಹಿತಾಸಕ್ತಿಯನ್ನು ಕಾಯುವ ಉದ್ದೇಶದಿಂದಾಗಿ ನಾನು ಬರೀ ಆ ಆದರ್ಶಗಳನ್ನು ನೆಚ್ಚಿಕೊಂಡು ಕೂರಲು ಆಗುವುದಿಲ್ಲ. ಆದ್ದರಿಂದ ಕೇವಲ ನಾನು ಮಾತ್ರವಲ್ಲ ಎಲ್ಲಾ ದೇಶಗಳು ಸಹ ತಮ್ಮ ದೇಶದ ರಕ್ಷಣೆಗಾಗಿ ಮತ್ತು ಭವಿಷ್ಯಕ್ಕಾಗಿ ಹಲವಾರು ಬಾರಿ "ನ್ಯಾಯಯುತ" ಯುದ್ಧದಲ್ಲಿ ತೊಡಗಿಕೊಳ್ಳಬೇಕಾಗುತ್ತದೆ" ಎಂದು ಸ್ಪಷ್ಟವಾಗಿ ತನ್ನ ಯುದ್ಧನೀತಿಯನ್ನು ಸಮರ್ಥಿಸಿಕೊಂಡಿದ್ದಾನೆ. ಮಾತ್ರವಲ್ಲ "ಈವರೆಗೆ ಜಗತ್ತಿನಲ್ಲಿ ಶಾಂತಿ ಮತ್ತು ನೆಮ್ಮದಿ ಉಳಿದುಕೊಂಡಿರಲು ಮುಖ್ಯ ಕಾರಣ ಕೇವಲ ಅಂತರ ರಾಷ್ಟ್ರೀಯ ಒಪ್ಪಂದಗಳಲ್ಲ, ಅಥವಾ ಕೇವಲ ವಿಶ್ವ ಸಂಸ್ಥೆಯಲ್ಲ, ಅದರ ಹಿಂದೆ ನಮ್ಮ ಅಮೆರಿಕದ ಸೈನಿಕರ ಸಾಹಸವಡಗಿದೆ" ಎಂದು ಹೇಳುವ ಮೂಲಕ ಈವರೆಗೆ ಅಮೆರಿಕ ಮಾಡಿಕೊಂಡು ಬಂದ ಯುದ್ಧಗಳನ್ನೆಲ್ಲಾ ಸಾರಾಸಗಟಾಗಿ ಸಮರ್ಥಿಸಿಕೊಂಡಿದ್ದಾನೆ...ಅದೂ ಜಾಗತಿಕ ಶಾಂತಿ ಪ್ರಶಸ್ತಿ ಪಡೆಯುತ್ತಾ!

ಒಬಾಮಾನ ಗಾರುಡಿ ಇರುವುದು ಈ ಯುದ್ಧಕೋರತನವನ್ನು ಸವಿಯಾದ ಮಾತುಗಳಲ್ಲಿ ಮುಚ್ಚಿಡುವುದರಲ್ಲಿ! ಅದಕ್ಕೆ ಆತ ಅಮೆರಿಕ ಜಗತ್ತಿನ ಮೇಲೆ ನಡೆಸುತ್ತಿರುವುದು ದಾಳಿಗಳನ್ನು ಸಮರ್ಥಿಸಿಕೊಳ್ಳುತ್ತಾ ಇಂಥಾ ನ್ಯಾಯಯುತ ಯುದ್ಧ ಗುಣಲಕ್ಷಣಗಳನ್ನೂ ವಿವರಿಸಿದ್ದಾನೆ. "ಒಂದು ಯುದ್ಧ ನ್ಯಾಯಯುತ ಯುದ್ಧವಾಗಬೇಕಾದಲ್ಲಿ ಅದಕ್ಕೆ ಕೆಲವು ಪೂರ್ವಷರತ್ತುಗಳಿವೆ. ಮೊದಲಿಗೆ ಅದು ನ್ಯಾಯಯುತವಾದ ಗುರಿಯನ್ನು ಹೊಂದಿರಬೇಕು. ಎರಡನೆಯದಾಗಿ ಆತ್ಮ ರಕ್ಷಣೆಗಾಗಿ ಮಾತ್ರ ಇಂಥಾ ಯುದ್ಧವನ್ನು ನಡೆಸಬೇಕು. ಮೂರನೆಯದಾಗಿ ಶತ್ರು ಬಲಕ್ಕೆ ಸರಿಪ್ರಮಾಣವಾದ ಬಲವನ್ನು ಮಾತ್ರ ಪ್ರಯೋಗಿಸಬೇಕು. ನಾಲ್ಕನೆಯದಾಗಿ ಸಾಧ್ಯವಾದಷ್ಟೂ ಮಟ್ಟಿಗೆ ಅಮಾಯಕ ನಾಗರಿಕರ ಮೇಲೆ ದಾಳಿಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು."

ಒಬಾಮಾ ಅಪಾಯಕಾರಿಯಾಗುವುದು ಇಲ್ಲೇ! ಇಂದು ಜಗತ್ತಿನ ಬೇರೆಬೇರೆ ಕಡೆ ನಡೆಯುತ್ತಿರುವ 35ಕ್ಕೂ ಹೆಚ್ಚು ಯುದ್ಧ-ಕದನಗಳಲ್ಲಿ ಅಮೆರಿಕದ ಪ್ರತ್ಯಕ್ಷವಾದ ಅಥವಾ ಪರೋಕ್ಷವಾದ ಹಸ್ತಕ್ಷೇಪವಿದೆ. ಮೇಲಿನ ಹೇಳಿಕೆಯ ಪ್ರಕಾರ ಇಲ್ಲೆಲ್ಲಾ ಅಮೆರಿಕ ತನ್ನ ಆತ್ಮರಕ್ಷಣೆಗಾಗಿ ಯುದ್ಧ ನಡೆಸುತ್ತಿದೆಯೇ? ಆಫ್ರಿಕಾದ ಸೋಮಾಲಿಯಾ ಡಾರ್ಫರ್ ಅಂಗೋಲಾಗಳಲ್ಲಿ ಖನಿಜ ಸಂಪತ್ತಿಗಾಗಿ, ಅಫ್ಘಾನಿಸ್ತಾನ ಇರಾಕ್‌ಗಳಲ್ಲಿ ತೈಲ ಸಂಪತ್ತಿಗಾಗಿ, ಲ್ಯಾಟಿನ್ ಅಮೆರಿಕಾದ ಕೊಲಂಬಿಯಾ, ಬ್ರೆಜಿಲ್, ಪೆರು, ಏಷಿಯಾದ ನೇಪಾಳ, ಬರ್ಮಾ, ಶ್ರೀಲಂಕಾ ಇನ್ನಿತ್ಯಾದಿ ಕಡೆಗಳಲ್ಲಿ ತನ್ನದೇ ಜನರ ಮೇಲೆ ಅಲ್ಲಿನ ಸರ್ಕಾರಗಳು ನಡೆಸುತ್ತಿರುವ ಯುದ್ಧಕ್ಕೆ ಅಮೆರಿಕ ಪರೋಕ್ಷ ಕುಮ್ಮಕ್ಕನ್ನು ಮತ್ತು ನೇರ ಮಿಲಿಟರಿ

ಚಾರ್ವಾಕ
▸ ಶಿವಸುಂದರ್

ಸಹಾಯವನ್ನು ಮಾಡುತ್ತಿರುವುದರ ಹಿಂದೆ ಯಾವ ನ್ಯಾಯಪರತೆಯಿದೆ?

ಇನ್ನು ಒಬಾಮಾನೇ ಹೇಳುವಂತೆ: ನ್ಯಾಯಯುದ್ಧಕ್ಕೆ ಬೇಕಾದ ಮೂರನೇ ಪೂರ್ವ ಶರತ್ತು ಸಮಪ್ರಮಾಣದ ಬಲ ಬಳಕೆ. ಈ ಅಮೆರಿಕ ಸಮಪ್ರಮಾಣದ ಬಲವನ್ನು ಮಾತ್ರ ನಿಯೋಜಿಸುತ್ತಿದೆಯೇ? ಉದಾಹರಣೆಗೆ ಅಮೆರಿಕದ ಪ್ರಕಾರವೇ ಅಫ್ಘಾನಿಸ್ತಾನದಲ್ಲಿ ಇರುವುದು ಅಬ್ಬಬ್ಬಾ ಎಂದರೆ ಮೆಷಿನ್‌ಗನ್ ಮತ್ತು ಎ.ಕೆ.47 ಗಳನ್ನು ಮಾತ್ರ ಹೊಂದಿರುವ 1000-2000 ತಾಲಿಬಾನಿಗಳು. ಆದರೆ ಅವರ ವಿರುದ್ಧ ಒಬಾಮಾ ನಿಯೋಜಿಸಿರುವುದು 1,50,000 ಸೈನ್ಯ, ನೂರಾರು ಟ್ಯಾಂಕರ್‌ಗಳು ಮತ್ತು ಯುದ್ಧ ವಿಮಾನಗಳು!

ಇನ್ನು ನಾಗರಿಕರ ಪ್ರಾಣ ರಕ್ಷಣೆಯ ವಿಷ… ಒಬಾಮಾ ಅಧಿಕಾರ ಹಿಡಿದ ಮೇಲೆ ಅಫ್ಘಾನಿಸ್ತಾ… ಇರಾಕ್ ಮತ್ತು ಪ್ಯಾಲೆಸ್ತೀನ್‌ಗಳಲ್ಲಿ ಹಿಂದೆಂದಿಗಿಂತ… ಹೆಚ್ಚು ನಾಗರಿಕರ ಪ್ರಾಣಹರಣವಾಗಿದೆ. ಒಬಾ… ಕುಖ್ಯಾತ ಗುಂಟಾನಾಮೋ ಬೇಯಲ್ಲಿರುವ ಚಿತ್ರಹಿಂ… ಶಿಬಿರ ಮತ್ತು ಬಂಧೀಖಾನೆಯನ್ನು ಮುಚ್ಚುವ ಪ್ರ… ಮಾಡಿರಬಹುದು. ಆದರೆ ಅಫ್ಘಾನಿಸ್ತಾನದಲ್ಲಿ … ಕ್ಕಿಂತಲೂ ಭೀಕರವಾದ ಬರ್ಗಾಮ್ ಚಿತ್ರಹಿಂಸಾ ಶಿ… ವನ್ನು ತೆರೆಯಲಾಗಿದೆ. ಇಲ್ಲಿ ದಿನನಿತ್ಯ ತಾಲಿಬಾನಿಯೆ… ಆರೋಪದ ಮೇಲೆ ನೂರಾರು ಅಮಾಯ… ಮಾನ-ಪ್ರಾಣಹರಣವಾಗುತ್ತಿದೆ.

ಜಗತ್ತಿನಲ್ಲಿ ಎಲ್ಲೆಲ್ಲಿ ಯುದ್ಧಕ್ಕೆ ಕಾರಣವಾಗುವ ಸನ್ನಿ… ಉಂಟಾಗಿ ಅಮೆರಿಕದ ಮಧ್ಯಪ್ರವೇಶವನ್ನು ಅನಿವಾ… ಮಾಡುತ್ತಿದೆ ಎಂಬ ಪಟ್ಟಿಯಲ್ಲಿ ಒಬಾಮಾ ಅಫ್ಘಾನಿಸ… ಇರಾಕ್, ಇರಾನ್, ಉ.ಕೊರಿಯಾ, ಸೊಮಾಲಿಯಾಗ… ಮಾತ್ರ ಹೆಸರಿಸುತ್ತಾನೆ. ಆದರೆ ಅಮೆರಿಕದ ಕು… ನೊಂದಿಗೆ ಇಡೀ ಮಧ್ಯ ಏಷಿಯಾದಲ್ಲಿ ಇಸ್ರೇಲ್ ಮಾ… ತ್ತಿರುವ ಅನ್ಯಾಯಯುತ ಆಕ್ರಮಣಗಳನ್ನು ಪಟ್ಟಿ… ಮಾಡುವುದಿಲ್ಲ.

ಒಬಾಮಾ ತನ್ನ ಶಾಂತಿ ಭಾಷಣದಲ್ಲಿ ತನ… ಯಾವ ಕಾರಣಕ್ಕೂ ಅಹಿಂಸಾವಾದಿಯೆಂದು … ತಿಳಿದುಕೊಳ್ಳಬಾರದೆಂಬ ಉದ್ದೇಶದಿಂದಲೇ "ಅಹಿಂ… ವಾದಕ್ಕೆ ಮಿತಿಯಿದೆ. ಅಹಿಂಸಾವಾದಿ ಚಳವಳಿ ಹಿ… ಸೈನ್ಯವನ್ನು ಹಿಮ್ಮೆಟ್ಟಿಸುತ್ತಿರಲಿಲ್ಲ, ಕೇವಲ ಸಂಧಾನ… ಅಲ್-ಖೈದಾ ಶಸ್ತ್ರಾಸ್ತ್ರವನ್ನು ಕೆಳಗಿಡುವಂತೆ ಮಾಡುತ್ತಿರ… ಕೆಲ ಸಂದರ್ಭಗಳಲ್ಲಿ ಹಿಂಸೆ ಅನಿವಾರ್ಯವೆಂಬ ಮಾ… ಸಿನಿಕತನವದ್ದೇನೂ ಅಲ್ಲ. ಬದಲಿಗೆ ಅದು ಇತಿಹಾ… ಮನುಷ್ಯ ಸ್ವಭಾವದ ಅತಾರ್ಕಿಕತೆಯ ಮತ್ತು ತರ್ಕ… ಮಿತಿಗಳ ಯಥಾರ್ಥ ಚಿತ್ರಣವಷ್ಟೇ ಆಗಿರುತ… ಎಂದಿದ್ದಾನೆ.

ತನ್ನ ಭಾಷಣದುದ್ದಕ್ಕೂ ಮಾರ್ಟಿನ್ ಲೂ… ಕಿಂಗ್ ಅನ್ನು ಉದ್ಧರಿಸುವ ಒಬಾಮಾ ವಿಯೆಟ್ನಾ… ಮೇಲೆ ಅಮೆರಿಕ ಯುದ್ಧ ಘೋಷಿಸಿದ ಸಂದರ್ಭ… ಕಿಂಗ್ ಕೂಡ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಸ್ವೀಕರಿ… ಅಹಿಂಸಾವಾದ ಸಾಧ್ಯತೆಯ ಬಗ್ಗೆ ಆಡಿದ ಈ ನುಡಿಗ… ಮಾತ್ರ ಜ್ಞಾಪಿಸಿಕೊಳ್ಳುವುದೇ ಇಲ್ಲ. "ಅನುಕಂಪ … ಅಹಿಂಸೆಯ ನಿಜವಾದ ಅರ್ಥ ತಿಳಿಯುವುದು … ನಮ್ಮ ಶತ್ರುವಿನ ದೃಷ್ಟಿಕೋನವನ್ನೂ ನಾವು … ಮಾಡಿಕೊಳ್ಳಲು ಸಹಾಯ ಮಾಡಿದಾಗ, … ಪ್ರಶ್ನೆಗಳನ್ನು ಆಲಿಸಲು ಮತ್ತು ನಮ್ಮ ಬಗ್ಗೆ … ಮೌಲ್ಯಮಾಪನವೇನೆಂದು ಅರ್ಥಮಾಡಿಕೊ… ಸಹಕಾರಿಯಾದಾಗ! ನಾವು ನಿಜಕ್ಕೂ ಪ್ರಬುದ್ಧರಾ… ನಾವು ಶತ್ರುಗಳು ಎಂದು ಕರೆಯುವ ಸಹೋ… ಮೂಲಕ ನಮ್ಮನ್ನು ನಾವು "ಅರಿತುಕೊಳ್… ಬೆಳೆಯಲು ಸಹಾಯವಾಗುತ್ತದೆ."

ಶತ್ರುವನ್ನು ಸಹೋದರರು ಎಂದು ಕರೆ… ಕಿಂಗ್ ಪರಂಪರೆಯವನು ತಾನೆಂದು ಹೇಳಿಕೊ… ಒಬಾಮಾ ಜಗತ್ತಿಗೆ ಹೇಳುತ್ತಿರುವುದು ಮಾತ್ರ ಬ… ಹೇಳಿದ್ದನ್ನೇ! ಒಂದೋ ನೀವು ನಮ್ಮ ಪರವ… ಬೇಕು. ಇಲ್ಲವಾದರೆ ನೀವು ಶತ್ರುಗಳ ಪರವಿದ… ಇದೇ ಶಾಂತಿದೂತ ಒಬಾಮಾನ ನಿಜವಾದ ಬ…

ಕೊನೆಯದಾಗಿ ಒಂದು ಪ್ರಶ್ನೆ. ಜಗತ್ತಿನಲ್ಲಿ ಪ… ಕಡೆ ನ್ಯಾಯಯುತ ಉದ್ದೇಶಗಳಿಗಾಗಿ ಸಶಸ್ತ್ರ ಹೋ… ಮಾಡುತ್ತಿರುವವರೂ ಸಹ ಹಿಂಸೆ ಏಕೆ ಅನಿವಾ… ವಾಗುತ್ತದೆ ಎಂಬುದರ ಮೇಲೆ ಒಬಾಮಾ ಹ… ಕಾರಣಗಳನ್ನೇ ನೀಡುತ್ತಾರೆ. ಆದರೆ ಅವರನ್ನು ಕ್ರೂರಿ… ಉಗ್ರವಾದಿಗಳು, ಮಾವೋವಾದಿಗಳು ಎಂದೆಲ್ಲಾ ಕ… ಅವರನ್ನು ಸದೆಬಡಿಯಲು ಲೈಸೆನ್ಸ್ ಕೊಡುವ … ನಾಗರಿಕ ಸಮಾಜ ಒಬಾಮಾನ ತರ್ಕವನ್ನು … ಒಪ್ಪುತ್ತಾ ಆತನ ಪುಂಗಿಗೆ ತಲೆಯಾಡಿಸುತ್ತಾ ಕೂರುವ…

72 ಕನ್ಯೆಯರ ಭ್ರಮೆಯಲಿ ಸೂಇಸೈಡ್ ಬಾಂಬರ್ಸ್...



ಇತ್ತೀಚೆಗೆ ಪಾಕಿಸ್ತಾನದ ವಜಿಕಿಸ್ತಾನ್ ಪ್ರದೇಶದ ದಕ್ಷಿಣ ದಲ್ಲಿರುವ ನವಾಜ್ ಕೋಟ್ ಎಂಬಲ್ಲಿ ಸೈನ್ಯಾಧಿಕಾರಿ 'ಸ್ವರ್ಗ' ಸಿಕ್ಕಿದೆ. ಈ 'ಸ್ವರ್ಗ' ('ಜನ್ನತ್')ದಲ್ಲಿ ಕೊಠಡಿಗಳಿದ್ದು, ಆ ಕೊಠಡಿಗಳ ತುಂಬ ಸುಂದರ ಗಳನ್ನು ಬಿಡಿಸಲಾಗಿದೆ. ಆ ಚಿತ್ರಗಳಲ್ಲಿ 'ಸ್ವರ್ಗ'ವನ್ನೇ ಸಲಾಗಿದ್ದು ಅವುಗಳಲ್ಲಿ ಹಾಲು ಮತ್ತು ಜೇನಿನ ಗಳೇ ಹರಿಯುತ್ತಿವೆಯಲ್ಲದೆ ತ್ರಿಲೋಕ ಸುಂದರಿ ದ ಹಲವಾರು ಕನ್ಯೆಯರನ್ನೂ ತೋರಿಸಲಾಗಿದೆ.

ಪಾಕಿಸ್ತಾನದ ಸೈನ್ಯಾಧಿಕಾರಿಗಳ ಪ್ರಕಾರ ತಾಲಿಬಾನ್ ಟನೆಯ ಮೌಲ್ವಿಗಳು 'ಸ್ವರ್ಗ'ದ ಈ ಚಿತ್ರಗಳನ್ನೇ ವಕರಿಗೆ ತೋರಿಸಿ ಅವರೆಲ್ಲ ಆತ್ಮಾಹುತಿ ಬರ್‌ಗಳಾಗುವಂತೆ ಪ್ರೋತ್ಸಾಹಿಸುತ್ತಿದ್ದರು. ಇಸ್ಲಾಂ ರ್ಮದ ಪರವಾಗಿ ಯುವಕರು ಸೂಇಸೈಡ್ ಬರ್‌ಗಳಾಗಿ ತಮ್ಮ ಪ್ರಾಣವನ್ನೇ ತೆತ್ತರೆ ಅವರೆಲ್ಲ ಲೋಕದಲ್ಲಿ ಶಾಶ್ವತವಾಗಿ ಸುಂದರ ಕನ್ಯೆಯರೊಂದಿಗೆ ಮುತ್ತಾರೆಂದೂ, ಪ್ರವಾದಿ ಪೈಗಂಬರ್ ಅವರಿಗೆ ಇರುವ ಸ್ಥಾನಕ್ಕೆ ಸಮಾನವಾದ ಸ್ಥಾನ ಅವರಿಗೂ ದೆಂದೂ, ಮೌಲ್ವಿಗಳು 12-18 ವರ್ಷ ವಯಸ್ಸಿನ ರನ್ನು ಮತ್ತು ಯುವಕರನ್ನು ನಂಬಿಸಿ ಅವರನ್ನೆಲ್ಲ ದುಷ್ಟ ಚಟುವಟಿಕೆಗಳಿಗೆ ಬಳಸುತ್ತಿದ್ದರು ಎಂದೂ ನದ ಸೈನ್ಯಾಧಿಕಾರಿಗಳು ಹೇಳಿದ್ದಾರೆ. (ಅಂದಹಾಗೆ, ಬದುಕಿರುವ ಮೌಲ್ವಿಗಳು ಅದ್ಯಾವಾಗ ಸತ್ತು ವನ್ನು ನೋಡಿಕೊಂಡು ಬಂದು ಅದರ ಚಿತ್ರಗಳನ್ನು ದರು ಎಂಬುದು ಇನ್ನೂ ಗೊತ್ತಾಗಿಲ್ಲ!)

ದೆಲ್ಲ ಇರಲಿ, ಈ ದುಷ್ಟ ಮೌಲ್ವಿಗಳ ಮಾತಿಗೆ ಷ್ಟು ಬಾಲಕರು ಮತ್ತು ಯುವಕರು ಮರುಳಾಗು ಬಡತನದ ಬೇಗೆ ಮತ್ತು ನತದೃಷ್ಟ ಬದುಕಿನಿಂದಾಗಿ ಗಿರುವ ಯುವಕರಿಗೆ ಪ್ರಸ್ತುತ ಜಗತ್ತಿಗಿಂತ ಸುಂದರ ಲ್ಲಿ ಮೌಲ್ವಿಗಳು ತೋರಿಸುವ ಇಹಲೋಕದ ನೇ ಆಕರ್ಷಕವಾಗಿ ಕಂಡಿದ್ದರೆ ಅಚ್ಚರಿ ಇಲ್ಲ. ರಣೆಗೆ ಹಲವು ತಿಂಗಳ ಹಿಂದೆ ಅಫಘಾನಿಸ್ತಾನದಲ್ಲಿ ಕ್ಕೊಂಡ ಯುವಕನೊಬ್ಬ ತನ್ನ 'ಗುರು' ತೋರಿಸಿದ್ದ ಕತೆಯನ್ನು ನಂಬಿದ್ದಾಗಿಯೂ, ತಾನು ಆತ್ಮಾಹುತಿ ಆದರೆ ತನಗೆ ಮಾತ್ರವಲ್ಲ ತನ್ನ ತಂದೆ, ತಾಯಿ ಒಡಹುಟ್ಟಿದವರಿಗೆಲ್ಲ 'ಸ್ವರ್ಗ'ದಲ್ಲಿ ಜಾಗ ವಾಗಿಯೂ, ಅದಕ್ಕೊಂದೇ ತಾನು ಸೂಇಸೈಡ್ ಬಾಂಬರ್ ಆಗುವುದಕ್ಕೆ ಒಪ್ಪಿದ್ದಾಗಿಯೂ ಹೇಳಿದ್ದ.

ಇದಕ್ಕಿಂತ ಅಪಾಯಕಾರಿಯಾದ ಇನ್ನೊಂದು ಅಂಶ ಯಾವುದೆಂದರೆ ಬಡ ಕುಟುಂಬಗಳು ಕೂಡ ಮೌಲ್ವಿಗಳ ಇಂತಹ ಕತೆಗಳನ್ನು ನಂಬಿ ತಮ್ಮ ವಂಶದ ಕುಡಿಗಳನ್ನೇ ಮೂಲಭೂತ ವಾದಿಗಳಿಗೆ 'ಕೊಡು'ವುದು. ಹೀಗೆ ಕೊಡುವುದಕ್ಕಾಗಿ ಆ ಬಡ ಕುಟುಂಬ ಗಳಿಗೆ ಮೂಲಭೂತವಾದಿಗಳು ಹಣವನ್ನು ಕೊಡುತ್ತಾರಲ್ಲದೆ, ಅವರ ಇಡೀ ಕುಟುಂಬಕ್ಕೆ 'ಸ್ವರ್ಗ'ದಲ್ಲಿ ಜಾಗವನ್ನು ಮುಂಚಿತವಾಗಿಯೇ 'ಬುಕ್' ಮಾಡಿಡುತ್ತಾರೆ. (ಈಗ ಮುಂಬೈ ಮೇಲಿನ ದಾಳಿಯಲ್ಲಿ ಭಾಗಿಯಾಗಿ ವಿಚಾರಣೆ ಎದುರಿಸುತ್ತಿರುವ ಕಸಬ್ ಎಂಬ ಭಯೋತ್ಪಾದಕ ಕೂಡ ಇಂತಹದ್ದೇ ಆರ್ಥಿಕ ಬಡತನ ಮತ್ತು ಧಾರ್ಮಿಕ ಮೌಢ್ಯದ ಹಿನ್ನೆಲೆ ಹೊಂದಿರುವುದು ಗಮನಾರ್ಹ.)

* * * * *

ಇತ್ತೀಚೆಗೆ ಪಾಕಿಸ್ತಾನದಲ್ಲೇ ಮುಸ್ಲಿಂ ಉಗ್ರರ ದಾಳಿಗಳು ಹೆಚ್ಚಾಗಿದ್ದು ಅವುಗಳಲ್ಲಿ ಹಲವಾರು ಆತ್ಮಾಹುತಿ ಬಾಂಬರ್‌ಗಳು ಸಾವನ್ನಪ್ಪಿದ್ದಾರೆ. ಒಂದೆಡೆ ಈ ನಕಲಿ 'ಸ್ವರ್ಗ'ವನ್ನು ಪತ್ತೆಹಚ್ಚಿರುವುದು, ಇನ್ನೊಂದೆಡೆ ಸೂಇಸೈಡ್ ಬಾಂಬರ್‌ಗಳ ದಾಳಿಗಳ ಸಂಖ್ಯೆ ಹೆಚ್ಚಾಗುತ್ತಿರುವುದು.... ಇವೆರಡನ್ನೂ ಹಿನ್ನೆಲೆಯಾಗಿಟ್ಟುಕೊಂಡು ಅದ್ಯಾರೋ ಸೃಷ್ಟಿಸಿರುವ ಹಾಸ್ಯ ಲೇಖನವೊಂದು ಇಂಟರ್‌ನೆಟ್ ಮೂಲಕ ಎಲ್ಲೆಡೆ ಹರಡುತ್ತಿದೆ. ಅದು ಬಹಳ ಮಜವಾಗಿರುವುದರಿಂದ ಅದನ್ನು ಅನುವಾದಿಸಿ ನೀಡುತ್ತಿದ್ದೇನೆ.

"ಬ್ರಿಟನ್‌ನಲ್ಲಿರುವ ಮುಸಲ್ಮಾನ ಸೂಇಸೈಡ್ ಬಾಂಬರ್‌ಗಳು ಬರುವ ಸೋಮವಾರದಿಂದ ಮೂರು ದಿನಗಳ ಮುಷ್ಕರವನ್ನು ಪ್ರಾರಂಭಿಸಲಿದ್ದಾರೆ. ಅವರ ಮುಷ್ಕರಕ್ಕೆ ಕಾರಣ: ಇಹಲೋಕದಲ್ಲಿ ಅವರಿಗೆ ಎಷ್ಟು ಜನ ಕನ್ಯೆಯರು ಸಿಗುತ್ತಾರೆ ಎಂಬುದನ್ನು ಕುರಿತಂತೆ ಎದ್ದಿರುವ ವಿವಾದ. ಈ ವಿವಾದವನ್ನು ಬಗೆಹರಿಸಲು ಅಲ್ ಕೈದಾದ ಆಡಳಿತಮಂಡಳಿ ಯೊಂದಿಗೆ ನಡೆಸಲಾದ ತುರ್ತು ಚರ್ಚೆಗಳೆಲ್ಲ ವಿಫಲವಾಗಿವೆ.

ಈ ವಿವಾದ ಶುರುವಾಗಿದ್ದು ಕಳೆದ ಮಂಗಳವಾರ ದಂದು. ಅಂದು ಅಲ್ ಕೈದಾದ ಆಡಳಿತ ಮಂಡಳಿಯು ಒಂದು ನೂತನ ನಿರ್ಧಾರವನ್ನು ಪ್ರಕಟಿಸಿತು. ಆ ನಿರ್ಧಾರದ ಪ್ರಕಾರ ಬರುವ ಜನವರಿಯಿಂದ ಪ್ರತಿ ಆತ್ಮಾಹುತಿ ಬಾಂಬರ್‌ಗೆ ಇಹಲೋಕದಲ್ಲಿ ಸಿಗಲಿರುವ ಕನ್ಯೆಯರಲ್ಲಿ ಶೇ. 25 ಅನ್ನು ಕಡಿತಗೊಳಿಸಲಾಗುವುದು. ಅದರಂತೆ ಇನ್ನು ಮುಂದೆ ಪ್ರತಿ ಸೂಇಸೈಡ್ ಬಾಂಬರ್‌ಗೆ 'ಸ್ವರ್ಗ'ದಲ್ಲಿ 72 ಕನ್ಯೆಯರ ಬದಲಾಗಿ ಕೇವಲ 60 ಕನ್ಯೆಯರು ಮಾತ್ರ ಲಭ್ಯವಿರುತ್ತಾರೆ. ಈ ನಿರ್ಧಾರಕ್ಕೆ ಅಲ್ ಕೈದಾದ ಆಡಳಿತ ಮಂಡಳಿ ನೀಡಿದ ಕಾರಣ: ಇತ್ತೀಚೆಗೆ ಆತ್ಮಾಹುತಿ ಬಾಂಬರ್‌ಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಇಹಲೋಕದಲ್ಲಿ ಕನ್ಯೆಯರ ಸಂಖ್ಯೆಯಲ್ಲಿ ಕೊರತೆ ಉಂಟಾಗಿರುವುದು.

ಆದರೆ ಭಾವಿ ಆತ್ಮಾಹುತಿ ಬಾಂಬರ್‌ಗಳ ಸಂಘಟನೆ ಯಾದ 'ವೃತ್ತಿನಿರತ ಹುತಾತ್ಮರ ಬ್ರಿಟಿಷ್ ಸಂಘಟನೆ' ಈ ನಿರ್ಧಾರವನ್ನು ಪ್ರತಿಭಟಿಸಿ, ಈ ಅನ್ಯಾಯದ ವಿರುದ್ಧ ತಕ್ಷಣವೇ ಮುಷ್ಕರವನ್ನು ಘೋಷಿಸಿತು. ವೃತ್ತಿನಿರತ ಹುತಾತ್ಮರ ಸಂಘಟನೆಯ ಪ್ರಧಾನ ಕಾರ್ಯದರ್ಶಿಯಾದ ಅಬ್ದುಲ್ಲಾ ಆಮೀರ್‌ರವರು "ನಮ್ಮ ಸಂಘಟನೆಯ ಸದಸ್ಯರು ಜಿಹಾದ್‌ಗಾಗಿ ತಮ್ಮ ಪ್ರಾಣವನ್ನೇ ಬಲಿಕೊಡಲು ಸಿದ್ಧರಿದ್ದಾರೆ. ಅದಕ್ಕಾಗಿ ನಾವು ಆಡಳಿತ ಮಂಡಳಿಯಿಂದ ಈ ಲೋಕದಲ್ಲಿ ಹೆಚ್ಚಿನದ್ದನ್ನು ನಿರೀಕ್ಷಿಸುವುದಿಲ್ಲ, ಆದರೆ ಇಹಲೋಕದಲ್ಲೂ ಇಂತಹ ಅನ್ಯಾಯವನ್ನು ಸಹಿಸುವುದಿಲ್ಲ" ಎಂದು ಪತ್ರಿಕೆಗಳಿಗೆ ತಿಳಿಸಿದರು.

ಇಹಲೋಕದಲ್ಲಿ ಕನ್ಯೆಯರ ಕೊರತೆ ಉಂಟಾಗಿರುವು ದನ್ನು ಒಪ್ಪಿಕೊಂಡ ಆಮೀರ್‌ರವರು ಆ ನಷ್ಟವನ್ನು ಆಡಳಿತ ಮಂಡಳಿ ಭರಿಸಬೇಕೇ ಹೊರತು ಕಾರ್ಮಿಕರನ್ನು ದಂಡಿಸಬಾರದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. "ಕಳೆದ ವರ್ಷ ಸೂಇಸೈಡ್ ಬಾಂಬರ್ ಆಗಿ ಹುತಾತ್ಮರಾದ ಅಬು ಹಂಜಾ ಒಬ್ಬನಿಗೇ 2,50,000 ಕನ್ಯೆಯರನ್ನು ಬೋನಸ್ ಆಗಿ ಮಂಡಳಿ ಘೋಷಿಸಿತು. ಆ ಎರಡೂವರೆ ಲಕ್ಷ ಕನ್ಯೆಯರೆಲ್ಲರೂ ತ್ರಿಪುರ ಸುಂದರಿಯರೇ ಆಗಿರುತ್ತಾ ರೆಂಬುದರ ಬಗ್ಗೆ ಯಾವ ಅನುಮಾನವೂ ಇಲ್ಲ. ಆಡಳಿತ ಮಂಡಳಿಯ ಸದಸ್ಯನಾಗಿದ್ದ ಅಬು ಹಂಜಾನಿಗೆ ಅಂತಹ ಬೋನಸ್‌ಅನ್ನು ಘೋಷಿಸುವ ಅಲ್ ಕೈದಾ ತನ್ನ ಸಾಮಾನ್ಯ ಸದಸ್ಯರಿಗೆ 72 ಕನ್ಯೆಯರನ್ನೂ ನೀಡಲಾಗುವುದಿಲ್ಲ ಎಂದರೆ ಇದೆಂತಹ ನ್ಯಾಯ?" ಎಂದೂ ಆಮೀರ್ ಪ್ರಶ್ನಿಸಿದರು.

ಈಗ ಪಶ್ಚಿಮ ಮಧ್ಯಭಾಗದಲ್ಲಿ ಶೆಡ್ ಒಂದರಲ್ಲಿ ವಾಸಿಸುತ್ತಿರುವ ಅಲ್ ಕೈದಾದ ಮುಖ್ಯ ಕಾರ್ಯನಿರ್ವಾಹಕ



ಒಸಾಮಾ ಬಿನ್ ಲಾಡೆನ್ "ನಮ್ಮ ಕಾರ್ಮಿಕರ ಆತಂಕ ಮತ್ತು ಪರಿಸ್ಥಿತಿಯ ಬಗ್ಗೆ ನಮಗೆ ಅನುಕಂಪ ಇದೆ. ಆದರೆ ಅವರ ಬೇಡಿಕೆಗಳನ್ನು ಈಡೇರಿಸುವ ಪರಿಸ್ಥಿತಿಯಲ್ಲಿ ಅಲ್‌ಕೈದಾ ಈಗಿಲ್ಲ. ಇವತ್ತು ಆತ್ಮಾಹುತಿ ಬಾಂಬರ್‌ಗಳ ನಡುವೆ ಮುಕ್ತ ಮಾರುಕಟ್ಟೆಯಲ್ಲಿ ದೊಡ್ಡ ಪೈಪೋಟಿ ಇರುವುದರಿಂದ ಆಧುನಿಕ ಜಿಹಾದ್‌ನ ವಸ್ತುಸ್ಥಿತಿಗಳನ್ನು ಕಾರ್ಮಿಕರು ಅರ್ಥ ಮಾಡಿಕೊಳ್ಳುತ್ತಿಲ್ಲ. ನೀತಿಗೆಟ್ಟ ಪಾಶ್ಚಿಮಾತ್ಯರ ಪ್ರಭಾವದಿಂದಾಗಿ ಇವತ್ತು ಇಹಲೋಕದಲ್ಲಿ ಕನ್ಯೆಯರು ಸಿಗುವುದೇ ಕಷ್ಟ ಸಾಧ್ಯವಾಗಿದೆ. ನಮ್ಮೆದುರಿಗೆ ಇರುವುದು ಎರಡೇ ಆಯ್ಕೆಗಳು. ಒಂದು, ಸೂಇಸೈಡ್ ಬಾಂಬರ್‌ಗಳ 'ಆದಾಯ'ವನ್ನು ಕಡಿಮೆ ಮಾಡುವುದು. ಇನ್ನೊಂದು ಕಾರ್ಮಿಕರ ಸಂಖ್ಯೆಯನ್ನೇ ಕಡಿತಗೊಳಿಸುವುದು. ಆದರೆ ಈಗ 'ಆದಾಯ'ದಲ್ಲಿ ಕೊರತೆ ಉಂಟಾಗಿರುವುದರಿಂದ ನನ್ನ ಕಾರ್ಮಿಕರಲ್ಲಿ 3000 ಜನರಿಗೆ



ಕಂಡಹಾಗೆ

■ ಗೌರಿ ಲಂಕೇಶ್

ನೀವು ಸೂಇಸೈಡ್ ಬಾಂಬರ್‌ಗಳಾಗುವ ಸಾಧ್ಯತೆ ಇಲ್ಲ ಎಂದು ಹೇಳುವ ಆಶಯ ನನಗಿಲ್ಲ" ಎಂದರು. ಆಡಳಿತ ಮಂಡಳಿಯ ಸದಸ್ಯರಿಗೆ ಸ್ವರ್ಗದಲ್ಲಿ ಬೋನಸ್ ಕನ್ಯೆಯರನ್ನು ನೀಡಿರುವುದನ್ನು ಸಮರ್ಥಿಸಿಕೊಂಡ ಬಿನ್-ಲಾಡೆನ್ "ಅಷ್ಟೂ ಮಾಡದಿದ್ದರೆ ಅತ್ಯುತ್ತಮ ಮೂಲಭೂತವಾದಿ ಮೌಲ್ವಿಗಳನ್ನು ನಮ್ಮ ಸಂಘಟನೆಗೆ ಆಕರ್ಷಿಸುವುದು ಹೇಗೆ?" ಎಂದು ಪ್ರಶ್ನಿಸಿದ್ದಾನೆ.

ಈ ವಾರದ ಅಂತ್ಯದೊಳಗೆ ಅಲ್‌ಕೈದಾದ ಆಡಳಿತ ಮಂಡಳಿ ಮತ್ತು ಭಾವಿ ಸೂಇಸೈಡ್ ಬಾಂಬರ್‌ಗಳ ಸಂಘಟನೆ ನಡುವೆ ಒಪ್ಪಂದ ಏರ್ಪಾಡಾಗದಿದ್ದರೆ ಮುಷ್ಕರ ಅನಿವಾರ್ಯವಾಗುತ್ತದೆ."

* * * * *

ತಮಾಷೆಯೆಲ್ಲ ಬದಿಗಿರಲಿ. ವಾಸ್ತವವಾಗಿ ಎಲ್ಲ ಧರ್ಮಗಳಂತೆ ಇಸ್ಲಾಂನಲ್ಲೂ ಸಜ್ಜನರಿಗೆ ಸ್ವರ್ಗ, ದುರ್ಜನರಿಗೆ ನರಕ ಎಂಬ ನೀತಿ ಇದೆ. ಅಷ್ಟೇ ಅಲ್ಲದೇ ಆತ್ಮಹತ್ಯೆ ಕೃತ್ಯವನ್ನು ಇಸ್ಲಾಂ ಖಡಾಖಂಡಿತವಾಗಿ ನಿರ್ಬಂಧಿಸು ತ್ತದೆ. ಆ ಧರ್ಮದ ಪ್ರಕಾರ ದೇವರ ಮೇಲೆ ವಿಶ್ವಾಸ ಇಲ್ಲದವರು ಮಾತ್ರ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇದಕ್ಕಿಂತ ಮುಖ್ಯವಾಗಿ ಒಂದು ಇರುವೆಯನ್ನೂ ಕೊಲ್ಲದಷ್ಟು ಸೂಕ್ಷ್ಮತೆಯನ್ನು ಬೆಳೆಸಿಕೊಳ್ಳಬೇಕೆಂದು ಇಸ್ಲಾಂ ಧರ್ಮ ಪ್ರತಿಪಾದಿಸುತ್ತದೆ. ಹೀಗಾಗಿ ಆತ್ಮಾ ಹುತಿ ಬಾಂಬರ್‌ಗಳಾಗಿ ಅಮಾಯಕರನ್ನು ಕೊಲ್ಲುವ ವರು ಇಸ್ಲಾಂ ಧರ್ಮಕ್ಕೆ ವಿರುದ್ಧವಾಗಿ ನಡೆದುಕೊಳ್ಳು ವವರು ಎಂದೇ ಹೇಳಬಹುದು. ದಾವಣಗೆರೆಯ ಮಸೀದಿಯೊಂದರಲ್ಲಿ ಗುರುಗಳಾಗಿರುವ ಇಬ್ರಾಹಿಂ ಸಕಾಫಿ ಅವರು ನನಗೆ ಹೇಳಿದಂತೆ "ಇಸ್ಲಾಂ ಧರ್ಮ ಮಾನವೀಯತೆಗೆ ವಿರುದ್ಧವಾದ ಯಾವುದನ್ನೂ ಒಪ್ಪುವು ದಿಲ್ಲ." ಇದನ್ನೆಲ್ಲ ಹೇಳಿದ್ದಕ್ಕೆ ಕಾರಣ: ಧರ್ಮದ ಹೆಸರಿನಲ್ಲಿ ನಂಜು ತುಂಬಿಕೊಂಡು ಗಾಂಧಿ ಎಂಬ ಮಹಾತ್ಮನನ್ನೇ ಕೊಂದವರಿಗೂ, ವರ್ಲ್ಡ್ ಟ್ರೇಡ್ ಸೆಂಟರ್ ಮೇಲೆ ದಾಳಿ ಮಾಡಿ ಅದರಲ್ಲಿದ್ದ ಸಾವಿರಾರು ಜನರನ್ನು ಕೊಂದವರಿಗೂ ವ್ಯತ್ಯಾಸವಿಲ್ಲ. ಹಾಗೆಯೇ ಧರ್ಮದ ಹೆಸರಲ್ಲಿ ಗುಜರಾತಿನಲ್ಲಿ ಅಮಾಯಕರನ್ನು ಕೊಂದು ಹಾಕಿದ, ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದ ಹಿಂದುತ್ವವಾದಿಗಳಿಗೂ, ಬಡ ಯುವಕರಿಗೆ ಸ್ವರ್ಗದ ಆಮಿಷ ತೋರಿಸಿ ಅವರನ್ನು ಸೂಇಸೈಡ್ ಬಾಂಬರ್‌ಗಳಾಗಿ ಮಾಡಿ ಅಮಾಯಕರನ್ನು ಬಲಿ ತೆಗೆದುಕೊಳ್ಳುವ ತಾಲಿಬಾನ್‌ಗಳಿಗೂ ಕಿಂಚಿತ್ತೂ ಅಂತರವಿಲ್ಲ. ಹೆಚ್ಚೆಂದರೆ ಇವರೆಲ್ಲ ಮನುಷ್ಯ ವೇಷದಲ್ಲಿರುವ ಮಾನವೀಯತೆಯನ್ನೇ ಕಳೆದುಕೊಂಡ ಪಿಶಾಚಿಗಳು.... ●



ಇದು ಎಂಥ ಆತ್ಮಸ್ಥೈರ್ಯ ತುಂಬುವ ಕೆಲಸ?

ಕಾನೂನು ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿ ಹೊತ್ತಿರುವ ಪೊಲೀಸರು, ದೇಶದ ಗಡಿರಕ್ಷಣೆಗೆ ನಿಂತಿರುವ ಸೈನಿಕರು ತಮ್ಮ ಕರ್ತವ್ಯವನ್ನು ಮರೆತು ಆಗಾಗ್ಗೆ ಜನಸಾಮಾನ್ಯರ ಮೇಲೆ ದಾಳಿಗಿಳಿಯುವುದುಂಟು. ಅಂಥ ಸಂದರ್ಭಗಳಲ್ಲಿ ಉನ್ನತ ಅಧಿಕಾರಿಗಳು, ಮಂತ್ರಿ ಮಹೋದಯರು ಸಾಮಾನ್ಯವಾಗಿ ಜನಸಾಮಾನ್ಯರ ಮೇಲೆ ಹಲ್ಲೆ ನಡೆಸಿದವರ ಪರವಾಗಿಯೇ ನಿಲ್ಲುತ್ತಾರೆ. ಇದಕ್ಕೆ ಅವರು ಕೊಡುವ ಕಾರಣ ಏನೆಂದರೆ ಅಪರಾಧ ಎಸಗಿದ ಪೊಲೀಸರು ಮತ್ತು ಸೈನಿಕರ ಮೇಲೆ ಶಿಸ್ತುಕ್ರಮ ಕೈಗೊಂಡರೆ, ಕಾನೂನಿನ ಪ್ರಕಾರ ಶಿಕ್ಷೆಗೊಳಪಡಿಸಿದರೆ ಉಳಿದ ಪೊಲೀಸರಲ್ಲಿ, ಸೈನಿಕರಲ್ಲಿ ಆತ್ಮಸ್ಥೈರ್ಯ ಕುಗ್ಗುತ್ತದೆ, ಇದರಿಂದ ಅವರು ಉತ್ಸಾಹದಿಂದ ಕೆಲಸ ಮಾಡುವುದಕ್ಕೆ ಆಗುವುದಿಲ್ಲ, ಆಗ ದೇಶದ ಕಾನೂನು ಸುವ್ಯವಸ್ಥೆಯೇ ಹದಗೆಟ್ಟು, ಆಡಳಿತ ನಡೆಸುವುದೇ ದುಸ್ತರವಾಗುತ್ತದೆ ಎಂಬುದು.


ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟಿಸುವ ರೈತರ ಮೇಲೆ, ಕಾರ್ಮಿಕರ ಮೇಲೆ, ಸಮಾಜದ ಇನ್ನಿತರ ಜನವರ್ಗಗಳ ಮೇಲೆ ಪೊಲೀಸರು ವಿನಾಃ ಕಾರಣ ಲಾಠಿಚಾರ್ಜು ನಡೆಸಿದರೂ ಅದಕ್ಕೆ ಕಾರಣವಾದ ಯಾವೊಬ್ಬ ಅಧಿಕಾರಿಯನ್ನೂ ಶಿಕ್ಷೆಗೊಳಪಡಿಸುವುದಿಲ್ಲ, ಅಮಾಯಕ ಆದಿವಾಸಿಗಳಿಗೆ 'ನಕ್ಸಲೀಯ' ಎಂಬ ಹಣೆಪಟ್ಟಿ ಹಚ್ಚಿ ಪಾಯಿಂಟ್ ಬ್ಲಾಂಕ್ ರೇಂಜಿನಲ್ಲಿ ಕೊಂದು ಹಾಕಿದರೂ ಅದನ್ನು ಹಿರಿಯ ಪೊಲೀಸ್ ಅಧಿಕಾರಿಗಳು ಸಮರ್ಥಿಸಿಕೊಳ್ಳುತ್ತಾರೆ. ಹೀಗೆ, ಹಿರಿಯ ಅಧಿಕಾರಿಗಳು ಮತ್ತು ಆಡಳಿತ ನಡೆಸುವ ಮಂತ್ರಿಮಹೋದಯರೇ ತಮ್ಮ ಬೆನ್ನಿಗೆ ನಿಂತಿರುವುದರಿಂದ ಜನಸಾಮಾನ್ಯರ ಮೇಲೆ ಪೊಲೀಸರ ಮತ್ತು ಸೈನಿಕರ ಆಕ್ರಮಣಗಳಿಗೆ ಉತ್ತೇಜನ ಸಿಕ್ಕಂತಾಗಿ ಅವು ಅವ್ಯಾಹತವಾಗಿ ಮುಂದುವರೆಯುತ್ತಿವೆ. ಸರ್ಕಾರ ಅಪರಾಧ ಎಸಗಿದ ಸೈನಿಕರನ್ನು, ಪೊಲೀಸರನ್ನು ಹೇಗೆ ರಕ್ಷಿಸುತ್ತದೆ ಎಂಬುದಕ್ಕೆ ಇತ್ತೀಚಿನ ಉದಾಹರಣೆ ಎಂದರೆ ಕಾಶ್ಮೀರದ ಶೋಪಿಯಾನ್ ರೇಪ್ ಮತ್ತು ಮರ್ಡರ್ ಪ್ರಕರಣ.



ನಿಮಗೆ ನೆನಪಿರಬಹುದು, ಇದೇ ವರ್ಷದ ಮೇ 30ರಂದು ಕಾಶ್ಮೀರದ ಶೋಪಿಯಾನ್ ಪ್ರದೇಶದಲ್ಲಿ ಇಪ್ಪತ್ತೆರಡು ವರ್ಷದ ನಿಲೋಫರ್ ಜಾನ್ ಮತ್ತು ಆಕೆಯ ಹದಿನೇಳು ವರ್ಷದ ನಾದಿನಿ ಆಸಿಯ ಜಾನ್ ಅವರ ಮೃತದೇಹಗಳು ಒಂದು ತೊರೆಯ ಪಕ್ಕದಲ್ಲಿ ಪತ್ತೆಯಾಗಿದ್ದವು. ವಾಸ್ತವದಲ್ಲಿ ಅದರ ಹಿಂದಿನ ದಿನ ಸಂಜೆ ಅವರಿಬ್ಬರೂ ತಮ್ಮ ತೋಟದಲ್ಲಿ ಕೆಲಸ ಮುಗಿಸಿಕೊಂಡು ಮನೆಗೆ ಹಿಂತಿರುಗುತ್ತಿದ್ದಾಗ ಭಾರತೀಯ ರಕ್ಷಣಾ ಪಡೆಗಳ ಅಧಿಕಾರಿಗಳು ಅವರನ್ನು ಅಪಹರಿಸಿ, ಅವರ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ, ತಮ್ಮ ಅಪರಾಧ ಬಯಲಿಗೆ ಬಾರದಂತೆ ತಡೆಯುವುದಕ್ಕಾಗಿ ಅವರನ್ನು ಕೊಂದು ಬೊಂಗಾಮ್ ಎಂಬಲ್ಲಿದ್ದ ಒಂದು ತೊರೆಯ ಪಕ್ಕ ಮೃತ ದೇಹಗಳನ್ನು ಎಸೆದುಹೋಗಿದ್ದರು. ಸೈನಿಕರು, ಮಿಲಿಟರಿ ಅಧಿಕಾರಿಗಳು ಸ್ಥಳೀಯರ ಮೇಲೆ ಈಗಾಗಲೇ ಇಂಥ ಅನೇಕ ಅತ್ಯಾಚಾರ ಮತ್ತು ಕೊಲೆಗಳನ್ನು ಮಾಡಿರುವುದರಿಂದ ಈ ಕೃತ್ಯವನ್ನೂ ಅವರೇ ಮಾಡಿದ್ದಾರೆಂದು ಊಹಿಸುವುದಕ್ಕೆ ಕಾಶ್ಮೀರಿಗಳಿಗೆ ಕಷ್ಟವಾಗಲಿಲ್ಲ. ಹೀಗಾಗಿ, ಬೆಳಗ್ಗೆ ಮೃತದೇಹಗಳು ಸಿಗುತ್ತಿದ್ದಂತೆಯೇ ಭಾರತೀಯ ರಕ್ಷಣಾ ಪಡೆಗಳ ವಿರುದ್ಧ ಶೋಪಿಯನ್ ಪ್ರದೇಶದಾದ್ಯಂತ ಭಾರಿ ಪ್ರತಿಭಟನೆಗಳು ಭುಗಿಲೆದ್ದವು. ಕೆಲವೇ ಸಮಯದಲ್ಲಿ ಈ ಪ್ರತಿಭಟನೆಗಳು ಹಿಂಸಾತ್ಮಕ ಸ್ವರೂಪ ಪಡೆದು ಕಾಶ್ಮೀರದಾದ್ಯಂತ ವಿಸ್ತರಿಸಿದವು. ಶೋಪಿಯನ್ ಪಟ್ಟಣವಂತೂ 47 ದಿನಗಳ ಕಾಲ ಅಕ್ಷರಶಃ ಬಂದ್ ಆಗಿತ್ತೆಂದರೆ ಭಾರತೀಯ ಪಡೆಗಳ ವಿರುದ್ಧ ಕಾಶ್ಮೀರಿಗಳಲ್ಲಿ ಅದೆಂಥ ಸಿಟ್ಟು ಮಡುಗಟ್ಟಿದೆಯೆಂಬುದು ಅರ್ಥವಾಗುತ್ತದೆ. ಇಷ್ಟೆಲ್ಲಾ ಆದರೂ ಕಾಶ್ಮೀರ ಸರ್ಕಾರ, ಪೊಲೀಸರು, ಮಿಲಿಟರಿ ಅಧಿಕಾರಿಗಳು 'ಅದು ಕೊಲೆಯಲ್ಲ, ಅವರಿಬ್ಬರೂ ನೀರಿನಲ್ಲಿ ಮುಳುಗಿ ಸತ್ತಿದ್ದಾರೆ' ಎಂದೇ ವಾದಿಸುತ್ತಿದ್ದರು.

ಆದರೆ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಮೂವರು ನುರಿತ ವೈದ್ಯರು ನಡೆಸಿದ ಮೊದಲ ಮರಣೋತ್ತರ ಪರೀಕ್ಷೆಯಲ್ಲಿಯೇ ಅತ್ಯಾಚಾರವೆಸಗಿರುವುದು ದೃಢಪಟ್ಟಿತು. ಆದರೆ ಪೊಲೀಸರು ವೈದ್ಯರ ಮೇಲೆ ಒತ್ತಡ ತಂದು ತಮಗೆ ಬೇಕಾದಂತೆ ವರದಿ ತಯಾರಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಇದು ಜನರಿಗೆ ಗೊತ್ತಾಗುತ್ತಿದ್ದಂತೆಯೇ ಕಾಶ್ಮೀರ ಕಣಿವೆಯಲ್ಲಿ ಪ್ರತಿಭಟನೆಗಳು ಉಗ್ರರೂಪ ಪಡೆದವು. ಮೃತದೇಹಗಳನ್ನು ಇಟ್ಟಿದ್ದ ಜಿಲ್ಲಾ ಆಸ್ಪತ್ರೆಯ ಕಿಟಕಿ, ಬಾಗಿಲುಗಳು ನುಚ್ಚುನೂರಾದವು. ಜನರ ಒತ್ತಡಕ್ಕೆ ಮಣಿದು ಎರಡನೇ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಆದರೆ ಅದರಲ್ಲಿ ಅತ್ಯಾಚಾರವಾಗಿರುವುದನ್ನು ನಿರಾಕರಿಸಲಾಯಿತು. ಆಗ ಮರು ಮರಣೋತ್ತರ ಪರೀಕ್ಷೆಯಲ್ಲಿ ಪಾಲ್ಗೊಂಡಿದ್ದ ಮಹಿಳಾ ವೈದ್ಯೆಯೊಬ್ಬಳಿಗೆ ಪವಿತ್ರ ಖುರಾನ್ ಮುಟ್ಟಿ ಪ್ರಮಾಣ ಮಾಡಿ ಹೇಳು ಎಂದು ಸ್ಥಳೀಯರು ಆಗ್ರಹಿಸಿದಾಗ ಆಕೆ ಖುರಾನ್ ಮುಟ್ಟಿ ಅತ್ಯಾಚಾರವಾಗಿದೆ ಎಂದು ಒಪ್ಪಿಕೊಂಡಳು!

ಯಾವಾಗ ಕಣಿವೆಯಲ್ಲಿ ಪ್ರತಿಭಟನೆಗಳು ಹಿಂಸಾತ್ಮಕ ಸ್ವರೂಪ ಪಡೆದು ಸರ್ಕಾರದ ಬುಡವನ್ನೇ ಅಲ್ಲಾಡಿಸತೊಡಗಿತೋ ಆಗ ಜಮ್ಮು-ಕಾಶ್ಮೀರ ಸರ್ಕಾರ ಈ ಪ್ರಕರಣ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಏಕಸದಸ್ಯ ಆಯೋಗವೊಂದನ್ನು ರಚಿಸಿತು. ಪ್ರಕರಣವನ್ನು ಕೂಲಂಕಶವಾಗಿ ಅಧ್ಯಯನ ಮಾಡಿದ ಆಯೋಗವು ರೇಪ್ ಆಗಿದ್ದು ನಿಜ ಎಂಬ ಅಭಿಪ್ರಾಯಕ್ಕೆ ಬಂತು. ಅಲ್ಲದೇ ರೇಪ್ ಮತ್ತು ಹತ್ಯೆಯನ್ನು ಮುಚ್ಚಿಹಾಕುವುದಕ್ಕಾಗಿ ನಾಲ್ವರು ಪೊಲೀಸ್ ಅಧಿಕಾರಿಗಳು ಪ್ರಯತ್ನಿಸಿದ್ದಾರೆಂದು ಅವರ ಹೆಸರನ್ನೂ ಉಲ್ಲೇಖಿಸಿತು. ತಕ್ಷಣವೇ ರಾಜ್ಯ ಸರ್ಕಾರ ವಿಧಿಯಿಲ್ಲದೇ ಆ ನಾಲ್ಕು ಅಧಿಕಾರಿಗಳನ್ನು ಅಮಾನತ್ತುಗೊಳಿಸಿ ಬಂಧಿಸಿತು. ಆನಂತರ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲಾಯಿತು.



▸▸ ಕುಮಾರ್ ಬುರಡಿಕಟ್ಟಿ

ಈಗ್ಗೆ ಎರಡು ದಿನಗಳ ಹಿಂದೆ ಸಿಬಿಐ ಕೂಡ ತನ್ನ 66 ಪುಟಗಳ ವರದಿ ಕೊಟ್ಟಿದೆ. ಅದರಲ್ಲಿ ಆ ಮಹಿಳೆಯರ ಮೇಲೆ ಯಾವುದೇ ಅತ್ಯಾಚಾರ ಆಗಿಲ್ಲ, ಅದು ಕೊಲೆಯೂ ಅಲ್ಲ, ಅವರು ನೀರಿನಲ್ಲಿ ಮುಳುಗಿ ಸತ್ತಿದ್ದಾರೆಂದು ಹೇಳಿದೆ!

ಸಿಬಿಐ ಇಂಥ ದೋಷಪೂರಿತ, ಸುಳ್ಳುಗಳಿಂದ ಕೂಡಿದ ವರದಿ ಕೊಡುವುದರ ಹಿಂದೆಯೂ 'ಸೈನಿಕರ, ಪೊಲೀಸರ ಮನೋಸ್ಥೈರ್ಯ' ಕಾಪಾಡುವ ಉದ್ದೇಶವೇ ಅಡಗಿರುವುದರಲ್ಲಿ ಯಾವುದೇ ಅನುಮಾನವಿಲ್ಲ, ತನಿಖಾ ತಂಡದ ಮೇಲೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಹಿರಿಯ ಪೊಲೀಸ್ ಮತ್ತು ಮಿಲಿಟರಿ ಅಧಿಕಾರಿಗಳ ಒತ್ತಡ ಇದ್ದೇ ಇರುತ್ತದೆ. ಸರ್ಕಾರದ ಮತ್ತು ಹಿರಿಯ ಅಧಿಕಾರಿಗಳ ಇಂತಹ ಕ್ರಮಗಳು ಪೊಲೀಸರ ಮತ್ತು ಸೈನಿಕರ ಮನೋಸ್ಥೈರ್ಯವನ್ನು ಖಂಡಿತವಾಗಿಯೂ ಹೆಚ್ಚಿಸುತ್ತವೆ. ಆದರೆ ಯಾವ ರೀತಿಯಲ್ಲಿ? ಇಂಥ ಘೋರ ಅಪರಾಧವನ್ನೆಸಗಿದರೂ ಉನ್ನತ ಅಧಿಕಾರಿಗಳು, ಸರ್ಕಾರ ತಮ್ಮನ್ನು ರಕ್ಷಿಸುತ್ತದೆ ಎಂದಾದರೆ ಇಂತಹುದೇ ಅಥವಾ ಇದಕ್ಕಿಂತಲೂ ಘೋರವಾದ ಅಪರಾಧ ಎಸಗುವುದಕ್ಕೆ ಮನೋಸ್ಥೈರ್ಯ ಬರುತ್ತದೆಯೇ ಹೊರತು ನ್ಯಾಯಬದ್ಧವಾಗಿ ಕರ್ತವ್ಯ ಪಾಲನೆ ಮಾಡುವುದಕ್ಕಲ್ಲ. ದಿನೇ ದಿನೇ ಕಾನೂನು ರಕ್ಷಿಸಬೇಕಾದ ಪೊಲೀಸರು, ಸೈನಿಕರೇ ಖುದ್ದಾಗಿ ಅಪರಾಧ ಎಸಗುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿರುವುದು ಈ ಕಾರಣದಿಂದಲೇ. ●

ಎಂಥಾ ಜನಸ್ಪಂದನೆ!

ಪ್ರಿಟಾ ಮಲ್ಯಸಾರಿ ಎಂಬ ಎರಡು ಮಕ್ಕಳ ತಾಯಿ ಈಗ ಇಂಡೋನೇಷಿಯಾದಾದ್ಯಂತ ಮನೆಮಾತಾಗಿದ್ದಾಳೆ. ಆಕೆಯ ದುರಂತ ಕತೆಯನ್ನು ಕೇಳಿದ ಎಲ್ಲರೂ ಸಾಗರೋಪಾದಿಯಲ್ಲಿ ಆಕೆಯ ಬೆನ್ನಿಗೆ ನಿಂತಿರುವುದು ನಿಜಕ್ಕೂ ಆಶ್ಚರ್ಯ ಹುಟ್ಟಿಸುತ್ತದೆ.

ಕಳೆದ ವರ್ಷ ಆಗಸ್ಟ್‌ನಲ್ಲಿ ಪ್ರಿಟಾ ತನಗೆ ಆರೋಗ್ಯದ ಸಮಸ್ಯೆ ಎದುರಾದಾಗ ಓಮ್ನಿ ಇಂಟರ್‌ನ್ಯಾಷನಲ್ ಅಲ್ಮಾ ಸುತೇರ ಎಂಬ ಆಸ್ಪತ್ರೆಗೆ ದಾಖಲಾಗಿದ್ದಳು. ಅದು ಸುಪ್ರಸಿದ್ಧ ಆಸ್ಪತ್ರೆಯಾಗಿದ್ದರೂ ಅಲ್ಲಿ ಆಕೆಗೆ ಸರಿಯಾದ ಚಿಕಿತ್ಸೆಯೇ ದೊರೆಯಲಿಲ್ಲ, ಆಕೆಗೆ ಬಂದಿರುವ ರೋಗ ಒಂದಾದರೆ ವೈದ್ಯರು ಕೊಟ್ಟ ಚಿಕಿತ್ಸೆ, ಔಷಧಿ ಮತ್ತೊಂದಾಗಿತ್ತು.



ಹೀಗಾಗಿ ಎಷ್ಟು ದಿನ ಕಳೆದರೂ ಆಕೆಯ ಆರೋಗ್ಯ ಸಮಸ್ಯೆ ಮಾತ್ರ ಬಗೆಹರಿಯಲಿಲ್ಲ, ಕೊನೆಗೆ ಬೇಸತ್ತ ಪ್ರಿಟಾ ಬೇರೆ ಆಸ್ಪತ್ರೆಗೆ ಹೋಗಿ ಅಲ್ಲಿ ಸರಿಯಾದ ಚಿಕಿತ್ಸೆ ಪಡೆದು ತನ್ನ ಸಮಸ್ಯೆ ಬಗೆಹರಿಸಿಕೊಂಡಳು. ಮೊದಲನೇ ಆಸ್ಪತ್ರೆಯಲ್ಲಿ ವಿನಾಕಾರಣ ದುಡ್ಡು ಸುರಿದದ್ದು, ಅನವಶ್ಯಕವಾಗಿ ಸಮಯ ವ್ಯರ್ಥ ಮಾಡಿಕೊಂಡದ್ದು, ಆರೋಗ್ಯ ಹದಗೆಡಿಸಿಕೊಂಡದ್ದು, ಅನಗತ್ಯವಾಗಿ ಒತ್ತಡಕ್ಕೆ ಸಿಲುಕಿದ್ದು – ಎಲ್ಲವನ್ನೂ ವಿವರಿಸಿ ಆಕೆ ಈ-ಮೇಲ್ ಮೂಲಕ ತನ್ನ ಸ್ನೇಹಿತರಿಗೆ ಕಳಿಸಿದಳು. ಕೆಲವೇ ದಿನಗಳಲ್ಲಿ ಆ ಈ-ಮೇಲ್ ಸಾವಿರಾರು ಜನರನ್ನು ತಲುಪಿ ಆನ್‌ಲೈನ್‌ನಲ್ಲಿ ಅದೇ ದೊಡ್ಡ ಚರ್ಚಾ ವಿಷಯವಾಯಿತು. ಇದರಿಂದ ತಮ್ಮ ಆಸ್ಪತ್ರೆಯ ಗೌರವಕ್ಕೆ ಜನಪ್ರಿಯತೆಗೆ, ಬಿಸಿನೆಸ್‌ಗೆ ಧಕ್ಕೆಯಾಗಿದೆಯೆಂದು ಓಮ್ನಿ ಇಂಟರ್‌ನ್ಯಾಷನಲ್ ಅಲ್ಮಾ ಸುತೇರ ಆಸ್ಪತ್ರೆಯ ಮಾಲೀಕರು ಪ್ರಿಟಾ ವಿರುದ್ಧ ದೂರು ದಾಖಲಿಸಿದರು. ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿ ಪ್ರಿಟಾ ತಪ್ಪಿತಸ್ಥಳೆಂದು ತೀರ್ಪು ಹೊರಬಂತು. ಅವಳ ಇಬ್ಬರು ಮಕ್ಕಳಲ್ಲಿ ಕೊನೆಯದು ಇನ್ನೂ ಹಾಲು ಕುಡಿಯುವ ಹಸುಳೆಯಾಗಿದ್ದರೂ ಯಾವ ಕನಿಕರವನ್ನೂ ತೋರದೆ ಆಕೆಯನ್ನು ಜೈಲಿಗಟ್ಟಲಾಯಿತು. ಅಲ್ಲದೇ 204 ಮಿಲಿಯನ್ ಇಂಡೋನೇಷಿಯನ್ ರುಪಯ್ಯಗಳನ್ನು (ಸುಮಾರು ಹತ್ತು ಲಕ್ಷ ರೂಪಾಯಿ) ದಂಡವಾಗಿ ಪಾವತಿಸಬೇಕೆಂದೂ ನ್ಯಾಯಾಲಯ ಆದೇಶಿಸಿತು.

ವಾಸ್ತವದಲ್ಲಿ ಇದು ಪ್ರಿಟಾಗೆ ಮಾಡಿದ ಅನ್ಯಾಯವಲ್ಲದೇ ಮತ್ತೇನಲ್ಲ. ದುಡ್ಡು ಪಡೆದೂ ಸರಿಯಾದ ಚಿಕಿತ್ಸೆ ಕೊಡದೇ ಆಕೆಯ ಸಮಯ, ಆರೋಗ್ಯ, ಹಣ ವ್ಯರ್ಥ ಮಾಡಿದ ಓಮ್ನಿ ಆಸ್ಪತ್ರೆಗೇ ದಂಡ ವಿಧಿಸಿ ಅದರ ಮುಖ್ಯಸ್ಥರನ್ನು ಜೈಲಿಗೆ ತಳ್ಳಬೇಕಿತ್ತು, ಆದರೆ ಅಲ್ಲಿನ ನ್ಯಾಯಾಲಯ ಆಸ್ಪತ್ರೆಯ ಮಾಲಿಕರ ಹಿತಾಸಕ್ತಿ ಕಾಯುವುದಕ್ಕಾಗಿ ಬಲಿಪಶುವನ್ನೇ ಶಿಕ್ಷೆಗೊಳಪಡಿಸಿದ್ದಾರೆ.

ಪ್ರಿಟಾಗೆ ಆದ ಅನ್ಯಾಯವನ್ನು ಇಂಡೋನೇಶ್ಯಾದಾದ್ಯಂತ ಜನರು ತಮಗೆ ಆದ ಅನ್ಯಾಯವೆಂದು ಪರಿಗಣಿಸಿ ಆಕೆಯ ದಂಡದ ಹಣ ಕಟ್ಟುವುದಕ್ಕಾಗಿ ದೇಣಿಗೆ ಸಂಗ್ರಹಿಸಲಾರಂಭಿಸಿದ್ದಾರೆ. ಅವರು ಜನರಿಂದ ಹೆಚ್ಚು ಮೊತ್ತದ ನೋಟುಗಳನ್ನು ಸ್ವೀಕರಿಸುತ್ತಿಲ್ಲ, ಬದಲಿಗೆ ಯಾರಿಗೂ ಹೊರೆಯಾಗದಿರಲೆಂದು ಸಣ್ಣ ಮುಖಬೆಲೆಯುಳ್ಳ ನಾಣ್ಯಗಳನ್ನೇ ಸಂಗ್ರಹಿಸುತ್ತಿದ್ದಾರೆ. ಈ ಜನಸ್ಪಂದನೆ ಎಷ್ಟೊಂದು ದೊಡ್ಡ ಮಟ್ಟದಲ್ಲಿ ವ್ಯಕ್ತವಾಗುತ್ತಿದೆಯೆಂದರೆ ದೇಣಿಗೆ ಕಟ್ಟುವುದು, ನಾಣ್ಯಗಳನ್ನು ಸಂಗ್ರಹಿಸುವುದು ಒಂದು ಜನಾಂದೋಲನದ ರೂಪ ಪಡೆಯುತ್ತಿದೆ. ಈಗಾಗಲೇ ಒಂದೂವರೆ ಟನ್ ತೂಕದ ನಾಣ್ಯಗಳು ಸಂಗ್ರಹವಾಗಿದ್ದು ಅವುಗಳ ಮೊತ್ತ ಏನಿಲ್ಲವೆಂದರೂ 400 ಮಿಲಿಯನ್ ಇಂಡೋನೇಷಿಯನ್ ರುಪಯ್ಯಗಳಾಗಿದೆ (ಸುಮಾರು ಇಪ್ಪತ್ತು ಲಕ್ಷ ರೂಪಾಯಿ) ಅಂದರೆ ದಂಡದ ಮೊತ್ತದ ದುಪ್ಪಟ್ಟು ಹಣ ಸಂಗ್ರಹವಾಗಿದೆ. ಉಳಿದ ಹಣವನ್ನು ಪ್ರಿಟಾಳಂತೆಯೇ ಅನ್ಯಾಯಕ್ಕೊಳಗಾದ ಜನರ ಕಲ್ಯಾಣಕ್ಕೆ ಬಳಸಲು ತೀರ್ಮಾನಿಸಲಾಗಿದೆ. ಹೀಗೆ ಪ್ರಿಟಾ ರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯವಾಗುತ್ತಿದ್ದಂತೆಯೇ ಇಂಡೋನೇಶಿಯಾದ ರಾಜಕಾರಣಿಗಳು ಈಗ ಅವಳ ಪರವಾಗಿ ಮಾತನಾಡುವ ಮೂಲಕ ತಾವೂ ಅನ್ಯಾಯದ ವಿರುದ್ಧ ಇದ್ದೇವೆ ಎಂದು ಪೋಜು ಕೊಡಲಾರಂಭಿಸಿದ್ದಾರೆ.

ಏನೇ ಆಗಲೀ ಅನ್ಯಾಯಕ್ಕೊಳಗಾದ ಜನರ ನೋವಿಗೆ ಮಿಡಿಯುವ ಹೃದಯಗಳು ಇನ್ನೂ ದೊಡ್ಡ ಸಂಖ್ಯೆಯಲ್ಲಿ ಬದುಕಿವೆಯಲ್ಲವೆ?

ಬನಶಂಕರಿಯ ಕಾವೇರಿ ಸ್ಲಂ ಮತ್ತು ಬ್ರಿಗೇಡ್ ಪಾರ್ಕ್‌ನ ಹಿಂಬದಿಯ ದೃಶ್ಯ



ಬನಶಂಕರಿಯ ಬ್ರಿಗೇಡ್ ಪಾರ್ಕ್ ಭೂಕೊಳ್ಳೆ

ಬಲಾಢ್ಯರು ಭೂಮಿ ಕದ್ದರೆ ಕೇಳುವವರ್‍ಯಾರು?

ನಶಂಕರಿಗೆ ಹೋಗುವ ಕೆ.ಆರ್. ರಸ್ತೆಯು ಮಾನೋಟೈಪ್ ಬಳಿ ಕೊನೆಗೊಳ್ಳುತ್ತದೆಯಲ್ಲ; ಎದುರಿಗೇ ಬ್ರಿಗೇಡ್ ಸಾಫ್ಟ್‌ವೇರ್ ರ್ಕ್ ಎಂಬ ಏಳಂತಸ್ತಿನ ಬೃಹತ್ ಕಾಂಪ್ಲೆಕ್ಸೊಂದು ಕಾಣಿಸುತ್ತದೆ. ಒಂದೆಕರೆಗಿಂತಲೂ ಹೆಚ್ಚು ಸರ್ಕಾರಿ ಭೂಮಿಯನ್ನು ಕಬಳಿಸಿ ಟ್ಟು ಮೂರೆಕರೆಗೂ ಅಧಿಕ ವಿಸ್ತೀರ್ಣದಲ್ಲಿ ತಲೆ ಎತ್ತಿದ ಇಂಥ ಬೃಹತ್ ಕಟ್ಟಡದ ಮುಂದೆ ಬಿಡಿಎ, ಕಾರ್ಪೊರೇಷನ್, ಬಿಎಂಟಿಎಫ್ ತ್ಯಾದಿ ಯಾರೇ ಒಬ್ಬ ಸರ್ಕಾರಿ ಅಧಿಕಾರಿಯ ಪೌರುಷವೂ ಪ್ರಯೋಜನಕ್ಕೆ ಬರುವುದಿಲ್ಲ. ಬಡವರಿಗಾದರೆ ಒಂದು ನ್ಯಾಯ ಲಾಢ್ಯರಿಗೆ ಮತ್ತೊಂದು ನ್ಯಾಯವೆ? ಸರ್ಕಾರಿ ಜಮೀನು ಕಬಳಿಸಿದ ಬ್ರಿಗೇಡ್ ಧಣಿ ಜೈಶಂಕರ್, ಆತನಿಗೆ ನೆರವಾದ ಅಜ್ಜಪ್ಪ, ಲಕರ್ಣಿ ಯಂಥವರನ್ನು ಶಿಕ್ಷಿಸುವವರ್‍ಯಾರು?

ಆಪಾಟ ಬಿಲ್ಡಿಂಗುಗಳನ್ನೂ ಬಿಡದೇ ಬುಲ್ಡೋಜರ್ ಸಿ ಸರ್ಕಾರಿ ಜಮೀನನ್ನು ವಶಪಡಿಸಿಕೊಳ್ಳುತ್ತದೆ ಬಿಡಿಎ. ಲ್ಬರ್ಗಾ-ರಾಯಚೂರು ಕಡೆಯ ಬಡಕನ್ನಡಿಗರನ್ನೂ ಡದೇ, ಮಕ್ಕಳು ಮರಿಗಳೆನ್ನದೆ ಜೋಪಡಿಗಳನ್ನು ಕಿತ್ತೆಸೆದು ರ್ಕಾರಿ ಭೂಮಿಯನ್ನು ವಶಪಡಿಸಿಕೊಳ್ಳುತ್ತದೆ ಬಿಎಂಟಿ ಫ್. ನಿಜ, ಸರ್ಕಾರಿ ಜಮೀನನ್ನು ಗುಲ್ಬರ್ಗಾದ ನಿರ್ಗತಿಕ ಡಿಗರು ಆಕ್ರಮಿಸಿದ್ದರೂ, ಖತರ್‌ನಾಕ್ ಬಿಲ್ಡರ್‌ಗಳು ಳಿಸಿದ್ದರೂ ಕಾನೂನು ಮತ್ತು ಕಾರ್ಯಾಚರಣೆ ದೇ ಆಗಿರಬೇಕಲ್ಲವೆ?

ಸರ್ಕಾರಿ ಭೂಮಿಯಲ್ಲಿ ಬಡವರ ಗುಡಿಸಲಿ ಒಂದು ನ್ಯಾಯ, ಅದೇ ಶ್ರೀಮಂತರು ಕಾಂಪ್ಲೆಕ್ಸ್ ಸಿಕೊಂಡರೆ ಮತ್ತೊಂದು ನ್ಯಾಯವೆ?



ಬೆಂಗಳೂರಿನ ನಟೋರಿಯಸ್ ಬಿಲ್ಡರ್‌ಗಳು, ಾರ್ಟ್‌ಮೆಂಟ್ ಮಾಲೀಕರು ಮತ್ತು ಭೂ ಕರಿಗೇ ಒಂದು ನ್ಯಾಯ ಮತ್ತು ಝೋಪಡಿ ಿಕೊಂಡ ಉತ್ತರ ಕರ್ನಾಟಕದ ಬಡ ಕನ್ನಡಿಗರಿಗೇ ಕ್ಕೊಂದು ನ್ಯಾಯವನ್ನು ಹೇಗೆ ಸರ್ಕಾರಿ ದೊರೆಗಳು ಿಸುತ್ತಿದ್ದಾರೆಂಬುದಕ್ಕೆ ಇದು ಸ್ಪಷ್ಟ ನಿದರ್ಶನವಷ್ಟೇ.

ಬನಶಂಕರಿಗೆ ಹೋಗುವ ಕೆ.ಆರ್. ರಸ್ತೆಯು ನೋಟೈಪ್ ಬಳಿ ಕೊನೆಗೊಳ್ಳುತ್ತದೆಯಲ್ಲ; ಎದುರಿಗೇ ೇಡ್ ಸಾಫ್ಟ್‌ವೇರ್ ಪಾರ್ಕ್ ಎಂಬ ಏಳಂತಸ್ತಿನ ಹತ್ ಕಾಂಪ್ಲೆಕ್ಸೊಂದು ಕಾಣಿಸುತ್ತದೆ. ಒಂದೆಕರೆ ಲೂ ಹೆಚ್ಚು ಸರ್ಕಾರಿ ಭೂಮಿಯನ್ನು ಕಬಳಿಸಿ ್ಟು ಮೂರೆಕರೆಗೂ ಅಧಿಕ ವಿಸ್ತೀರ್ಣದಲ್ಲಿ ಎತ್ತಿದ ಇಂಥ ಬೃಹತ್ ಕಟ್ಟಡದ ಮುಂದೆ ಎ, ಕಾರ್ಪೊರೇಷನ್, ಬಿಎಂಟಿಎಫ್ ಇತ್ಯಾದಿ ರೇ ಒಬ್ಬ ಸರ್ಕಾರಿ ಅಧಿಕಾರಿಯ ಪೌರುಷವೂ ್ರಯೋಜನಕ್ಕೆ ಬರುವುದಿಲ್ಲ.



ಬ್ರಿಗೇಡ್ ಸಾಫ್ಟ್‌ವೇರ್ ಪಾರ್ಕ್ ಆಕ್ರಮಿಸಿಕೊಂಡ ದೆಕರೆ ಭೂಮಿ ಸರ್ಕಾರದ್ದೆಂಬ ಬಗ್ಗೆ ಯಾರಿಗೂ ಮಾನಗಳಿಲ್ಲ. ಸರ್ವೆ ಇಲಾಖೆಯೇ ತನಿಖೆ ನಡೆಸಿ ದೆಕರೆ ಸರ್ಕಾರಕ್ಕೆ ಸೇರಿದ್ದೆಂದು ವರದಿ ಕೊಟ್ಟಿದೆ. ಏಕೆ, ಹೈಕೋರ್ಟ್ ಸ್ಪಷ್ಟವಾಗಿ ಅದು ಸರ್ಕಾರಿ ನೆಂದು ತೀರ್ಪಿತ್ತಿದೆ. ಸಾಲದ್ದಕ್ಕೆ ಸಾರ್ವಜನಿಕರಿಂದ ಲ್ಲದಷ್ಟು ದೂರುಗಳು ಬಂದರೂ ಕೂಡ ಸಂಬಂಧ ಯಾವೊಬ್ಬ ಅಧಿಕಾರಿಯೂ ಇತ್ತ ತಲೆ ಹಾಕುತ್ತಿಲ್ಲ. ಕಾರಣವಿಷ್ಟೆ, ಸದರಿ ಬ್ರಿಗೇಡ್ ಸಾಫ್ಟ್‌ವೇರ್ ಪಾರ್ಕ್‌ನ ಎಂ.ಆರ್. ಜೈಶಂಕರ್ ಎಂಬ ಖತರ್‌ನಾಕ್ ಬಿಲ್ಡರ್ ಮುಖ್ಯಮಂತ್ರಿ ಯಡ್ಡಿ ಕುಟುಂಬದ ಪರಮಾಪ್ತ, ಯಡ್ಡಿ ಹಿರಿಮಗಳು ಉಮಾಳ ಗಂಡ ಸೋಹನ್ ಈತನ ಪಾಲುದಾರರ ಪೈಕಿ ಓರ್ವ. ತನ್ಮೂಲಕ ಕರಂದ್ಲಾಜೆಗೂ ಆಪ್ತನಾದ ನೆಲಗಳ್ಳ ಎಂ.ಆರ್. ಜೈಶಂಕರ್ ಆದರ್ಶ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ಹೆಸರಲ್ಲಿ ಬೆಂಗಳೂರು ಸುತ್ತಮುತ್ತ ಕಬಳಿಸಿದ ಸರ್ಕಾರಿ ಭೂಮಿಯ ಪಟ್ಟಿ ದೊಡ್ಡದಿದೆ. ಸದ್ಯ ಮೊನೋಟೈಪ್‌ನ ಸೇವಾಕ್ಷೇತ್ರ ಆಸ್ಪತ್ರೆಯೆದುರು ತಲೆ ಎತ್ತಿದ ಬ್ರಿಗೇಡ್ ಸಾಫ್ಟ್‌ವೇರ್ ಪಾರ್ಕ್ ಕಬಳಿಸಿದ ಒಂದೆಕರೆ ಭೂಮಿಯ ಮಾರುಕಟ್ಟೆ ರೇಟು ಕಮ್ಮಿಯೆಂದರೂ ಇಪ್ಪತ್ತೈದು ಕೋಟಿ ರೂಪಾಯಿಗಳು!

ಹಿಂದೆ ಸರ್ವೆ ಇಲಾಖೆಗೆ ಮುಖ್ಯಸ್ಥರಾಗಿದ್ದ ತಿಮ್ಮೇಗೌಡ ಮತ್ತು ಸರ್ವೆ ಇಲಾಖೆಯ ಹಾಲಿ ನಿರ್ದೇಶಕ ರಾಜೀವ್ ಚಾವ್ಲಾರಂಥ ಖದೀಮ ಐಎಎಸ್‌ಗಳನ್ನು ಬೆನ್ನಿಗಿಟ್ಟುಕೊಂಡೇ ಈ ಪಾಟಿ ಸರ್ಕಾರಿ ಸೊತ್ತನ್ನು ಕಬಳಿಸಿದ ಜೈಶಂಕರ್ ಹೇಗೆ ನಕಲಿ ದಾಖಲೆಗಳನ್ನು ಸೃಷ್ಟಿಸುತ್ತಾ ಬಂದ ಮತ್ತು ಕಂದಾಯ ಇಲಾಖೆಯ ಕಳ್ಳ ಅಧಿಕಾರಿಗಳು ಆತನ ದುರಾಚಾರಕ್ಕೆ ಹೇಗೆ ಕೈಜೋಡಿಸುತ್ತಾ ಬಂದರೆಂಬುದಕ್ಕೆ ದೊಡ್ಡ ಇತಿಹಾಸವೇ ಇದೆ.

ಮೂಲತಃ ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿಯ ಕರಿಸಂದ್ರ ಗ್ರಾಮದ ಸರ್ವೆ ನಂಬರ್ 7 ರಲ್ಲಿದ್ದ ಇಪ್ಪತ್ತೆಕರೆ ಸರ್ಕಾರಿ ಭೂಮಿಯ ಪೈಕಿ 14 ಎಕರೆಯಲ್ಲಿ ಸದ್ಯ ಕಾವೇರಿ ಸ್ಲಂ ತಲೆ ಎತ್ತಿದೆ. ಇದನ್ನು ಹೊರತುಪಡಿಸಿಯೂ ಬಿಟಿಎಸ್ ಡಿಪೋಗೆಂದು ಎರಡೆಕರೆ, ಸಿದ್ರಾಮಪ್ಪ ಮತ್ತು ಕದಿರಯ್ಯ ಎಂಬ ದಲಿತರಿಗೆ ತಲಾ ಎರಡೆಕರೆ ಮತ್ತು ಡಾ. ಕೆ. ಶಾಂತಿ ಮರಿಯಪ್ಪ ಎಂಬಾಕೆಗೆ ಬಡಬಗ್ಗರಿಗಾಗಿ ಉಚಿತ ಆಸ್ಪತ್ರೆ ಕಟ್ಟಿಸಲೆಂದು ಮತ್ತೆರಡು ಎಕರೆಯನ್ನು ಸರ್ಕಾರ ಮಂಜೂರು ಮಾಡಿದೆ.

ಹೀಗೆ ಡಾ. ಶಾಂತಿ ಮರಿಯಪ್ಪಳಿಗೆ ಮಂಜೂರಾಗಿರುವ ಎರಡೆಕರೆಯನ್ನು ಜಂಟಿ ಪಾಲುದಾರಿಕೆಯ ಮೇರೆಗೆ 1996 ರಲ್ಲಿ ಖರೀದಿಸಿದವನು ಆದರ್ಶ ಬಿಲ್ಡರ್ಸ್ ಧಣಿ ಎಂ.ಆರ್. ಜೈಶಂಕರ್. ಡಾ. ಶಾಂತಿ ಮರಿಯಪ್ಪರಿಂದ ಜೈಶಂಕರ್ ಖರೀದಿಸಿದ ಎರಡೆಕರೆ ಸರ್ವೆ ನಂಬರ್ 42 ರಲ್ಲಿದ್ದರೆ ಪಕ್ಕದಲ್ಲಿದ್ದ ಒಂದೆಕರೆ ಸರ್ಕಾರಿ ಭೂಮಿ ಸರ್ವೆ ನಂಬರ್ 7 ರಲ್ಲಿತ್ತು. ಬಡಬಗ್ಗರಿಗೆ ಧರ್ಮಾರ್ಥ ಆಸ್ಪತ್ರೆಗೆಂದು ಮಂಜೂರಾಗಿದ್ದ ಎರಡೆಕರೆಯನ್ನು ತಾನು ಕೈಗಾರಿಕಾ ಉದ್ದೇಶಕ್ಕೆ ಬಳಸುತ್ತೇನೆಂದು ಕಾನೂನಿನ ಕಣ್ಣಿಗೆ ಮಣ್ಣೆರಚಿದ ಜೈಶಂಕರ್ ಪಕ್ಕದಲ್ಲಿದ್ದ ಸರ್ಕಾರದ ಒಂದೆಕರೆಯನ್ನೂ ಸೇರಿಸಿ ಕಾಂಪೌಂಡ್ ಎಬ್ಬಿಸಿಬಿಟ್ಟ. ಸಾಲದ್ದಕ್ಕೆ ಆಜೂಬಾಜಿನಲ್ಲಿದ್ದ ಶಾರದಮ್ಮ ಮತ್ತು ಸತ್ಯನಾರಾಯಣ ಎಂಬುವವರ ಹದಿನೆಂಟು ಗುಂಟೆಯನ್ನೂ ಒತ್ತುವರಿ ಮಾಡಿಕೊಂಡ. ಈ ಬಗ್ಗೆ ಸಾರ್ವಜನಿಕರು ಮತ್ತು ಅಕ್ಕಪಕ್ಕದ ಜಮೀನುದಾರರು ನ್ಯಾಯಾಲಯದ ಮೊರೆ ಹೊಕ್ಕು ಪುನಃ ಸರ್ವೆ ಮಾಡುವಂತೆ ಕೋರ್ಟು ಸರ್ವೆ ಇಲಾಖೆಗೆ ಆದೇಶ ಮಾಡಿಸುವಲ್ಲಿ ಯಶಸ್ವಿಯಾಗಿದ್ದು 1998 ರಲ್ಲಿ.

ತನಿಖೆ ನಡೆಸಿದ ಭೂದಾಖಲಾತಿ ಜಂಟಿ ನಿರ್ದೇಶಕರು 1999 ರ ಏಪ್ರಿಲ್ ಐದರ ತಮ್ಮ ಆದೇಶದಲ್ಲಿ ಶಾಂತಿ ಮರಿಯಪ್ಪ ಮತ್ತು ಬಿಲ್ಡರ್ ಜೈಶಂಕರ್ ಸೇರಿಕೊಂಡು ಒಂದೆಕರೆ ಸರ್ಕಾರಿ ಭೂಮಿ ಕಬಳಿಸಿದ ಬಗ್ಗೆ ಸ್ಪಷ್ಟವಾಗೇ ಪತ್ತೆಹಚ್ಚಿದ್ದರು. 2000 ದ ಅಕ್ಟೋಬರ್ 5 ರಂದು ಎರಡನೇ ಬಾರಿ ತನಿಖೆ ನಡೆಸಿದ ಸರ್ವೆ ಅಧಿಕಾರಿ ಹಸೀನಾ ಬೇಗಮ್ ಕೂಡ ನಕ್ಷೆ ಸಮೇತ ಅಕ್ರಮಿಸಿಕೊಂಡಿದ್ದ ಸರ್ಕಾರಿ ಜಮೀನನ್ನು ಗುರುತಿಸಿದ್ದಾರೆ. ಆದರೆ ಇಲಿಯಾಸ್ ಎಂಬ ಪರಮಭ್ರಷ್ಟ ಡೆಪ್ಯೂಟಿ ಡೈರೆಕ್ಟರ್ ಆಫ್ ಲ್ಯಾಂಡ್ ರೆಕಾರ್ಡ್ಸ್ (ಡಿಡಿಎಲ್‌ಆರ್) ಹುದ್ದೆಯ ಅಧಿಕಾರಿಯೊಬ್ಬ ಜೈಶಂಕರ್ ಜೊತೆ ಕೈಜೋಡಿಸಿಬಿಟ್ಟ. ನುಂಗಿದ ಸರ್ಕಾರಿ ಭೂಮಿ ಜೈಶಂಕರ್‌ಗೆ ಸೇರಿದ್ದೆಂದು ಕಳ್ಳ ರಿಪೋರ್ಟು ತಿದ್ದಿದ್ದ.

ಇದರ ವಿರುದ್ಧ ಜನ ಮತ್ತೆ ಹೈಕೋರ್ಟ್‌ಗೆ ಅಪೀಲು ಹೋದರೆ ಹೈಕೋರ್ಟು ಸರ್ಕಾರಿ ಸೊತ್ತೆಂಬುದನ್ನು ಸಮರ್ಥಿಸಿ ಸರ್ವೆ ಇಲಾಖೆಯ ಜಂಟಿ ನಿರ್ದೇಶಕರು ಮತ್ತು ಇದೇ ಹೈಕೋರ್ಟಿನ ಸಿಂಗಲ್ ಬೆಂಚು ನೀಡಿದ್ದ ಆದೇಶವನ್ನೇ ಎತ್ತಿಹಿಡಿಯಿತು. ಬ್ರಿಗೇಡ್ ಧಣಿ ಜೈಶಂಕರ್‌ನ ಅರ್ಜಿಯನ್ನು ವಜಾಗೊಳಿಸಿದ್ದಷ್ಟೇ ಅಲ್ಲ, ಮೂಲ ಸರ್ವೆ ನಂಬರ್‌ಗಳ ಪ್ರಕಾರವೇ ಗಡಿ ಗುರುತಿಸಿ ಪುನಃ ಸರ್ವೆ ಮಾಡಿಕೊಡುವಂತೆ 2007 ರ ಜೂನ್ ತಿಂಗಳಲ್ಲಿ ಡೆಪ್ಯೂಟಿ ಡೈರೆಕ್ಟರ್ ಆಫ್ ಲ್ಯಾಂಡ್ ರೆಕಾರ್ಡ್ಸ್‌ನ ವಿ. ಅಜ್ಜಪ್ಪನಿಗೆ ಆದೇಶಿಸಿತ್ತು. ಈ ಅಜ್ಜಪ್ಪನ ಮೂಲಕ ಸರ್ವೆ ಮಾಡಿ ರಿಪೋರ್ಟ್ ಕೊಡುವ ಹೊಣೆ ಹೊತ್ತಿದ್ದು ಸರ್ವೆ ಸೂಪರ್‌ವೈಜರ್ ಬಡಿಗೇರ್.

ಬಡಿಗೇರ್ ಪ್ರಾಮಾಣಿಕವಾಗೇ ಕಬಳಿಕೆಯಾದ ಒಂದೆಕರೆಯನ್ನು ಗುರುತಿಸಿದ್ದ. ಬ್ರಿಗೇಡ್ ಸಾಫ್ಟ್‌ವೇರ್ ಪಾರ್ಕ್ ಯಾರೆಲ್ಲರ ಆಸ್ತಿ ಆಕ್ರಮಿಸಿದೆಯೆಂಬ ಬಗ್ಗೆ ನಕ್ಷೆ ತಯಾರಿಸಿ ವಿವರವಾದ ವರದಿ ಕೊಟ್ಟಿದ್ದ. ಇದರ ಆಧಾರದ ಮೇಲೆಯೇ ಡಿಡಿಎಲ್‌ಆರ್ ಅಜ್ಜಪ್ಪ ಆದೇಶ ಹೊರಡಿಸಬೇಕಿತ್ತು. ಆದರೆ ಜೈಶಂಕರ್ ಕೈಚಳಕಕ್ಕೆ ಬಲಿಯಾಗಿ ಹೊರಡಿಸಬೇಕಿದ್ದ ಆದೇಶವನ್ನೇ ತಡೆಹಿಡಿದು ಕುಂತ. ಒಂದು ಮೂಲದ ಪ್ರಕಾರ ಅದು ಕೋಟಿ ಲೆಕ್ಕದ ದೀಲು. 25 ಕೋಟಿಯ ಒಂದೆಕರೆಯನ್ನು ಉಳಿಸಿಕೊಳ್ಳಲು ಸರ್ವೆ ಉಪ ನಿರ್ದೇಶಕ ಅಜ್ಜಪ್ಪನಿಗೆ ಮತ್ತೊಂದು ಕೋಟಿಯ ಲಂಚ ಕೊಡುವುದು ಬಿಲ್ಡರ್ ಜೈಶಂಕರ್‌ಗೆ ಯಾವ ಲೆಕ್ಕ?



ಬನಶಂಕರಿಯ ಬ್ರಿಗೇಡ್ ಸಾಫ್ಟ್‌ವೇರ್ ಪಾರ್ಕ್

ಹೀಗೆ ರೊಕ್ಕ ತಿಂದ ಅಜ್ಜಪ್ಪ ಸರ್ಕಾರಿ ಸೊತ್ತನ್ನು ರಕ್ಷಿಸಲು ಹೆಣಗಾಡುತ್ತಿದ್ದ ಸತ್ಯನಾರಾಯಣ ಮತ್ತು ಶಾರದಮ್ಮರನ್ನು ಕರೆದು 'ಕೊಟ್ಟಷ್ಟು ಇಸ್ಕೊಂಡು ರಾಜಿ ಮಾಡ್ಕೊಳ್ರೀ.....' ಎಂದು ಡೀಲು ಕುದುರಿಸುತ್ತಿದ್ದ. ಯಾವತ್ತು ದೂರು ಕೊಟ್ಟವರು ದೀಲಿಗೆ ಒಪ್ಪಲಿಲ್ಲವೋ ತಿಂದ ರೊಕ್ಕಕ್ಕೆ ಲೆಕ್ಕ ಕೊಡಬೇಕಲ್ಲ; ಡಿಡಿಎಲ್‌ಆರ್ ಅಜ್ಜಪ್ಪ ಉಪಾಯವಾಗಿ ಮಂಡ್ಯಕ್ಕೆ ವರ್ಗಾವಣೆ ಮಾಡಿಸಿಕೊಂಡು ಜಾಗ ಖಾಲಿಮಾಡಿಬಿಟ್ಟ. ಅಜ್ಜಪ್ಪನ ಜಾಗಕ್ಕೆ ಹೊಸ ಡಿಡಿಎಲ್‌ಆರ್ ಆಗಿ ಬಂದವನು ಪ್ರಸಾದ್ ಕುಲಕರ್ಣಿ. ಈತ ಅಜ್ಜಪ್ಪನಿಗಿಂತಲೂ ಕಡುಭ್ರಷ್ಟ.

ಹೊಡೆದ ಕೊಳ್ಳೆಯಲ್ಲಿ ಅಜ್ಜಪ್ಪ ಕುಲಕರ್ಣಿಗೂ ಪಾಲು ಕೊಟ್ಟಿದ್ದಾನೆ. ಅದಕ್ಕೆ ಕುಲಕರ್ಣಿ ವಿಚಾರಣಾ ಕಡತದಲ್ಲಿದ್ದ ಬಡಿಗೇರ್ ತಯಾರಿಸಿದ್ದ ಸರ್ವೆ ರಿಪೋರ್ಟ್, ಸ್ಕೆಚ್ಚು ವಿವರಗಳಿದ್ದ ಹಾಳೆಗಳನ್ನೇ ಹರಿದೆಸೆದು ಈತನಕ ತನಿಖೆಯೇ ನಡೆದಿಲ್ಲ ಎಂದು ಕಳ್ಳಾಟ ಆಡುತ್ತಿದ್ದಾನೆ. ಅದಕ್ಕೆ ತಕ್ಕಂತೆ ಹಿಂದಿದ್ದ ಅಜ್ಜಪ್ಪ ತಾನು ಸರ್ವೆ ಮಾಡುವಂತೆ, ನಕ್ಷೆ ತಯಾರಿಸುವಂತೆ ಪ್ರಾಮಾಣಿಕ ಸರ್ವೆಯರ್ ಬಡಿಗೇರ್‌ಗೆ ಆದೇಶವನ್ನೇ ಕೊಟ್ಟಿಲ್ಲ ಎಂದು ಕಳ್ಳ ರಿಪೋರ್ಟ್ ಬರೆಯುತ್ತಾನೆ. ಹಗಲುದರೋಡೆಯಲ್ಲಿ ತಾನೂ ಪಾಲು ತಿಂದ ಪ್ರಸಾದ್ ಕುಲಕರ್ಣಿ ಕೂಡ ಇಷ್ಟೆಲ್ಲ ಅನಾಹುತ ಮಾಡಿ ಮೈಸೂರಿಗೆ ವರ್ಗಾ ಮಾಡಿಸಿಕೊಂಡು ಹಾಯಾಗಿದ್ದಾನೆ. ಈಗ ಕುಲಕರ್ಣಿಯ ಜಾಗಕ್ಕೆ ಬಂದ ಪ್ರಕಾಶ್ ತನಗೇನೂ ಸಂಬಂಧವೇ ಇಲ್ಲವೆಂಬಂತೆ ನಾಟಕ ಆಡುತ್ತಿದ್ದಾನೆ. ಸರ್ಕಾರಿ ಭೂಮಿಯ ಉಳಿವಿಗಾಗಿ ಪ್ರಾಮಾಣಿಕ ತನಿಖೆ ನಡೆಸಿ ಸರ್ವೆ ನಕ್ಷೆ ತಯಾರಿಸಿದ ಬಡಿಗೇರ್‌ರನ್ನು ನೆಲಗಳ್ಳ ಬಿಲ್ಡರ್ ಜೈಶಂಕರನೇ ನಿಂತು ಕೋಲಾರಕ್ಕೆ ಎತ್ತಂಗಡಿ ಮಾಡಿಸಿದ್ದಾನೆ.

ಸರ್ವೆ ಇಲಾಖೆಯ ಖದೀಮ ಡೈರೆಕ್ಟರ್ ರಾಜೀವ್ ಚಾವ್ಲಾನಂಥವರೆ ಭೂಕಂಟಕ ಜೈಶಂಕರ್ ಬೆನ್ನಿಗೆ ನಿಂತಿರುವಾಗ ಯಾವ ಅಧಿಕಾರಿ ತಾನೇ ಸರ್ಕಾರಿ ಭೂಮಿಯ ವಹಿಸಿ ಬರುತ್ತಾನೆ?

ಒಂದೆಡೆ ಭೂಮಿ ನುಂಗಿದ ಬಲಾಢ್ಯರನ್ನು ಸರ್ಕಾರಿ ಅಧಿಕಾರಿಗಳೇ ನಿಂತು ರಕ್ಷಿಸುತ್ತಾರೆ. ಮತ್ತೊಂದೆಡೆ ಬಡಬಗ್ಗರು ಗುಡಿಸಲು ಹಾಕಿಕೊಂಡರೆ ಅವರೇ ನಿಂತು ಬುಲ್ಡೋಜರ್ ನುಗ್ಗಿಸುತ್ತಾರೆ. ಬಡವರಿಗಾದರೆ ಒಂದು ನ್ಯಾಯ ಬಲಾಢ್ಯರಿಗೆ ಮತ್ತೊಂದು ನ್ಯಾಯವೆ?

ಸರ್ಕಾರಿ ಜಮೀನು ಕಬಳಿಸಿದ ಬ್ರಿಗೇಡ್ ಧಣಿ ಜೈಶಂಕರ್, ಆತನಿಗೆ ನೆರವಾದ ಅಜ್ಜಪ್ಪ, ಕುಲಕರ್ಣಿಯಂಥವರನ್ನು ಶಿಕ್ಷಿಸುವವರ್‍ಯಾರು?

ಬಡವರ ಮೇಲಷ್ಟೇ ಬುಲ್ಡೋಜರ್ ಪೌರುಷ!

ಸರ್ಕಾರಿ ಭೂಮಿ ಕಬಳಿಕೆಗೆ ಸಂಬಂಧಪಟ್ಟಂತೆ ಎ.ಟಿ. ರಾಮಸ್ವಾಮಿ ಆಯೋಗ ನೀಡಿದ ವರದಿಯ ಕತೆ ಏನಾಯ್ತೆಂಬುದೇ ಯಾರಿಗೂ ಗೊತ್ತಿಲ್ಲ. ಇದರ ಫಲವಾಗೇ ಜಾರಿಗೆ ಬಂದದ್ದು ಕರ್ನಾಟಕ ರಾಜ್ಯ ಸರ್ಕಾರಿ ಭೂಮಿ ನಿಗಮ. ಸದ್ಯ ಇದಕ್ಕೆ ಮುಖ್ಯಸ್ಥರಾಗಿರುವ ವಿ. ಬಾಲಸುಬ್ರಮಣಿಯನ್ ಎಂಬ ನಿವೃತ್ತ ಐಎಎಸ್ ಅಧಿಕಾರಿ ಖಡಕ್ಕಿಯೂ ಹೌದು ಪ್ರಾಮಾಣಿಕರೂ ಕೂಡ. ಹಾಗಿದ್ದೂ ಬನಶಂಕರಿಯ ಬ್ರಿಗೇಡ್ ಪಾರ್ಕ್ ಭೂಕಬಳಿಕೆ ವಿರುದ್ಧ ಏಕೆ ಮುಗುಮ್ಮಾಗಿದ್ದಾರೆಂಬುದು ಇವತ್ತಿಗೂ ನಿಗೂಢವೆ!

ಇದಲ್ಲದೇ ಬೆಂಗಳೂರು ನಗರ ಜಿಲ್ಲಾಧಿಕಾರಿ ನಾಯಕ್ ಅಧೀನದಲ್ಲೊಂದು ಜಾರಿದಳವಿದೆ. ಸ್ಪೆಷಲ್ ಡೀಸಿ ಬಸಪ್ಪ ಇದರ ಮುಖ್ಯಸ್ಥರಾಗಿದ್ದೂ ಜೈಶಂಕರ್ ನುಂಗಿಹಾಕಿದ ಒಂದೆಕರೆ ಸರ್ಕಾರಿ ಭೂಮಿಯತ್ತ ಏಕೆ ಈತನಕ ತಲೆಹಾಕಿಲ್ಲವೆಂಬುದು ಇವತ್ತಿಗೂ ಪ್ರಶ್ನೆಯೆ. ಜೊತೆಗೆ ಸರ್ವೆ ಇಲಾಖೆಯದೇ ನಗರ ಭೂಮಾಪನ ತಂಡವಿದೆ. ಇದಕ್ಕೆ ತಹಶೀಲ್ದಾರ್ ಚೂಡಾಮಣಿಯೇ ಮುಖ್ಯಸ್ಥೆ. ಸಾಲದೆಂಬಂತೆ ಬಿಡಿಎ ಕಾರ್ಯಪಡೆ, ಬಿಬಿಎಂಪಿಯ ಬಿಎಂಟಿಎಫ್ ತಂಡ ಇತ್ಯಾದಿ ಎಲ್ಲವೂ ಇದ್ದೂ ಬಡಕನ್ನಡಿಗರ ಗುಡಿಸಲುಗಳನ್ನು ನೆಲಸಮಗೊಳಿಸುವುದರಲ್ಲೇ ಬಿಜಿಯಾಗಿವೆಯೇ ಹೊರತು ಬಲಾಢ್ಯರ ಕಾಂಪ್ಲೆಕ್ಸ್‌ಗೇಕೆ ಬುಲ್ಡೋಜರ್ ನುಗ್ಗಿಸುವುದಿಲ್ಲ?

ಬುಲ್ಡೋಜರ್ ಪೌರುಷವೇನಿದ್ದರೂ ಬಡವರ ಮೇಲೆ ಮಾತ್ರವೆ?

ಬುದ್ಧಿಗೇಡಿಗಳ ಕೈಗೆ ಅಧಿಕಾರ ಸಿಕ್ಕರೆ...


ಸ್ವರಾಜ್ ಕೌಶಾಲ್ ಅವರ ನೇಮಕದ ಹಿಂದೆ ಅವರ ಹೆಂಡತಿ ಸುಷ್ಮಾ ಸ್ವರಾಜ್ ಅವರನ್ನು ತೃಪ್ತಿಪಡಿಸುವ ಉದ್ದೇಶವಿರುವುದು ಮೇಲ್ನೋಟಕ್ಕೇ ಕಾಣುತ್ತದೆ. ಒಂದೆರಡು ತಿಂಗಳುಗಳ ಹಿಂದೆ ಯಡ್ಡಿ-ರೆಡ್ಡಿ ಜಗಳವನ್ನು ಬಗೆಹರಿಸಿದ್ದು ಇದೇ ಸುಷ್ಮಾ ಸ್ವರಾಜ್. ಅವರು ಸೋನಿಯಾ ಗಾಂಧಿಯ ವಿರುದ್ಧ ಬಳ್ಳಾರಿಯಲ್ಲಿ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದಾಗಿನಿಂದ ಹಿಡಿದು ರೆಡ್ಡಿಗಳಿಗೆ ಆಪ್ತರಾಗಿ ಪ್ರತೀ ವಿಚಾರದಲ್ಲೂ ಅವರ ಪರವಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ.



ಸುಷ್ಮಾ ಸ್ವರಾಜ್

ಬುದ್ಧಿ ಇಲ್ಲದವರ, ಅನನುಭವಿಗಳ ಕೈಗೆ ಅಧಿಕಾರ ಕೊಟ್ಟರೆ ಏನೆಲ್ಲಾ ಯಡವಟ್ಟುಗಳನ್ನು ಮಾಡುತ್ತಾರೆ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆ. ರಾಜ್ಯದಲ್ಲಿ ಎಂದೂ ಅಧಿಕಾರದ ರುಚಿ ನೋಡದ, ಆಡಳಿತ ನಡೆಸಿ ಅನುಭವವಿರದ ಬಿಜೆಪಿ ಮೊದಲ ಬಾರಿಗೆ ಅಧಿಕಾರಕ್ಕೇರಿದೆ. ಆಡಳಿತದ ಚುಕ್ಕಾಣಿ ಕೈಗೆ ಸಿಕ್ಕಾಗಿನಿಂದ ತಮ್ಮ ಅನಾನುಭವದ ಕಾರಣಕ್ಕೆ ಒಂದಲ್ಲಾ ಒಂದು ರೀತಿಯಲ್ಲಿ ಮತಿಗೇಡಿ ಕೆಲಸವನ್ನು ಮಾಡುತ್ತಲೇ ಬಂದಿದೆ. ಈಗ ಬಿಜೆಪಿಯ ರಾಷ್ಟ್ರೀಯ ನಾಯಕಿ, ಯಡ್ಡಿ-ರೆಡ್ಡಿ ಜಗಳವನ್ನು ಮಧ್ಯವರ್ತಿಯಾಗಿ ಬಗೆಹರಿಸಿದ 'ಅಮ್ಮ' ಸುಷ್ಮಾ ಸ್ವರಾಜ್ ಅವರ ಗಂಡ ಸ್ವರಾಜ್ ಕೌಶಾಲ್ ಅವರನ್ನು ರಾಜ್ಯ ಬಿಜೆಪಿ ಸರ್ಕಾರ ಸುಪ್ರೀಂಕೋರ್ಟಿನಲ್ಲಿ ರಾಜ್ಯದ ಕೇಸುಗಳ ಪರವಾಗಿ ವಾದ ಮಾಡುವ ವಕೀಲರ ಗುಂಪಿಗೆ ನೇಮಕ ಮಾಡಿ ಆದೇಶ ಹೊರಡಿಸಿದ್ದು ಅಂಥ ಯಡವಟ್ಟುಗಳಿಗೆ ಲೇಟೆಸ್ಟ್ ಸೇರ್ಪಡೆ.

1952ರಲ್ಲಿ ಹುಟ್ಟಿದ ಸ್ವರಾಜ್ ಕೌಶಾಲ್ ಪಂಜಾಬ್ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು ಪಡೆದವರು. ಮೂಲತಃ ಸೋಶಿಯಲಿಸ್ಟ್ ಪಕ್ಷದ ಹಿನ್ನೆಲೆಯುಳ್ಳ ಅವರು 1975ರಲ್ಲಿ ಸುಷ್ಮಾ ಸ್ವರಾಜ್ ಅವರನ್ನು ಮದುವೆಯಾದರು. ಅವರಿಗೆ ಒಬ್ಬ ಮಗಳೂ ಇದ್ದಾಳೆ. 1990-93ರ ಅವಧಿಯಲ್ಲಿ ಅವರು ಮಿಜೋರಾಂನ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದರು. ನಂತರ 1998-2004ರ ಅವಧಿಯಲ್ಲಿ ರಾಜ್ಯಸಭೆಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಯಾವುದೇ ರಾಜ್ಯ ಸರ್ಕಾರ ಸುಪ್ರೀಂಕೋರ್ಟಿನಲ್ಲಿ ರಾಜ್ಯದ ಪರವಾಗಿ ವಾದಿಸುವುದಕ್ಕೆ ಹಿರಿಯ ವಕೀಲರ ತಂಡವೊಂದನ್ನು ರಚಿಸುತ್ತದೆ. **Karnataka Law Officers (Appointment and Conditions of Service) Rules 1977** ಪ್ರಕಾರ ಈ ತಂಡಕ್ಕೆ ದೇಶದಲ್ಲಿ ಯಾವುದೇ ಹಿರಿಯ ವಕೀಲರನ್ನು ಸೇರಿಸಿಕೊಳ್ಳುವ ಅಧಿಕಾರವೂ ರಾಜ್ಯ ಸರ್ಕಾರಕ್ಕಿರುತ್ತದೆ. ರಾಜ್ಯಕ್ಕೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟಿನಲ್ಲಿ ಅಂತರರಾಜ್ಯ ಗಡಿವಿವಾದ, ಅಂತರರಾಜ್ಯ ಜಲವಿವಾದ, ಗಣಿಗಾರಿಕೆ, ಪ್ರಮುಖ ಅಭಿವೃದ್ಧಿ ಯೋಜನೆಗಳು ಮುಂತಾದ ವ್ಯಾಜ್ಯಗಳಲ್ಲಿ ರಾಜ್ಯದ ಪರವಾಗಿ ವಾದಿಸಿ ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡುವ ಮಹೋನ್ನತ ಜವಾಬ್ದಾರಿ ಈ ವಕೀಲರ ತಂಡದ ಮೇಲಿರುತ್ತದೆ. ಹಾಗಾಗಿ, ರಾಜ್ಯ ಸರ್ಕಾರ ಇಂಥ ಸೂಕ್ಷ್ಮ ಮತ್ತು ಮಹತ್ವಪೂರ್ಣ ವಿಚಾರಗಳನ್ನು ನಿಭಾಯಿಸುವುದಕ್ಕಾಗಿ ವಕೀಲರೊಬ್ಬರನ್ನು ಈ ತಂಡಕ್ಕೆ ಸೇರಿಸಿಕೊಳ್ಳುವಾಗ ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ. ಕೇವಲ ಸಾಮರ್ಥ್ಯವನ್ನು ಮಾತ್ರ ಪರಿಗಣಿಸದೇ ರಾಜ್ಯದ ಪರವಾಗಿ ಅವರ ಕಾಳಜಿಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಮಾತ್ರವಲ್ಲ, ತಂಡಕ್ಕೆ ಸೇರಿಸುವ ಮುನ್ನ ಆ ನಿರ್ದಿಷ್ಟ ವ್ಯಕ್ತಿಗೆ ಸಂಬಂಧಿಸಿದಂತೆ ಸಾಂವಿಧಾನಿಕ ನಿರ್ಬಂಧವೇನಾದರೂ ಇದೆಯೇ ಎಂಬುದನ್ನೂ ನೋಡಬೇಕಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ವಕೀಲರ ತಂಡಕ್ಕೆ ನೇಮಕಗೊಳ್ಳುವುದಕ್ಕೆ ಮುನ್ನ ಅವರೊಂದಿಗೆ ಚರ್ಚಿಸಿ ಆತ ಸಿದ್ಧರಿದ್ದಾರೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕಾಗುತ್ತದೆ.


ಸುರೇಶ್



ಆದರೆ ನಮ್ಮ ಬಿಜೆಪಿ ಸರ್ಕಾರ ಇದ್ಯಾವುದನ್ನೂ ಮಾಡದೇ ಸ್ವರಾಜ್ ಕೌಶಾಲ್ ಅವರನ್ನು ಸುಪ್ರೀಂ ಕೋರ್ಟಿನಲ್ಲಿ ರಾಜ್ಯಪರ ವಾದಿಸುವ ವಕೀಲರ ತಂಡಕ್ಕೆ ಸೇರಿಸಿಕೊಂಡಿರುವುದರ ಬಗ್ಗೆ ಆದೇಶ ಹೊರಡಿಸಿದೆ. ರಾಜ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಸ್.ಸುರೇಶ್ ಕುಮಾರ್ ಅವರೇ ಏಕಾಏಕಿ ಲಿಖಿತ ರೂಪದಲ್ಲಿ ಈ ಆದೇಶ ಹೊರಡಿಸಿದ್ದಾರೆ.

ಅಸಲಿಗೆ ಸ್ವರಾಜ್ ಕೌಶಾಲ್ ಅವರು ಈಗಾಗಲೇ ಮಿಜೋರಾಂನ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿರುವುದರಿಂದ ಅದರ ನಂತರ ಅವರು ಸಂವಿಧಾನದ ಪ್ರಕಾರ ಯಾವುದೇ ಸರ್ಕಾರಿ ಹುದ್ದೆಯನ್ನು ಅಲಂಕರಿಸುವಂತಿಲ್ಲ. ಈ ಸಾಂವಿಧಾನಿಕ ನಿರ್ಬಂಧದ ಕನಿಷ್ಠ ತಿಳಿವಳಿಕೆಯಾದರೂ ಯಡ್ಡಿಗೆ, ರೆಡ್ಡಿಗೆ ಅಥವಾ ಸುರೇಶ್ ಕುಮಾರ್‌ಗೆ ಇರಬೇಕಿತ್ತು. ಎರಡನೆಯದಾಗಿ, ಸ್ವರಾಜ್ ಕೌಶಾಲ್ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸುವ ಮುನ್ನ ಕನಿಷ್ಠ ಅವರೊಂದಿಗೆ ಒಮ್ಮೆ ಚರ್ಚಿಸಬೇಕಾಗಿತ್ತು. ಅದನ್ನೂ ಮಾಡಿಲ್ಲ. ನೇರವಾಗಿ ಸ್ವರಾಜ್ ಕೌಶಾಲ್ ಅವರನ್ನೇ ಈ ಬಗ್ಗೆ ಪ್ರಶ್ನಿಸಿದರೆ *"ನಾನು ಆ ಹುದ್ದೆಗೆ ಅರ್ಜಿಯನ್ನೂ ಹಾಕಿರಲಿಲ್ಲ. ನನ್ನನ್ನು ನೇಮಿಸುವುದಕ್ಕೆ ಸಮ್ಮತಿಯನ್ನೂ ಕೊಟ್ಟಿಲ್ಲ. ಅಸಲಿಗೆ ನನ್ನೊಂದಿಗೆ ಯಾರೂ ಚರ್ಚೆಯನ್ನೂ ಮಾಡಿಲ್ಲ. ನನಗೆ ಈ ಕುರಿತ ಆದೇಶದ ಪತ್ರವೂ ಸಿಕ್ಕಿಲ್ಲ. ಅಲ್ಲದೇ ನಾನು ಈಗಾಗಲೇ ಮಿಜೋರಾಂನ ರಾಜ್ಯಪಾಲನಾಗಿ ಕಾರ್ಯನಿರ್ವಹಿಸಿರುವುದರಿಂದ ಯಾವುದೇ ಸರ್ಕಾರಿ ಹುದ್ದೆಯನ್ನು ಅಲಂಕರಿಸುವುದಕ್ಕೆ ಸಾಂವಿಧಾನಿಕ ನಿರ್ಬಂಧವೂ ಇರುವುದರಿಂದ ಅದನ್ನು ಒಪ್ಪಿಕೊಳ್ಳುವ ಪ್ರಶ್ನೆಯೇ ಇಲ್ಲ"* ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿದ್ದಾರೆ.

ಅಸಲಿಗೆ ಸ್ವರಾಜ್ ಕೌಶಾಲ್ ಅವರ ನೇಮಕದ ಹಿಂದೆ ಅವರ ಹೆಂಡತಿ ಸುಷ್ಮಾ ಸ್ವರಾಜ್ ಅವರನ್ನು ತೃಪ್ತಿಪಡಿಸುವ ಉದ್ದೇಶವಿರುವುದು ಮೇಲ್ನೋಟಕ್ಕೇ ಕಾಣುತ್ತದೆ. ಒಂದೆರಡು ತಿಂಗಳುಗಳ ಹಿಂದೆ ಯಡ್ಡಿ-ರೆಡ್ಡಿ ಜಗಳವನ್ನು ಬಗೆಹರಿಸಿದ್ದು ಇದೇ ಸುಷ್ಮಾ ಸ್ವರಾಜ್. ಅವರು ಸೋನಿಯಾ ಗಾಂಧಿಯ ವಿರುದ್ಧ ಬಳ್ಳಾರಿಯಲ್ಲಿ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದಾಗಿನಿಂದ ಹಿಡಿದು ರೆಡ್ಡಿಗಳಿಗೆ ಆಪ್ತರಾಗಿ ಪ್ರತೀ ವಿಚಾರದಲ್ಲೂ ಅವರ ಪರವಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾ[ರ]. ಈಗ ಅಕ್ರಮ ಗಣಿಗಾರಿಕೆಯ ವಿಚಾರದಲ್ಲಿ ಅತ್ತ ಕೇಂ[ದ್ರ] ಸರ್ಕಾರ, ಇತ್ತ ಆಂಧ್ರಪ್ರದೇಶ ಸರ್ಕಾರ ರೆಡ್ಡಿಗಳ ಕ[ತ್ತು] ಹಿಸುಕುತ್ತಿರುವುದರಿಂದ ಈ ವ್ಯಾಜ್ಯಗಳನ್ನು ಸುಪ್ರೀಂ ಕೋರ್ಟಿನಲ್ಲಿ ಬಗೆಹರಿಸಬೇಕಾಗುತ್ತದೆ. ಯಡ್ಡಿ ನೇತೃತ್ವ[ದ] ರಾಜ್ಯ ಸರ್ಕಾರವೂ ರೆಡ್ಡಿಗಳನ್ನು ತೃಪ್ತಿಪಡಿಸುವುದಕ್ಕಾ[ಗಿ] 'ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ನಡೆದಿಲ್ಲ' ಎಂ[ದು] ವಾದಿಸುತ್ತಿದೆ. ಇಂಥ ಸಂದರ್ಭದಲ್ಲಿ ರೆಡ್ಡಿಗಳಿಗೆ ಅನುಕೂ[ಲ]ವಾಗುವಂತೆ ರಾಜ್ಯದ ನಿಲುವನ್ನು ಸಮರ್ಥಿಸಿಕೊಳ್ಳ[ಲು] ಸುಪ್ರೀಂಕೋರ್ಟಿನಲ್ಲಿ ಸಮರ್ಥ ಲಾಯರ್ ಬೇಕು. ಸ್ವರಾಜ್ ಕೌಶಾಲ್ ಅವರನ್ನು ರಾಜ್ಯ ಪರ ವಾದಿಸುವ ವಕೀಲ[ರ] ತಂಡಕ್ಕೆ ಸೇರಿಸಿಕೊಂಡರೆ ಒಬ್ಬ ದಕ್ಷ ವಕೀಲರು ಸಿಕ್ಕಂತಾಗುತ್ತದೆ ಹಾಗೂ ಅದೇ ವೇಳೆಯಲ್ಲಿ ಸುಷ್ಮಾ ಸ್ವರಾಜ್ ಅವರನ್ನೂ ತೃಪ್ತಿಪಡಿಸಿದಂತಾಗುತ್ತದೆ ಎಂಬು[ದು] ಯಡ್ಡಿ-ರೆಡ್ಡಿಗಳ ಲೆಕ್ಕಾಚಾರವಾಗಿತ್ತು. ಈ ಕಾರಣಕ್ಕಾಗಿಯೆ ಸ್ವರಾಜ್ ಕೌಶಾಲ್ ಅವರನ್ನು ನೇಮಿಸಿ ಏಕಾಏಕಿ ಆದೇ[ಶ] ಹೊರಡಿಸಿತ್ತು ಈ ಸರ್ಕಾರ.


ಸ್ವರಾಜ್ ಕೌಶಾಲ್

ಆದರೆ ನೇಮಕಕ್ಕೆ ಮುನ್ನ ಸಾಂವಿಧಾನಿಕ ನಿರ್ಬಂಧವ[ನ್ನು] ಪರಿಗಣಿಸದಿರುವುದು, ಕೌಶಾಲ್ ಅವರ ಒಪ್ಪಿಗೆಯ[ನ್ನು] ಪಡೆಯದಿರುವುದು ಬಿಜೆಪಿಗಳ ಮತಿಗೇಡಿತನವಷ್ಟೆ.

ಔಟ್‌ಲುಕ್, ಇಂಡಿಯಾ ಟುಡೇ: ವರ್ಷಕ್ಕೊಮ್ಮೆ 'ಸೆಕ್ಸ್ ಮೂಡ್' ಬರುತ್ತೆ!

ಹೌದು, ಅದೂ ಚಳಿಗಾಲದ ಡಿಸೆಂಬರ್‌ನಲ್ಲಿ ಕ್ರಿಸ್‌ಮಸ್, ಹೊಸವರ್ಷಗಳ ರಂಗುರಂಗಿನ ಪಾರ್ಟಿಗಳು ಹತ್ತಿರತ್ತಿರ ಇರುವಾಗಲೇ.

ಈ ಸಲದ 'ಔಟ್‌ಲುಕ್' ವಿಶೇಷ ಸಂಚಿಕೆಯ ಹೆಸರು **'Urban male'**. ಹತ್ತು ಮಹಾನಗರಗಳಲ್ಲಿ ಅದು ಸೆಕ್ಸ್ ಸರ್ವೆ ಮಾಡಿದೆ. ಸೆಕ್ಸ್ ಪರ್ಫಾರ್ಮನ್ಸ್, ಸೆಕ್ಸ್ ಅಟಿಟ್ಯೂಡ್, ಸೆಕ್ಸ್ ಸ್ಟೈಲ್... ಎಕ್ಸೆಟ್ರಾಗಳ ಕುರಿತು ಪ್ರಶ್ನಾವಳಿ ತಯಾರಿಸಿ ಈ ನಗರಗಳ ಯುವಕರಿಂದ ಉತ್ತರ ಪಡೆಯಲಾಗಿದೆ. ಅಂದರೆ 24-34ರ ನಡುವಿನ ವಯಸ್ಸಿನ 1,088 ಯುವಕರನ್ನು ಮಾತನಾಡಿಸಿ, ಅವರ ಅಭಿಪ್ರಾಯಗಳನ್ನೇ ಇಡೀ ಆ ನಗರದ ಯುವಕರ ಅಭಿಪ್ರಾಯ ಎಂಬಂತೆ ಶೇಕಡವಾರು ಅಂಕಿಅಂಶ ನೀಡಿಬಿಟ್ಟಿದ್ದಾರೆ.

ಇದು ಪ್ರತಿವರ್ಷ ನಡೆದೇ ಇದೆ. 'ಇಂಡಿಯಾ ಟುಡೇ'ಗೂ ಇದೇ ಹೊತ್ತಲ್ಲೇ ಮೂಡ್ ಬಂದು ಅದೂ ಸೆಕ್ಸ್ (ಸರ್ವೆ)ಗೆ ಇಳಿದೇ ಬಿಟ್ಟಿರುತ್ತದೆ. ಈ ಸಲ ಔಟ್‌ಲುಕ್ ಜೊತೆ ಈ ಸೆಕ್ಸ್‌ಸರ್ವೆಗೆ ಕೈ(ಮ್ಮ) ಜೋಡಿಸಿದ್ದು 'ಮೂಡ್ಸ್' ಎಂಬ ಕಾಂಡೋಮ್ ಕಂಪೆನಿ. ಅದಕ್ಕೆ ತಕ್ಕಂತೆ ಈ ಸರ್ವೆ ಪ್ರಕಟಗೊಂಡ ಪುಟಗಳಲ್ಲಿ ಅರ್ಧಕರ್ಧ ಮೂಡ್ಸ್‌ನ ರೋಚಕ, ರೋಮಾಂಚಕ ಜಾಹೀರಾತುಗಳು!

ಅದಿರ್‍ಲಿ, ನಮ್ಗೆ ನಿಮ್ಗೆ ಗೊತ್ತಿಲ್ಲದ ಹಲವು ವಿಷಯಗಳು ಈ ಜಾಹೀರಾತುಗಳಲ್ಲಿವೆ. 'Moods Coffee' ಅನ್ನೋ ಕಾಂಡೋಮ್‌ಗೆ ಕಾಫಿ ವಾಸನೆ ಇರುತ್ತಂತೆ! 'Coffee is best in bed' ಎನ್ನುತ್ತದೆ ಮೂಡ್ಸ್.

ಮೂಡ್ಸ್‌ನ ಒಂದು 'ಎನ್‌ಕೋರ್ ಪ್ಯಾಕ್' ಕೂಡಾ ಲಭ್ಯವಿದೆ. ಅದಕ್ಕೆ ಟ್ಯಾಗ್‌ಲೈನ್: Put theory to practice. ಹಾಗೆಯೇ moods-bubblegum ಕೂಡಾ ಸಿಗುತ್ತಂತೆ. ಅದು ಬಬ್ಬಲ್‌ಗಮ್‌ನಂತೆ ಅಂಟಂಟಾಗಿರುತ್ತಾ ಅನ್ನೋದು ಮಾತ್ರ ನಮಗೆ ಗೊತ್ತಿಲ್ಲ.


ಈ ಸೆಕ್ಸ್ ಸರ್ವೆಯ ಕೆಲ ಪ್ರಶ್ನೆಗಳು ಹೀಗಿವೆ:

- ನಿಮಗೆ ಅವಕಾಶ ಸಿಕ್ಕರೆ ಯಾವ ಕಾರಣಕ್ಕೆ ನಿಮ್ಮ ಲೇಡಿ ಬಾಸ್ ಜೊತೆ ಮಲಗುತ್ತೀರಿ?
- ಹುಡುಗಿಯರ ದೇಹದ ಯಾವ ಭಾಗ ನಿಮಗೆ ಹೆಚ್ಚು ಆಕರ್ಷಣೀಯ?
- ಪಾರ್ಟನರ್‌ಗಳನ್ನು ಅದಲು ಬದಲು ಮಾಡಿಕೊಳ್ಳುತ್ತೀರಾ?

ಸಾಕಪ್ಪಾ ಸಾಕು ಅನ್ನುತ್ತೀರೋ? ಸಾಕು ಬಿಡಿ.

ಸರ್ವೆಯ ಪ್ರಕಾರ, ಬೆಂಗಳೂರಿನ ಶೇ.87ರಷ್ಟು ಗಂಡಸರು ಮದುವೆಗೆ ಮೊದಲು ಒಂದರಿಂದ ಎರಡು ಸಾರಿ ರೊಕ್ಕ ಕೊಟ್ಟು ಲೈಂಗಿಕ ತೃಪ್ತಿ ಪಡೆದಿರುತ್ತಾರಂತೆ!

ಅರೆ, ಇವ್ರು 10 ನಗರಗಳಲ್ಲಿ ಮಾತಾಡಿಸಿದ್ದೇ 1,088 ಜನರನ್ನು. ಸರಾಸರಿ ಪ್ರಕಾರ ಇವರು ಬೆಂಗಳೂರಿನಲ್ಲಿ 100 ಗಂಡಸರನ್ನು ಮಾತಾಡಿಸಿದ್ದಾರೆ. ಅದರಲ್ಲಿ 87 ಜನ ವಿವಾಹಪೂರ್ವ ಸೆಕ್ಸ್ ಒಪ್ಪಿಕೊಂಡಿದ್ದಾರಂತೆ! ಅದಕ್ಕೆ ಶೇ 87 ಬೆಂಗಳೂರಿನ ಗಂಡಸರು ಹೀಗೇ ಎಂದು ಸರ್ವೆ ಸಾರಿಬಿಟ್ಟಿದೆ.




'ಔಟ್‌ಲುಕ್'ನ ಇದೇ ಸಂಚಿಕೆಯಲ್ಲಿ ಖ್ಯಾತ ಲೈಂಗಿಕ ವೈದ್ಯ ಪ್ರಕಾಶ್ ಕೊಠಾರಿಯ ಸಂದರ್ಶನವಿದೆ. ಅದರಲ್ಲಿ ಅವರು 'ಸೆಕ್ಸ್ ಸರ್ವೆಗಳಲ್ಲಿ ಸಾಮಾನ್ಯವಾಗಿ ಯಾರೂ ಸತ್ಯ ಹೇಳುವುದಿಲ್ಲ' ಎಂದು ಹೇಳಿದ್ದಾರೆ. ಇಷ್ಟಾದರೂ ಇಂಡಿಯಾ ಟುಡೇ, ಔಟ್‌ಲುಕ್‌ಗಳು ಪ್ರತಿವರ್ಷ ಇಂತಹ ಸರ್ವೆ ಮಾಡೇ ಮಾಡುತ್ತವೆ. ಏಕೆಂದರೆ ಪಾಪ, ಅವಕ್ಕೆ ಮೂಡ್ ಬರುವುದೇ ವರ್ಷಕ್ಕೊಮ್ಮೆ ಅಂತೆ! 'ಮೂಡ್ ಬಂದಾಗ (ಸರ್ವೆ) ಮಾಡಿಬಿಡಬೇಕು' ಎನ್ನೋ ತತ್ವ ಅವುಗಳದು. ಅವಕ್ಕೆ ಸಾಥ್ ಆಗಿ Moods ಇದ್ದೇ ಇದೆ.

ಹಿಂದೊಮ್ಮೆ ಅಮಿತಾಬ್ ಬಚ್ಚನ್ ಬೆಂಗಳೂರಲ್ಲಿ ವಿಶ್ವಸುಂದರಿ ಸ್ಪರ್ಧೆ ನಡೆಸುವಾಗ ಪರ ವಿರೋಧ ಅಭಿಪ್ರಾಯಗಳು ಎದ್ದಿದ್ದವು. ಇಂಗ್ಲಿಷ್ ದೈನಿಕವೊಂದು ಎಂ.ಜಿ.ರೋಡಿಗೆ ಹೋಗಿ 300 ಜನರನ್ನು ಮಾತಾಡಿಸಿ, ಶೇ 99 ಬೆಂಗಳೂರಿಗರು ವಿಶ್ವ ಸುಂದರಿ ಸ್ಪರ್ಧೆ ಪರವಾಗಿ ಇದ್ದಾರೆ ಅಂತಾ ಬರೆದುಬಿಟ್ಟಿತ್ತು, ಸಂಖ್ಯಾಶಾಸ್ತ್ರದ ಮಹಿಮೆಯೇ ಹೀಗೆ!

ಅದಕ್ಕೆ ಅಂತಾರಲ್ಲ : **Lies, Damn Lies and Statistics!**

-ಮಲ್ಲನಗೌಡರ್

ದ್ಮನಾಭನಗರ
ಶೋಕ್ ಕುತಂತ್ರಕ್ಕೆ
ರುಳಿದ ತಲೆಗಳೆಷ್ಟು?



ಷ ನಿರೀಕ್ಷೆಯಿಟ್ಟು ಪದ್ಮನಾಭನಗರದ ಜನ
ಕೊಟ್ಟು ಗೆಲ್ಲಿಸಿದರೋ, ಅಂಥ ನಿರೀಕ್ಷೆಗಳೆಲ್ಲ
ದೇ ಒಂದು ವಾರ್ಡ್ ಮೀಸಲಾತಿ ಮೂಲಕ
ು ಮಾಡಿದ್ದಾರೆ ಸಾರಿಗೆ ಮಂತ್ರಿ ಆರ್.

ೂರಿನ ಬೇರೆಲ್ಲ ಕ್ಷೇತ್ರಗಳ ವಾರ್ಡ್‌ವಾರ್
ತೇನೇ ಇರಲಿ, ಮಂತ್ರಿ ಅಶೋಕ್ ತಮ್ಮ
ಗರದಲ್ಲಿ ನಡೆಸಿದ ಕುತಂತ್ರದ ಫಲವಾಗಿ
ರೆಡ್ಡಿ, ಕತ್ರಿಗುಪ್ಪೆ ಮುನಿರಾಜು ಥರದ ಕಾಂಗ್ರೆಸ್
ಅಲ್ಲ; ಮೊಹಮ್ಮದ್ ಆಲಿಯಂಥ ಮುಸ್ಲಿಂ
ಕೂಡ ಚುನಾವಣೆಗೇ ನಿಲ್ಲುವಂತಿಲ್ಲ. ಇಂಥ
ಶ್ ಬಿಜೆಪಿಯೇತರ ಭಾವೀ
ವಿಷ್ಯದ ಮೇಲೆ ಚಪ್ಪಡಿ ಎಳೆದು
ು, ಭಟ್ಟಂಗಿಗಳನ್ನೆಲ್ಲ ಸಲೀಸಾಗಿ
ವ ಅಶೋಕ್ ಹುನ್ನಾರದ
ರೂಪವೇ ಸದ್ಯದ ವಾರ್ಡ್
ಆದೇಶ.


ೂರು, ಕರೇಸಂದ್ರ, ಗಣೇಶ್
ದ್ಮನಾಭನಗರ, ಕುಮಾರಸ್ವಾಮಿ
ನಶಂಕರಿ, ಚಿಕ್ಕಲಸಂದ್ರ ಮತ್ತು
ಇತ್ಯಾದಿ ಎಂಟು ವಾರ್ಡುಗಳ
ಜೆಡಿಎಸ್ ಮತ್ತು ಕಾಂಗ್ರೆಸ್ಸಿನ
ಾಯಕರಿದ್ದಾರೋ ಅವರ್‍ಯಾರೂ ಎಲೆಕ್ಷನ್ನಿಗೇ
ೀಸಲಾತಿ ರೂಪಿಸಿದ ಅಶೋಕ್ ಅನುಕೂಲ
ಎಂತೆಂಥವರಿಗೆ?

ಗೆ ಕುಮಾರಸ್ವಾಮಿ
ರ್ಡನ್ನೇ ತೆಗೆದುಕೊಂಡರೆ
ಶ್ ಚೇಲಾ ಸುರೇಶನಿಗೆಂದೇ
ಲಾತಿ ಆದೇಶ
ಇಲ್ಲಿ ಮುಸ್ಲಿಮರಿರುವುದು
ಸಾವಿರವಾದರೂ ಅದನ್ನು
ಕ್ಯಾಟಗರಿ (ಬಿಸಿಎಂ-ಎ)ಗೆ
ಪವಡಿಸಿದ್ದು ಮುಸ್ಲಿಮರ
ಜೆಯಿಂದಲ್ಲ, ಅಶೋಕ್
ಸುರೇಶ್‌ನಲ್ಲದೇ ಇಲ್ಲಿ
ರೆ ಅಭ್ಯರ್ಥಿಗಳಿಲ್ಲ.
ಈತನ ಚಿಕ್ಕಪ್ಪ
ಎಂಬ ಲ್ಯಾಂಡ್ ಲಾರ್ಡ್ ಅಥವಾ
ಶ್ ಸ್ಪರ್ಧೆಗಿಳಿದರೂ ಪಾರ್ಕ್ ಸುರೇಶನ
ಮುಂದೆ ಇವರಿಬ್ಬರೂ ಡಮ್ಮಿಗಳೆ.
ನಟ್ಟಿಗೊಬ್ಬ ಅಭ್ಯರ್ಥಿಯೂ ಗತಿಯಿಲ್ಲ
ಕ್ಕೆ ಹಾಕಿಯೇ
ಲೇಔಟ್ ವಾರ್ಡನ್ನು
ಗರಿಗೊಪ್ಪಿಸಿದ ಅಶೋಕ್‌ಗೆ
ಮ್ಮ ಚೇಲಾ ಪಾರ್ಕ್
ನ್ಸಿಲರ್
ದೆ. ಈ ಪಾರ್ಕ್
ಸ್ತಿ ಮತ್ತು ಚಾಲಾಕಿ
ವಾಸವನ್ನು ಕೆದಕಿದರೆ
ದು ಕತೆಯಾಗುತ್ತದೆ.
ಸುಬ್ಬರು, ಸಮರ್ಥರು
ಲೇಔಟಿನಲ್ಲಿ
ವರೆ ಅಶೋಕ್‌ಗೆ ಅಂಥವರ್‍ಯಾರೂ

ಂಗದ ವಾರ್ಡನ್ನು ಏಕಾಏಕಿ ಜನರಲ್
ಶೋಕ್ ರೂಪಿಸಿದ್ದು ಕೂಡ ತನ್ನ ಮತ್ತೊಬ್ಬ
ಮಾಜಿ ಕೌನ್ಸಿಲರ್ ಎಲ್. ಶ್ರೀನಿವಾಸ್‌ಗ
ಎ.ಟಿ. ರಾಮಸ್ವಾಮಿ ಆಯೋಗದ
ರ್ಕಾರಿ ಭೂಮಿ ಕಬಳಿಸಿದವರ ಪೈಕಿ
ಸ್ ಎರಡನೇ ಅತೀ ಹೆಚ್ಚು ಸರ್ಕಾರಿ
ಆಸಾಮಿ. ಇಡೀ ಚಿಕ್ಕಲ್ಲಸಂದ್ರ ಕೆರೆಯನ್ನೇ

ವಾರ್ಡ್ ವಾರ್ 4 BBMP


ನುಂಗಿ ನೀರು ಕುಡಿದ ಶ್ರೀನಿವಾಸ್ ಅರಣ್ಯ ಭೂಮಿಯನ್ನೂ ಉಳಿಸಿಲ್ಲ. ಇಂಥವನಿಗೆ ಬಿಜೆಪಿ ಟಿಕೆಟ್ ಕೊಟ್ಟು ಎರಡನೇ ಬಾರಿ ಕೌನ್ಸಿಲರ್‌ಗಿರಿಗೇರಿಸುವುದು ಅಶೋಕ್ ಹುನ್ನಾರ. ಕಳೆದ ಬಾರಿ ಜೆಡಿಎಸ್ ನಾಯಕ ಕಬಡ್ಡಿಬಾಬು ಥರದವರನ್ನೇ ಸೋಲಿಸಿ ಗೆದ್ದವನು ಎಲ್. ಶ್ರೀನಿವಾಸ್. ಈ ಬಾರಿ ಈತನ ವಿರುದ್ಧ ಕಬಡ್ಡಿ ಬಾಬು ಶಿಷ್ಯ ಜುಟ್ಟು ಮಂಜ ಎಂಬಾತ ಜೆಡಿಎಸ್ ಅಭ್ಯರ್ಥಿಯಾಗಬಹುದು. ಕಾಂಗ್ರೆಸ್‌ನಿಂದ ವೆಂಕಟರಾವ್ ನಿಂತರೂ ಅದು ಕಾಟಾಚಾರಕ್ಕಷ್ಟೇ.



ಗುರಪ್ಪ ನಾಯ್ಡು


ಇಂಥ ನಟೋರಿಯಸ್ ಶ್ರೀನಿವಾಸನ ಮುಂದೇನಾದರೂ ಕಬಡ್ಡಿಬಾಬು ನಿಂತರಷ್ಟೇ ಪೈಪೋಟಿಯಿರುತ್ತದೆಯೇ ಹೊರತು ಬೇರೆ ಯಾರೇ ನಿಂತರೂ ಶ್ರೀನಿವಾಸ್ ನೀರು ಕುಡಿಸುವುದು ಗ್ಯಾರಂಟಿ. ಅಶೋಕ್ ವಿರುದ್ಧವೇ ಎಮ್ಮೆಲ್ಲೆ ಕ್ಯಾಂಡಿಡೇಟಾಗಿ ನಿಂತಿದ್ದ ಕಬಡ್ಡಿಬಾಬು ಯಕಶ್ಚಿತ್ ಪಾಲಿಕೆ ಪುಢಾರಿಗಿಳಿಯುವುದುಂಟಾ?

ಯಡಿಯೂರು ವಾರ್ಡನ್ನು ಆ ಕಾಲದಿಂದಲೂ ಪ್ರತಿನಿಧಿಸುತ್ತಾ ಬಂದದ್ದು ಕಾಂಗ್ರೆಸ್ ನಾಯಕ ವೆಂಕಟೇಶ್ ರೆಡ್ಡಿ. ಇದನ್ನು ಬಿಸಿಎಂ-ಎ ಮಾಡುವುದರ ಮೂಲಕ ವೆಂಕಟೇಶ್ ರೆಡ್ಡಿಯ ಭವಿಷ್ಯಕ್ಕೇ ಚಪ್ಪಡಿ ಎಳೆದಿದ್ದಾರೆ ಅಶೋಕ್. ಹೀಗೆ ವೆಂಕಟೇಶ್ ರೆಡ್ಡಿಯ ಭದ್ರಕೋಟೆಯಂತಿದ್ದ ಯಡಿಯೂರನ್ನು ಮೀಸಲಾತಿ ಮೂಲಕ ಕಿತ್ತ ಅಶೋಕ್ once again ಲಾಭ ಮಾಡಿಕೊಟ್ಟದ್ದು ಬಿಜೆಪಿಯ ಮತ್ತೊಬ್ಬ ಯುವ ನಾಯಕ ಎನ್.ಆರ್. ರಮೇಶ್‌ಗೆ.



ರಮೇಶ್

ರಮೇಶ್ ಒಂದಾನೊಂದು ಕಾಲಕ್ಕೆ ಯುವ ಕಾಂಗ್ರೆಸ್ಸಿನಲ್ಲಿದ್ದು ರಾಮಲಿಂಗಾರೆಡ್ಡಿಯವರ ಪಾಳಯದಲ್ಲಿದ್ದರು. ಕನ್ನಡ ಚಳವಳಿಯಲ್ಲೂ ಸಕ್ರಿಯನಾಗಿರುವ ರಮೇಶ್ ಜನಪ್ರಿಯ ಮುಖಂಡನೆಂಬುದರಲ್ಲಿ ಎರಡು ಮಾತಿಲ್ಲ. ಯಡಿಯೂರನ್ನು ಜನರಲ್ ವಾರ್ಡನ್ನಾಗಿಸಿದ್ದರೆ ನಿಜಕ್ಕೂ ಪೈಪೋಟಿಯಿರುತ್ತಿತ್ತು. ಮೀಸಲಾತಿಯಿಂದಾಗಿ ರಮೇಶ್ ವಿರುದ್ಧ ಇಲ್ಲಿ ಕಾಂಗ್ರೆಸ್ಸಿನಿಂದಾಗಲಿ, ಜೆಡಿಎಸ್‌ನಿಂದಾಗಲೀ ಕ್ಯಾಂಡಿಡೇಟುಗಳೇ ಗತಿಯಿಲ್ಲ.



ಬಸವರಾಜು

ಕಾಂಗ್ರೆಸ್ಸಿನಿಂದ ಲಕ್ಷ್ಮೀಪತಿ ಯಾದವ್ ಆಲಿಯಾಸ್ ಕರೇಸಂದ್ರ ಲಚ್ಚಿ ಅಥವಾ ಬೀಗಮುದ್ರೆ ಚಂದ್ರ ಟಿಕೆಟ್ಟಿಗಾಗಿ ಕಿತ್ತಾಡುತ್ತಿದ್ದಾರಾದರೂ ಇವರ್‍ಯಾರೂ ರಮೇಶ್ ಸಮಕ್ಕೆ ತೂಗುವವರಲ್ಲ. ಲಕ್ಷ್ಮೀಪತಿ ಪಕ್ಕದ ಕರೇಸಂದ್ರದ ನಿವಾಸಿ. ಬೀಗಮುದ್ರೆ ಚಂದ್ರ ಮತ್ತು ಲಚ್ಚಿಯಂಥ ಪರಮ ಕಂಜೂಸ್‌ಗಳ ಮುಂದೆ ಬಿಜೆಪಿಯ ಎನ್.ಆರ್. ರಮೇಶ್ ನಿರಾಯಾಸವಾಗಿ ಗೆಲ್ಲುವುದಂತೂ ಗ್ಯಾರಂಟಿ.

ಅದೇ ವೆಂಕಟೇಶ್‌ರೆಡ್ಡಿ ನಿಂತಿದ್ದರೆ ಹೀಗಾಗುತ್ತಿತ್ತಾ? ಅಶೋಕ್‌ರ ಇಂಥ ಕುತಂತ್ರದ ಮುಂದುವರಿಕೆಯೇ ಕರೇಸಂದ್ರ ವಾರ್ಡು. ಇದನ್ನು ಮಹಿಳಾ ಮೀಸಲು ಮಾಡಿದ್ದಕ್ಕೆ ಯಾವುದೇ ಸಮರ್ಥನೆಯಾಗಲಿ, ಸಮಂಜಸ ಕಾರಣವಾಗಲಿ ಇದ್ದಂತಿಲ್ಲ. ಹೇಳಿಕೇಳಿ ಇದು ಬಿಜೆಪಿ ನಾಯಕ ಎಂ.ಆರ್. ವೆಂಕಟೇಶ್‌ರ ಭದ್ರಕೋಟೆ. ಹಿಂದೆ ಜೆಡಿಎಸ್ ನಾಯಕರಾಗಿದ್ದ ವೆಂಕಟೇಶ್ ಕಳೆದೆರಡು ಚುನಾವಣೆಗಳಲ್ಲಿ ಅಶೋಕ್ ಗೆಲುವಿಗೆ ಶ್ರಮಿಸಿದ ವ್ಯಕ್ತಿ. ಕನ್ನಡ ಸಾಹಿತ್ಯ ಪರಿಷತ್ತಿನ ಪದ್ಮನಾಭನಗರ ಘಟಕದ ಅಧ್ಯಕ್ಷ ಕೂಡ. ಎಲ್ಲಿ ಯಡಿಯೂರಿನ ವೆಂಕಟೇಶ್ ರೆಡ್ಡಿ ಇಲ್ಲಿಗೂ ಬಂದುಬಿಡುತ್ತಾರೋ ಎಂಬ ಭೀತಿಗೆ ಬಿದ್ದೇ ಮಹಿಳಾ ಮೀಸಲುಗೊಳಿಸಿದ ಅಶೋಕ್ ಕುತಂತ್ರದಿಂದಾಗಿ ಅವರ ಆಪದ್ಬಾಂಧವ ವೆಂಕಟೇಶ್ ಭವಿಷ್ಯಕ್ಕೇ ಕಲ್ಲುಬಿದ್ದಿದೆ. ವಿಧಿಯಿಲ್ಲದೇ ವೆಂಕಟೇಶ್ ತಮ್ಮ ಪತ್ನಿ ಗಾಯಿತ್ರಿಯವರನ್ನು ನಿಲ್ಲಿಸಬೇಕು. ತಮ್ಮ ತಂದೆಯ ಹೆಸರಲ್ಲಿ ಎಂಆರ್‌ವಿ ಫೌಂಡೇಷನ್ ಸ್ಥಾಪಿಸಿ ಸಮಾಜ ಸೇವೆಗಿಳಿದ ವೆಂಕಟೇಶ್ ಸಾಧನೆಗಳಿಂದಾಗಿ ಅವರ ಪತ್ನಿಯ ಗೆಲುವು ಕಷ್ಟವೇನಲ್ಲ. ಹಾಗೊಮ್ಮೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಯಡಿಯೂರಿನ ಮಾಜಿ ಕೌನ್ಸಿಲರ್ ವೆಂಕಟೇಶ್ ರೆಡ್ಡಿಯವರ ಪತ್ನಿ ನಿಂತರೂ ಹೊಸ ವಾರ್ಡಿಗೆ ಹೊಂದಿಕೊಳ್ಳುವ ಹೊತ್ತಿಗೆ ಚುನಾವಣೆಯೇ ಮುಗಿದಿರುತ್ತದೆ. ಹರಿರೆಡ್ಡಿ ಎಂಬ ಮತ್ತೊಬ್ಬ ಲ್ಯಾಂಡ್ ಗ್ರಾಬರ್ ಕೂಡ ತನ್ನ ಪತ್ನಿಗೇ ಕಾಂಗ್ರೆಸ್ ಟಿಕೆಟ್ ಕೊಡಿ ಎಂದು ಹಠಕ್ಕೆ ಬಿದ್ದಿದ್ದಾನೆ.

ಹಾಗೇನಾದರೂ ಮೈತ್ರಿಯಿಂದಾಗಿ ಕರೇಸಂದ್ರ ಜೆಡಿಎಸ್ ತೆಕ್ಕೆಗೆ ಬಿತ್ತೆಂದರೆ ಮಾಜಿ ಮೇಯರ್ ಪದ್ಮಾವತಿ ಗಂಗಾಧರ ಗೌಡರು ಕಣಕ್ಕಿಳಿಯುವುದು ಗ್ಯಾರಂಟಿ. ಆಗಷ್ಟೇ ಜಿದ್ದಾಜಿದ್ದಿ ಏರ್ಪಡುತ್ತದೆ ನಿಜ. ಆದರೆ ಎಂ.ಆರ್. ವೆಂಕಟೇಶ್ ಮಾಡಿಕೊಂಡಿದ್ದ ತಯಾರಿ ಬೇರೆಯವರಿಗಿಲ್ಲವಲ್ಲ; ಇಲ್ಲೂ ಕೂಡ ಬಿಜೆಪಿಗೇ ಲಾಭ ಮಾಡಿಕೊಟ್ಟಿದ್ದಾರೆ ಅಶೋಕ್.

ಹೀಗೆ ಬಿಜೆಪಿಯ ಲಾಭಕ್ಕೆ ತಕ್ಕಂತೆ ಅಶೋಕ್ ಮೀಸಲಾತಿ ಕಲ್ಪಿಸಿಕೊಟ್ಟ ಮತ್ತೊಂದು ವಾರ್ಡೆಂದರೆ ಅದು ಗಣೇಶ್ ಮಂದಿರ. ಇಲ್ಲಿದ್ದ ಮುಸ್ಲಿಂ ಓಟುಗಳೆಲ್ಲ ಜಮಾವಣೆಗೊಂಡಿದ್ದು ಕಾವೇರಿ ನಗರ ಮತ್ತು ಎ.ಕೆ. ಕಾಲೋನಿಗಳಲ್ಲಿ. ಈ ಎರಡೂ ಏರಿಯಾಗಳನ್ನು ಪಕ್ಕದ ಕರೇಸಂದ್ರಕ್ಕೆ ಸೇರಿಸಿಕೊಟ್ಟ ಅಶೋಕ್ ತಮ್ಮ ಮತ್ತೊಬ್ಬ ಶಿಷ್ಯ ಮಾಜಿ ಕೌನ್ಸಿಲರ್ ಬಸವರಾಜ್ ವಿರುದ್ಧ ಬಲಾಢ್ಯರ್‍ಯಾರೂ ನಿಲ್ಲದ ಹಾಗೇ ಬಿಸಿ-ಎ ಮೀಸಲಾತಿಗೀಡು ಮಾಡಿದ್ದಾರೆ. ಪಾಲಿಕೆಯಲ್ಲಿ ವಿರೋಧಿ ನಾಯಕರಾಗಿದ್ದ ಬಸವರಾಜು ವಿರುದ್ಧ ಇಲ್ಲಿ ಕಾಂಗ್ರೆಸ್ಸಿಗಾಗಲಿ, ಜೆಡಿಎಸ್‌ಗಾಗಲಿ ಪ್ರಬಲ ಅಭ್ಯರ್ಥಿಗಳೇ ಗತಿಯಿಲ್ಲ. ಈ ಹಿಂದೆ ಬಿಜೆಪಿಯಲ್ಲೇ ಇದ್ದ ಮೆಂಟಲ್ ಗೋವಿಂದರಾಜು ಎಂಬ ಲ್ಯಾಂಡ್ ಗ್ರಾಬರ್ ಸದ್ಯ ಕಾಂಗ್ರೆಸ್ ಟಿಕೆಟ್ಟಿಗಾಗಿ ಲಾಬಿಗಿಳಿದಿದ್ದಾನೆ. ಹಾಗೊಮ್ಮೆ ಜೆಡಿಎಸ್ ಜೊತೆ ಮೈತ್ರಿಯಾದರೂ ಈತನ ತಮ್ಮ ಮುಕುಂದ ಜೆಡಿಎಸ್ ಅಭ್ಯರ್ಥಿಯಾಗುತ್ತಾನೆ.

ಅಣ್ಣತಮ್ಮಂದಿರ ಪೈಕಿ ಯಾರೇ ಬಸವರಾಜು ವಿರುದ್ಧ ನಿಂತರೂ ನೀರು ಕುಡಿಯಲೇಬೇಕು. ಏಕೆಂದರೆ ಹೊನ್ನಗಿರಿ ನಗರ, ಪಾಪಣ್ಣ ಗಾರ್ಡನ್, ಬನಶಂಕರಿ 2 ನೇ ಹಂತ ಇತ್ಯಾದಿ ಏರಿಯಾಗಳ ಬ್ರಾಹ್ಮಣರು ಮತ್ತು ಮಿಡ್ಲ್ ಕ್ಲಾಸ್ ಮತದಾರರನ್ನೆಲ್ಲ ಬಸವರಾಜು ಕವರ್ ಮಾಡಿಕೊಂಡಾಗಿದೆ. ಅಂಬೇಡ್ಕರ್ ಕ್ರೀಡಾಂಗಣ, ಆಸ್ಪತ್ರೆ, ವಿವಿಧ ಪಾರ್ಕುಗಳು, ಕುವೆಂಪು ಪುತ್ಥಳಿ, ಸ್ವಿಮ್ಮಿಂಗ್ ಪೂಲು, ಸಾಲದ್ದಕ್ಕೆ ಅಶೋಕ್ ಮೂಲಕ ನಾಲ್ಕೂವರೆ ಕೋಟಿಯಷ್ಟು ಕಾಮಗಾರಿ ಕಲ್ಪಿಸಿದ ಬಸವರಾಜು ಲಾಭಕ್ಕಾಗಿಯೇ ಗಣೇಶ ಮಂದಿರ ವಾರ್ಡನ್ನು ರೂಪಿಸಿಕೊಟ್ಟ ಅಶೋಕ್ ತಲೆಗಾರಿಕೆಗೆ ಏನು ತಾನೇ ಸಾಟಿ?

ಇದಕ್ಕೆ ಹೊಂದಿಕೊಂಡಂತೆ ಇರುವ ಹೊಸಕೆರೆಹಳ್ಳಿ ವಾರ್ಡಿನಲ್ಲೂ ಇದೇ ಕತೆ. ರೌಡಿ ಪರಂಧಾಮನಿಂದ ಕೊಲೆಯಾಗದೇ ಹೋಗಿದ್ದರೆ ಅಶೋಕ್ ಬಂಟ ಇಟ್ಟಮಡುಬಾಬು ಇಲ್ಲಿ ಬಿಜೆಪಿ ಅಭ್ಯರ್ಥಿಯಾಗುತ್ತಿದ್ದ. ಈಗ ಆತನ ಉತ್ತರಾಧಿಕಾರಿಯಾಗಿ ನಾರಾಯಣ ರೆಡಿಯಾಗಿದ್ದಾನೆ. ಕಾಂಗ್ರೆಸ್ಸಿನಿಂದ ಡೀಕೆ ಶಿಷ್ಯ ರಮೇಶ್ ನಿಂತರೂ ಬಿಜೆಪಿ ನೆಮ್ಮದಿಗೇನೂ ಭಂಗವಿಲ್ಲ. ಮಿಕ್ಕಂತೆ ಚಿಕ್ಕಲಸಂದ್ರ ವಾರ್ಡನ್ನು ಜನರಲ್ ಕ್ಯಾಟಗರಿ ಮಾಡಿದ ಅಶೋಕ್ ಕುತಂತ್ರಕ್ಕೆ ಕಾರಣವೇ ಇಲ್ಲ. ಇಲ್ಲಿರುವವರೆಲ್ಲ ಚಿತ್ತೂರು ಮೂಲದ ನಾಯ್ಡುಗಳೇ. ಬಿಜೆಪಿಯಿಂದ ವೆಂಕಟಸ್ವಾಮಿ ನಾಯ್ಡು ನಿಂತರೆ ದಳದಿಂದ ಚಿನ್ನಸ್ವಾಮಿ ನಾಯ್ಡು ನಿಲ್ಲುತ್ತಾನೆ. ಕಾಂಗ್ರೆಸ್ಸಿನಿಂದ ಗುರಪ್ಪನಾಯ್ಡು ಅಥವಾ ಇನ್ನಾರೋ ನಾಯ್ಡು ನಿಂತರೂ ಫೈಟು ಬೀಳುವುದು ನಾಯ್ಡುಗಳ ಮಧ್ಯೆ ತಾನೆ?


ಎತ್ತಿಂದೆತ್ತ ಬಂದರೂ ಪದ್ಮನಾಭನಗರವನ್ನು ಬಿಜೆಪಿಯ ಭದ್ರಕೋಟೆಯಾಗಿಸುವ ಅಶೋಕ್ ಕುತಂತ್ರದ ಹೊರತಾಗಿ ಬೇರೇನೂ ಕಾಣಿಸುತ್ತಿಲ್ಲ.

ತಾನೊಬ್ಬ ಮಂತ್ರಿಯೆಂಬ ಕನಿಷ್ಠ ಸೌಜನ್ಯ ಕೂಡ ಮಂತ್ರಿ ಅಶೋಕ್ ತೋರಿಲ್ಲ.

● ರಾ. ಸೋಮನಾಥ್

ಮುಸ್ಲಿಂ ದ್ವೇಷಕ್ಕೆ ದಿವಾನ್ ಆಲಿ ಬಲಿ

ಅಶೋಕ್ ಚೆಡ್ಡಿ ಬುದ್ಧಿಗೆ ಬಲಿಯಾದ ಬನಶಂಕರಿಯ ಮುಸ್ಲಿಂ ನಾಯಕನೆಂದರೆ ಆತ ದಿವಾನ್ ಆಲಿ ಅಲಿಯಾಸ್ ಮೊಹಮ್ಮದ್ ಆಲಿ. ಇಡೀ ಪದ್ಮನಾಭ ನಗರ ಕ್ಷೇತ್ರದ ಎಂಟು ವಾರ್ಡುಗಳ ಪೈಕಿ ಯಾವೊಂದು ವಾರ್ಡಿನಲ್ಲೂ ಮುಸ್ಲಿಂ ಕೌನ್ಸಿಲರ್‌ಗಳಾರೂ ಗೆಲ್ಲಲೇ ಕೂಡದೆಂಬ ಅಶೋಕ್ ದುರಾಲೋಚನೆಯಿಂದಾಗಿ ಬನಶಂಕರಿ ವಾರ್ಡ್ ಬಿಸಿಎಂ-ಬಿ ಕ್ಯಾಟಗರಿಯಾಗಿದೆ.



ದಿವಾನ್ ಅಲಿ

ಬಿಸಿಎಂ-ಎ ಆಗಿದ್ದರೆ ದಿವಾನ್ ಆಲಿಯ ಹೊರತಾಗಿ ಬೇರೆ ಯಾರೂ ಇಲ್ಲಿಂದ ಗೆಲ್ಲಲು ಸಾಧ್ಯವಿರಲಿಲ್ಲ. ಒಂದಾನೊಂದು ಕಾಲಕ್ಕೆ ಭೂಗತ ಲೋಕದಲ್ಲಿ ಹೆಸರು ಮಾಡಿದ್ದ ದಿವಾನ್ ಆಲಿ ಕ್ರಮೇಣ ಪಾಪಕೂಪ ತೊರೆದು ಸಮಾಜ ಸೇವೆಗೆ ನಿಂತ. ಗಣೇಶೋತ್ಸವ, ರಾಜ್ಯೋತ್ಸವ, ಅಣ್ಣಮ್ಮ ಇತ್ಯಾದಿ ಕಾರ್ಯಕ್ರಮಗಳಿಗೆಲ್ಲ ತಾನೇ ನಿಂತು ನೆರವಾದ. ಕಳೆದ ಪಾಲಿಕೆ ಚುನಾವಣೆಯಲ್ಲಿ ಪಕ್ಷೇತರವಾಗಿ ನಿಂತೇ ಸರಿಸುಮಾರು ಮೂರು ಸಾವಿರದಷ್ಟು ಮತಗಳಿಸಿದ್ದ ಆಲಿಯ ತಾಕತ್ತು ಕಂಡೇ ಜೆಡಿಎಸ್ ನಾಯಕ ಕುಮಾರಸ್ವಾಮಿ ತಮ್ಮ ಪಕ್ಷಕ್ಕೆ ಸೇರಿಸಿಕೊಂಡರು.


ಏಕೆಂದರೆ ಬನಶಂಕರಿ ವಾರ್ಡೊಂದರಲ್ಲೇ 19 ಸಾವಿರದಷ್ಟು ಮುಸ್ಲಿಂ ಮತಗಳಿವೆ. ಹಿಂದೂ ಮತಗಳ ಸಂಖ್ಯೆ ಕೇವಲ ಎಂಟು ಸಾವಿರ ಮಾತ್ರ. ಕಾಂಗ್ರೆಸ್ ಕೂಡ ದಿವಾನ್ ಆಲಿಯನ್ನು ಸೆಳೆದುಕೊಳ್ಳಲು ಮುಂದಾಗಿತ್ತು. ಕಳೆದ ಹತ್ತು ವರ್ಷಗಳಿಂದ ಒಂದಲ್ಲಾ ಒಂದು ಜನಪರ ಕಾರ್ಯಕ್ರಮ ನಡೆಸುತ್ತಾ ಪಾಲಿಕೆ ಚುನಾವಣೆಗಾಗಿ ಅಣಿಯಾಗಿದ್ದ ದಿವಾನ್ ಆಲಿ ಹೇಗಿದ್ದರೂ ಗೆಲ್ಲುತ್ತಾನೆಂಬುದು ಗೊತ್ತಿದ್ದೇ ಅಶೋಕ್ ಬನಶಂಕರಿ ವಾರ್ಡನ್ನು ಬಿಸಿ-ಬಿ ಮಾಡಿಬಿಟ್ಟರು. ಅಂದರೆ ಮುಸ್ಲಿಮರ್‍ಯಾರೂ ನಿಲ್ಲುವಂತಿಲ್ಲ. ಹತ್ತೊಂಭತ್ತು ಸಾವಿರದಷ್ಟು ಮುಸ್ಲಿಮರಿದ್ದೂ ಯಾರೇ ಒಬ್ಬ ಮುಸ್ಲಿಂ ನಿಲ್ಲದಂತೆ, ಗೆಲ್ಲದಂತೆ ಷಡ್ಯಂತ್ರ ಹೂಡಿದ ಅಶೋಕ್ ಹುನ್ನಾರದ ವಿರುದ್ಧ ಸದ್ಯ ಪದ್ಮನಾಭನಗರದ ಮುಸ್ಲಿಮರು ಕೋರ್ಟ್ ಮೆಟ್ಟಿಲು ಹತ್ತಿದ್ದಾರೆ. ●

ಯಡ್ಡಿ-ರೆಡ್ಡಿಗಳ ಜೋಡಿ ಪಾತ್ರ!
ದೇವೇಗೌಡರ 'ಸಿದ್ಧ'ಸೂತ್ರ


ಯಡಿಯೂರಪ್ಪನ ಸರ್ಕಾರವನ್ನು ಹೇಗಾ ದರೂ ಮಾಡಿ ಉರುಳಿಸಲೇಬೇಕು ಎಂದು ಪಣತೊಟ್ಟಿರುವ ಮಾಜಿ ಪ್ರಧಾನಿ ದೇವೇ ಗೌಡರು, ಆ ಕಾರಣಕ್ಕಾಗಿ ಸಿದ್ದರಾಮಯ್ಯನ ಮೇಲಿನ ದ್ವೇಷ, ಹಗೆತನವನ್ನು ಸದ್ಯಕ್ಕೆ ಬದಿಗಿಟ್ಟಿದ್ದಾರೆ. ಯಡ್ಡಿಯನ್ನು ಮುಗಿಸುವುದರ ಜೊತೆಜೊತೆಗೆ ತನ್ನ ಮತ್ತು ತನ್ನ ಕುಟುಂಬದ ಸದ್ಯದ ಪರಮ ಶತ್ರುಗಳಾದ ಗಣಿ ರೆಡ್ಡಿಗಳನ್ನೂ ರಾಜಕೀಯವಾಗಿ ಮುಗಿಸಿಬಿಡುವ ಉದ್ದೇಶ ದಿಂದಲೇ ದೇವೇ ಗೌಡರು ಕಾಂಗ್ರೆಗೆ ವಲಸೆ ಹೋದ ಸಿದ್ದರಾಮಯ್ಯನವರ ಬಗ್ಗೆ ಇತೀಚೆಗೆ ಮೃದು ಧೋರಣೆಯನ್ನು ತಾಳಿದ್ದಾರೆ.

ರಾಜ್ಯ ರಾಜಕೀಯದಲ್ಲಿ ಕ್ಷಣಕ್ಷಣಕ್ಕೂ ಮೈತ್ರಿ, ಅಪವಿತ್ರ ಮೈತ್ರಿ ಮತ್ತು ಅನೈತಿಕ ಮೈತ್ರಿಗಳ ಆಲಿಂಗನದಾಟ ನಡೆಯುತ್ತಲೇ ಇದೆ.


ಮೊನ್ನೆ ಮೊನ್ನೆ ತನಕ ಸಾಂಪ್ರದಾಯಿಕ ಶತ್ರುಗಳಂತೆ ಬೀದಿ ಕಾಳಗದಲ್ಲಿ ತೊಡಗಿದ್ದ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಬಳ್ಳಾರಿ ಗಣಿದಣಿಗಳಾದ ಜನಾರ್ದನ ರೆಡ್ಡಿಯ ಗ್ಯಾಂಗು ಈಗ ತೆರೆಮರೆಯಲ್ಲಿ ಪರಸ್ಪರ ಅಪ್ಪಿಕೊಂಡು ಮುದ್ದಾಡುತ್ತಿವೆ. ಹಾಗೆಯೇ ಇತ್ತೀಚಿನತನಕ ಕಡುವೈರಿಗಳಂತೆ ನಿತ್ಯ ವಾಕ್‌ಸಮರ ಮತ್ತು ಕಾಲೆಳೆಯುವಿಕೆಯಲ್ಲಿ ತೊಡಗಿದ್ದ ಮಾಜಿ ಪ್ರಧಾನಿ ದೇವೇಗೌಡರು ಮತ್ತು ಭಾವಿ ಮುಖ್ಯಮಂತ್ರಿ ಯಾಗುವ ಕನಸು ಕಾಣುತ್ತಿರುವ ಸಿದ್ಧರಾಮಯ್ಯ ನಡುವೆ ಈಗ 'ಕದನ ವಿರಾಮ' ಘೋಷಣೆ ಯಾಗಿದೆ. ಮಾತ್ರವಲ್ಲ ಇಬ್ಬರೂ ಇನ್ನೇನು ಕೆಲವೇ ದಿನಗಳಲ್ಲಿ ಬಹಿರಂಗವಾಗಿ ಒಬ್ಬರ ಹೆಗಲಮೇಲೆ ಮತ್ತೊಬ್ಬರು ಕೈಯಿಟ್ಟು ಛಾಯಾಗ್ರಾಹಕರಿಗೆ ಪೋಸು ಕೊಡುವ ದಿನವೂ ದೂರವಿಲ್ಲ ಎಂದು ಕಾಣಿಸುತ್ತಿದೆ. ಈ ಎಲ್ಲಾ ಸಂಗತಿಗಳು ರಾಜಕೀಯದಲ್ಲಿ 'ಯಾರೂ ಆಜನ್ಮ ಶತ್ರುಗಳಾಗಿ ಉಳಿಯುವುದಿಲ್ಲ' ಎಂಬ ಮಾತನ್ನು ಮತ್ತೊಮ್ಮೆ ನೆನಪಿಸುತ್ತದೆ.



ಯಡಿಯೂರಪ್ಪನ ಸರ್ಕಾರವನ್ನು ಹೇಗಾ ದರೂ ಮಾಡಿ ಉರುಳಿಸಲೇಬೇಕು ಎಂದು ಪಣತೊಟ್ಟಿರುವ ಮಾಜಿ ಪ್ರಧಾನಿ ದೇವೇಗೌಡರು, ಆ ಕಾರಣಕ್ಕಾಗಿ ಸಿದ್ದರಾಮಯ್ಯನ ಮೇಲಿನ ದ್ವೇಷ, ಹಗೆತನವನ್ನು ಸದ್ಯಕ್ಕೆ ಬದಿಗಿಟ್ಟಿದ್ದಾರೆ. ಯಡ್ಡಿಯನ್ನು ಮುಗಿಸುವುದರ ಜೊತೆಜೊತೆಗೆ ತನ್ನ ಮತ್ತು ತನ್ನ ಕುಟುಂಬದ ಸದ್ಯದ ಪರಮ ಶತ್ರುಗಳಾದ ಗಣಿ ರೆಡ್ಡಿಗಳನ್ನೂ ರಾಜಕೀಯವಾಗಿ ಮುಗಿಸಿಬಿಡುವ ಉದ್ದೇಶ ದಿಂದಲೇ ದೇವೇಗೌಡರು ಕಾಂಗ್ರೆಗೆ ವಲಸೆ ಹೋದ ಸಿದ್ದರಾಮಯ್ಯನವರ ಬಗ್ಗೆ ಇತೀಚೆಗೆ ಮೃದು ಧೋರಣೆಯನ್ನು ತಾಳಿದ್ದಾರೆ.



ತಮಾಷೆಯೆಂದರೆ ದೇವೇಗೌಡರು ಈ ರೀತಿ ಚೆಡ್ಡಿ-ಯಡ್ಡಿ-ರೆಡ್ಡಿಗಳ ಸರ್ಕಾರವನ್ನು ಉರುಳಿಸಲು ತಂತ್ರಗಾರಿಕೆಯನ್ನು ಹೆಣೆಯುತ್ತಿದ್ದಾಗಲೇ ರೆಡ್ಡಿ ಸಹೋದರರು ಕೂಡಾ ಎಚ್ಚೆತ್ತುಕೊಂಡಿದ್ದಾರೆ. ಕಳೆದೆರಡು ತಿಂಗಳಿಂದ ಬಳ್ಳಾರಿಯಿಂದಲೇ ಕಾರ್ಯ ನಿರ್ವ ಹಿಸುತ್ತಿದ್ದ ರೆಡ್ಡಿ ಸಹೋದರರು ಈಗ ಬೆಂಗಳೂರಿಗೆ ಬಂದು ಮುಖ್ಯಮಂತ್ರಿ ಯಡಿ ಯೂರಪ್ಪರೊಂದಿಗೆ ಗುಪ್ತ ಸಮಾಲೋಚನೆಯಲ್ಲಿ ತೊಡಗಿದ್ದಾರೆ. ಇದಕ್ಕೆ ಕಾರಣ 'ಯಡ್ಡಿ ಸರ್ಕಾರ ಒಂದು ವೇಳೆ ಬಿದ್ದು ಹೋಯಿತೆಂದರೆ ರಾಜಕೀಯವಾಗಿ ತಾವು ಕೂಡಾ ಫಿನಿಷ್ ಆದಂತೆ' ಎಂಬ ಸತ್ಯದ ಅರಿವು ರೆಡ್ಡಿಗಳಿಗಾಗಿದೆ. ಆ ಕಾರಣಕ್ಕಾಗಿಯೇ ಮೊನ್ನೆಮೊನ್ನೆಯವರೆಗೆ ಯಡಿಯೂರಪ್ಪನವರ ವಿರುದ್ಧ ಬಂಡಾಯದ



ಕಹಳೆ ಊದಿ ರಂಪಾಟ ಮಾಡಿದ್ದ ರೆಡ್ಡಿಗಳು ಈಗ ಯಡ್ಡಿಯ ಜೊತೆ ಸ್ನೇಹಹಸ್ತ ಚಾಚಿದ್ದಾರೆ. ಅಂದರೆ ಯಡ್ಡಿ ಮತ್ತು ರೆಡ್ಡಿ ಇಬ್ಬರೂ ಒಟ್ಟುಗೂಡಿ ದೇವೇಗೌಡರ ಕುತಂತ್ರಗಳನ್ನು ಎದುರಿಸಲು ತಯಾರಾಗುತ್ತಿದ್ದಾರೆ.

ಅಂದರೆ ಕರ್ನಾಟಕದ ರಾಜಕೀಯದ ಅಖಾಡದಲ್ಲಿ ಹೊಸ ಜಂಗೀ ಕುಸ್ತಿಗೆ ವೇದಿಕೆ ಸಿದ್ಧವಾಗಿದೆ. ಒಂದು ತಿಂಗಳಿನ ಹಿಂದೆ ನಡೆದ ಕುಸ್ತಿಯಲ್ಲಿ ಬೆಂಗಳೂರಿನಿಂದ ದೆಹಲಿತನಕ ರೆಡ್ಡಿ ಮತ್ತು ಯಡ್ಡಿ ಪರಸ್ಪರ ಸೆಣಸಾಡುತ್ತಾ ತಮ್ಮ ಅಧಿಕಾರ ದಾಹವನ್ನು ಪ್ರದರ್ಶಿಸಿ ಜನರಲ್ಲಿ ವಾಕರಿಕೆ ಮೂಡಿಸಿದ್ದರು. ಇವರಿಬ್ಬರು ಇನ್ನೆಂದೂ ಒಟ್ಟಾಗದಷ್ಟು ದೂರ ಸರಿದಿದ್ದಾರೆ ಎಂದೇ ರಾಜಕೀಯ ಪಂಡಿತರು ವ್ಯಾಖ್ಯಾನಿಸಿದ್ದರು. ಆದರೆ ಈ ಬಾರಿಯ ಕುಸ್ತಿ ಪಂದ್ಯಕ್ಕೆ ಇವರಿಬ್ಬರೂ ಒಂದೇ ತಂಡದಲ್ಲಿ ಕಾಣಿಸಿಕೊಳ್ಳುವ ಮುಖಾಂತರ ಎಲ್ಲರಲ್ಲೂ ಅಚ್ಚರಿ ಮೂಡಿಸಿದ್ದಾರೆ. ಆದರೆ ಮುದಿ ಕುಸ್ತಿಪಟು ದೇವೇಗೌಡರು ಏಕಾಂಗಿಯಾಗಿ ಇವ ರಿಬ್ಬರನ್ನೂ ಒಂದೇ ಏಟಿಗೆ ಮುಗಿಸಿ ಬಿಡಲು ತೊಡೆತಟ್ಟಿ ನಿಂತಿದ್ದಾರೆ.


ಈ ರಾಜಕೀಯ ತಂತ್ರಗಾರಿಕೆಯ ಹಿಂದಿನ ಗೇಮ್ ಪ್ಲಾನ್ ಹೀಗಿದೆ:

ಯಡ್ಡಿ ವಿರುದ್ಧ ಬಂಡಾಯದ ಬಾವುಟವನ್ನು ಮೊದಲು ಹಾರಿಸಿದ ಶಾಸಕ ರೇಣುಕಾ ಚಾರ್ಯ ನೇತೃತ್ವದಲ್ಲಿ ಸುಮಾರು 20 ಜನ ಶಾಸಕರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಯಡ್ಡಿ ಸರ್ಕಾರ ಬಹುಮತ ಕಳೆದುಕೊಳ್ಳುವಂತೆ ಮಾಡುತ್ತಾರೆ. ಆಗ 224 ಸದಸ್ಯತ್ವವುಳ್ಳ ವಿಧಾನ ಸಭೆಯ ಬಲ 204ಕ್ಕೆ ಇಳಿಯುತ್ತದೆ. ಆ ಸಂದರ್ಭದಲ್ಲಿ 79 ಶಾಸಕರನ್ನು ಹೊಂದಿರುವ ಕಾಂಗ್ರೆಗೆ 28 ಶಾಸಕರನ್ನು ಹೊಂದಿರುವ ದೇವೇಗೌಡರ ಜನತಾದಳ ಬೆಂಬಲ ಘೋಷಿಸುತ್ತದೆ. ಆಗ ಕಾಂಗ್ರೆ-ದಳದ ಮೈತ್ರಿಕೂಟದ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬರುತ್ತದೆ. ಇದು ಯಡ್ಡಿಯನ್ನು ಅಧಿಕಾರದಿಂದ ಕೆಳಗಿಳಿಸಲು ದೇವೇಗೌಡರು ಹೆಣೆದಿರುವ ರಾಜಕೀಯ ತಂತ್ರಗಾರಿಕೆ.


ರೇಣುಕಾಚಾರ್ಯ ನೇತೃತ್ವದಲ್ಲಿ ಶಾಸಕರಾದ ಬಿ.ಎಸ್.ಬೆಳ್ಳುಬ್ಬಿ, ಗೋಪಾ ಲಕೃಷ್ಣ ಜೊತೆಗೆ ಸತೀಶ್ ಜಾರಕಿ ಹೊಳಿಯಂತಹ ರೆಡ್ಡಿಯ ಕಟ್ಟಾ ಬೆಂಬಲಿಗರು ಕೂಡಾ ಈಗ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದೆ ಬಂದಿದ್ದಾರೆ. ಇದರರ್ಥ ಬಳ್ಳಾರಿ ಗಣಿದಣಿಗಳ ಮುಷ್ಟಿಯಲ್ಲಿದ್ದ ಶಾಸಕರು ನಿಧಾನವಾಗಿ ಹೊರಬಂದು ತಮ್ಮದೇ ಆದ ಒಂದು ಅತೃಪ್ತರ ಗುಂಪನ್ನು ಕಟ್ಟಿಕೊಂಡಿದ್ದಾರೆ. ಅಂದರೆ ಈಗ ರೆಡ್ಡಿಗಳ ಜಂಘಾಬಲ ಉಡುಗಿಹೋಗಿದೆ. ಇದಕ್ಕೆಲ್ಲ ಪ್ರಮುಖ ಕಾರಣ ರೆಡ್ಡಿ ಸಹೋದರರ ಧನಬಲದ ಅಹಂಕಾರ.

ರೆಡ್ಡಿ ಗ್ಯಾಂಗಿನ ನೇತೃತ್ವದಲ್ಲಿ ಭುಗಿಲೆದ್ದಿದ್ದ ಭಿನ್ನಮತ ತಾರಕಕ್ಕೇರಿದಾಗ ಶಾಸಕರಿಗೆಲ್ಲಾ ಕೋಟಿಕೋಟಿ ರೂ.ಗಳನ್ನು ನೀಡಿ ರೆಡ್ಡಿಗಳು ತಮ್ಮೆಡೆ ಸೆಳೆದಿದ್ದಾರೆ ಎಂದೇ ಎಲ್ಲರೂ ತರ್ಕಿಸಿದ್ದರು. ಅದಕ್ಕೆ ಪೂರಕವೆಂಬಂತೆ ಹೈದರಾಬಾದ್‌ನ ಪಂಚತಾರಾ ರೆಸಾರ್ಟ್‌ನಲ್ಲಿ ಈ ಶಾಸಕರನ್ನೆಲ್ಲ ಯಾರ ಕೈಗೂ ಸಿಗದಂತೆ ಗುಟ್ಟಾಗಿ ಇರಿಸಿಕೊಂಡಿದ್ದರು. ಇವೆಲ್ಲವೂ ಭಿನ್ನಮತೀಯ ಶಾಸಕರುಗಳ ಇಮೇಜಿಗೆ ಭಾರೀ ದೊಡ್ಡ ಏಟನ್ನು ನೀಡಿತ್ತು, ಅದನ್ನು ಅವರು ಸಹಿಸಿಕೊಳ್ಳುತ್ತಿದ್ದರೇನೋ. ಆದರೆ ರೆಡ್ಡಿ ದಣಿಗಳು ಈ ಶಾಸಕರಿಗೆ ಹಣದ ಆಮಿಷವನ್ನು ತೋರಿಸಿದರೇ ವಿನಃ ಯಾವನಿಗೂ ಮಾತುಕೊಟ್ಟಂತೆ ಕೋಟಿ ಕೋಟಿ 'ಸಂಭಾವನೆ'ಯನ್ನು ನೀಡಲಿಲ್ಲವಂತೆ. ಸಹಜವಾಗಿಯೇ ಆ ಶಾಸಕರಿಂದ ಇಂತಹ 'ಘೋರ ಅವಮಾನ'ವನ್ನು ಸಹಿಸಿಕೊಳ್ಳಲಾಗಿಲ್ಲ!


ಈ ಮಧ್ಯೆ ಇನ್ನೊಂದು ಜ್ಞಾನೋದಯವೂ ರೆಡ್ಡಿ ಬಣದಲ್ಲಿದ್ದ ಶಾಸಕರಿಗೆ ಆಗಿದೆ. ಅದೇನೆಂದರೆ ಶಾಸಕರನ್ನು ತಮ್ಮ ಬೆನ್ನಿಗೆ ಕಟ್ಟಿಕೊಂಡು ಬೆಂಗಳೂರಿನಿಂದ ದೆಹಲಿ ತನಕ ಹಾರಾಡಿದ್ದ, ಹೋರಾಡಿದ್ದ ರೆಡ್ಡಿ ಗ್ಯಾಂಗ್ ತಮಗೆ ಬೇಕಿದ್ದನ್ನೆಲ್ಲ ಯಡ್ಡಿ ಮೂಲಕ ಮಾಡಿಸಿದ ನಂತರ ಅವರು ತಮ್ಮನ್ನು ಬೆಂಬಲಿಸಿದ್ದ ಶಾಸಕರತ್ತ ತಿರುಗಿಯೂ ನೋಡಲಿಲ್ಲ, ಆ ಬಂಡಾಯದಿಂದ ಶಾಸಕರಿಗೆ ಸಿಕ್ಕಿದ್ದೇನು ಎಂದೂ ಚಿಂತಿಸಲಿಲ್ಲ, ಅದರಲ್ಲೂ ಮಂತ್ರಿಗಿರಿಗೆ ಹಪಹಪಿಸುತ್ತಿರುವ ನರ್ಸ್ ರೇಣುಕಾಚಾರಿಗೆ ದಕ್ಕಿದ್ದೇನು ಎಂದೂ, ವಿಚಾರಿಸಲಿಲ್ಲ. ಇದೆಲ್ಲವನ್ನು ಕಂಡು ರೇಣುಕನಿಗೆ ಮತ್ತು ಇತರೆ ಶಾಸಕರಿಗೆ ರೆಡ್ಡಿಗಳು ತಮ್ಮ ಸ್ವಾರ್ಥಕ್ಕಾಗಿ ತಮ್ಮನ್ನೆಲ್ಲ ಗುರಾಣಿಯಾಗಿ ಉಪಯೋಗಿಸಿಕೊಂಡು ಆನಂತರ ಕೈಬಿಟ್ಟರು ಎಂಬುದು ಅರ್ಥವಾಯಿತು.



ಅದಕ್ಕೆ ಅವರೆಲ್ಲ "ಸಾರ್ವಜನಿಕವಾಗಿ ನಮ್ಮ ಮಾನ ಹರಾಜು ಹಾಕಿದ್ದೀರಿ. ಹೀಗಾಗಿ ಮೊದಲೇ ಮಾತನಾಡಿದ ಮೊತ್ತವನ್ನು ನಮಗೆ ನೀಡಿ. ಇಲ್ಲದಿದ್ದರೆ ನಾವೆಲ್ಲ ಕಾಂಗ್ರೆಸ್ ಕಡೆಗೆ ವಲಸೆ ಹೋಗುತ್ತೇವೆ" ಎಂದು 20 ಶಾಸಕರು ಗರಮ್ಮಾಗಿ ರೆಡ್ಡಿಗಳಿಗೆ ಹೇಳಿದರಂತೆ. ಆದರೆ ಈಗ ತಮ್ಮ ಆತ್ಮೀಯ ಮಿತ್ರನಾಗಿದ್ದ ಆಂಧ್ರದ ಮುಖ್ಯಮಂತ್ರಿ ವೈಎಸ್‌ಆರ್ ರೆಡ್ಡಿಯ ಅಕಾಲಿಕ ಸಾವು ಮತ್ತು ಕೇಂದ್ರ ಸರ್ಕಾರದ ಸಿಬಿಐ ತನಿಖೆಯಿಂದಾಗಿ ಕಂಗಾಲಾಗಿರುವ ರೆಡ್ಡಿ ಸಹೋದರರು ಈಗ ರಾಜಕೀಯವಾಗಿಯಾಗಲಿ, ಆರ್ಥಿಕವಾಗಿಯಾಗಲಿ ಅಷ್ಟೇನೂ ಗಟ್ಟಿಯಾಗಿ ಉಳಿದಿಲ್ಲ. ಈ ಸಂದರ್ಭವನ್ನು ಅರ್ಥಮಾಡಿಕೊಂಡ ಶಾಸಕರು ಈಗ ರೆಡ್ಡಿ ಗುಂಪಿಗೆ ಗುಡ್‌ಬೈ ಹೇಳಲು ನಿರ್ಧರಿಸಿರುವುದು ಬಿಜೆಪಿ ಪಕ್ಷದಲ್ಲಿನ ಒಂದು ದೊಡ್ಡ ಬೆಳವಣಿಗೆಯಾಗಿದೆ.



ಆದರೆ ಈ ರಾಜಕೀಯದಾಟದಲ್ಲಿ ದೇವೇಗೌಡರು ಎಲ್ಲಾ ರೀತಿಯಲ್ಲೂ ಮೇಲುಗೈ ಸಾಧಿಸುವ ಲಕ್ಷಣ ಕಾಣಿಸುತ್ತಿದ್ದು ಇದು ಅವರ ರಾಜಕೀಯ ಮುತ್ಸದ್ಧಿತನ ತೋರಿಸುತ್ತದೆ. ಸಿದ್ದರಾಮಯ್ಯನವರನ್ನು ಮುಖ್ಯಮಂತ್ರಿ ಗಾದಿಯಲ್ಲಿ ಕುಳ್ಳಿರಿಸುವ ಜೊತೆಗೆ ತಮ್ಮ ಮುದ್ದಿನ ಮಗ ರೇವಣ್ಣನನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡುವ ತನ್ನ ಬಹುಕಾಲದ ಕನಸೂ ಈಡೇರುತ್ತದೆ ಎಂಬುದು ಅವರ ಲೆಕ್ಕಾಚಾರ. ಅಷ್ಟೇ ಅಲ್ಲ, ತನ್ನ ಮತ್ತೊಬ್ಬ ಪುತ್ರ ಕುಮಾರಸ್ವಾಮಿಗೂ ಕೇಂದ್ರ ಸರ್ಕಾರದಲ್ಲಿ ಸಚಿವ ಪದವಿ ಅಥವಾ ಯಾವುದಾದರೊಂದು ಉನ್ನತ ಸ್ಥಾನವನ್ನು ಕೊಡಿಸುವ ಮಾತುಕತೆಯನ್ನು



ದೇವೇಗೌಡರು ಕಾಂಗ್ರೆ ಹೈಕಮಾಂಡ್ ಜೊತೆ…
ತ್ತಿದ್ದಾರೆ. ಈ ಮಧ್ಯೆ ತಮ್ಮ ಸೊಸೆ ಅನಿತಾ ಕುಮಾ…
ಕೂಡಾ ರಾಜ್ಯ ಸರ್ಕಾರದಲ್ಲಿ ಯಾವುದಾದರೊಂ…
ಸ್ಥಾನ ನೀಡುವುದು ಅವರಿಗೆ ಅಂತಹ ದೊಡ್ಡ ಕ…
ಆಗದು. ಅದರರ್ಥ ಒಂದು ಜಾಗ್ಯೆಯ ತ…
ಮುಂದಿಟ್ಟು, ತನ್ನ ಇತರ ಆಸೆ, ಅಭಿಲಾ…
ಪೂರೈಸುವ ಮಹಾಕಾರ್ಯದಲ್ಲಿ ಗೌಡರು ತೊ…
ರಾಜಕೀಯವಾಗಿ ದೇವೇಗೌಡರಿಗೆ ಇನ್ನೂ ಒಂದ…
ವಿಷಯವೆಂದರೆ ಸಿದ್ದರಾಮಯ್ಯನವರನ್ನು ಮು…
ಮಾಡಿದ ಕ್ರೆಡಿಟ್ ಕೂಡಾ ಅವರಿಗೆ ಸಿಗು…
ಮೂಲಕ ಕುರುಬ ಜನಾಂಗದ ದೃಷ್ಟಿಗೆ ಒಳ…
ದೇವೇಗೌಡರು ಮತ್ತೆ ರಾಜಕೀಯವಾಗಿ ಪ್ರಬಲ…
ಕುರುಬ ಜನಾಂಗವನ್ನು ತಮ್ಮ ತೆಕ್ಕೆಗೆ…
ಕೊಂಡಂತಾಗುತ್ತದೆ.

ಕುಮಾರಸ್ವಾಮಿ ಮತ್ತು ದೇವೇ…
ಸಿದ್ದರಾಮಯ್ಯನ ವಿರುದ್ಧ ಅನೇಕ ಬಾರಿ ಕೆಂಡಕ…
ರೇವಣ್ಣ ಮಾತ್ರ ಎಂದೂ ಸಿದ್ದು ಕಡೆಗೆ ಬಾಣ ಬ…
ಸಿದ್ದು ಬಗ್ಗೆ ಅಪಾರ ಪ್ರೀತಿ ಮತ್ತು ಗೌರವ ಹೊ…
ರೇವಣ್ಣ ಅವರು ಎದುರುಗಡೆ ಸಿಕ್ಕಾಗಲೆಲ್ಲಾ "ಗ…
ನಮಸ್ಕಾರ" ಎಂದು ಸಂಬೋಧಿಸುವುದು …
ಗೊತ್ತಿರುವ ವಿಷಯ. ಹೀಗಾಗಿ ಸಿದ್ದು ಮತ್ತು…
ಜೋಡಿ ಒಂದಾಗಲು ಯಾವುದೇ ರೀತಿಯ…
ಅಡ್ಡಿಯಾಗುವುದಿಲ್ಲ.


ಈ ಹಿಂದೆ ಆಪರೇಷನ್ ಕಮಲ ಮಾಡಿ…
ಶಾಸಕರ ಸಂಖ್ಯೆಯನ್ನು ಹೆಚ್ಚು ಮಾಡಿಕೊಂಡ…
ಯಡಿಯೂರಪ್ಪ ಈಗ ಎದುರ…
ರಾಜಕೀಯ ಸವಾಲನ್ನು ಎದು…
ಮತ್ತೊಮ್ಮೆ ಆಪರೇಷನ್ ಮಾ…
ಹೊರಟಿದ್ದಾರೆ. ತಮಾಷೆಯ
ವಿಷಯವೆಂದರೆ ಡಾ.
ಯಡಿಯೂರಪ್ಪರಿಗೆ ಈ ಬಾರಿ…
ಬಳ್ಳಾರಿಯ ರೆಡ್ಡಿಗಳೇ
ಕಾಂಪೌಂಡರ್‌ಗಳಾಗಿ ಕಾರ್ಯ…
ನಿರ್ವಹಿಸಲು ಮುಂದಾಗಿರುವು…
ಈಗ ಸದ್ಯಕ್ಕೆ ಉಳಿದಿರುವ
ಕುತೂಹಲವೆಂದರೆ ಕಾಂಗ್ರೆಸ್‌ನ…
ಮಾಡುವ 'ಆಪರೇಷನ್' ಯಶ…
ಕಾಣುತ್ತದೋ? ಅಥವಾ ಬಿಜೆಪಿಯವ 'ಆಪರೇ…
ಯಶಸ್ವಾಗುತ್ತದೋ ಎಂಬುದು.

20 ಜನ ಶಾಸಕರು ರಾಜೀನಾಮೆ ನೀಡಿ…
ಅವರಲ್ಲಿ ಕೆಲವರನ್ನು ಮಂತ್ರಿ ಮಾಡುವುದು,
ಕೆಲವರನ್ನು ನಿಗಮ ಮಂಡಳಿಗಳ ಅಧ್ಯಕ್ಷರನ್ನಾ…
ಮಾಡುವುದು ಬಹುತೇಕ ಖಾತ್ರಿಯಾಗಿದೆ. ಅ…
ಆರು ತಿಂಗಳೊಳಗೆ
ಮರುಚುನಾವಣೆಯಲ್ಲಿ
ಜೆಡಿಎಸ್-ಕಾಂಗ್ರೆಸ್ ಜಂಟಿಯಾ…
20 ಜನ 'ತ್ಯಾಗಜೀವಿ'ಗಳನ್ನು
ಗೆಲ್ಲಿಸುವ ಮಾತು ನೀಡಿದೆ. ಅ…
ಈ ಮಧ್ಯೆ 20 ಜನ ಅತೃಪ್ತ
ಶಾಸಕರಲ್ಲೇ ರೇಣುಕಾಚಾರ್ಯ,
ಮತ್ತು ಗೋಪಾಲಕೃಷ್ಣ ಮೊದ…
ಭಿನ್ನಮತೀಯ ನಾಯಕರಿಗೆ ಸ…
ಪದವಿ ನೀಡಲು ಯಡಿಯೂರ…
ತೀರ್ಮಾನಿಸಿ, ಅವರಿಗೆ ಸಂದೇ…
ರವಾನಿಸಿದ್ದಾರೆ. ತನ್ನೆಲ್ಲಾ ಕಾರ್ಯಕ್ರಮಗಳನ್ನು ರ…
ನಗರದ ಹೊರವಲಯದಲ್ಲಿರುವ 'ಜಿಂದಾಲ್'…
ಕೇಂದ್ರದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಯಡಿ…
ಅಲ್ಲಿಂದಲೇ ಮರುತಂತ್ರಗಾರಿಕೆ ಹೆಣೆಯುತ್ತಿದ್ದಾರೆ…
ಚಿಕಿತ್ಸೆ ಪಡೆಯುವುದು ಮ…
ದಿನದಿಂದ ದಿನಕ್ಕೆ ನಿಶ್ಯಕ್ತವಾಗಿರು…
ಸರ್ಕಾರಕ್ಕೂ ಅಲ್ಲಿಂದಲೇ ಚಿಕಿತ್ಸೆ…
ಯತ್ನಿಸುತ್ತಿದ್ದಾರೆ.


ಒಟ್ಟಾರೆಯಾಗಿ ಹೇಳುವ…
ಕರ್ನಾಟಕ ರಾಜ್ಯದ ರಾಜಕೀಯ…
ದಲ್ಲೇ ಎಲ್ಲರೂ ತಲೆತಗ್ಗಿಸು…
ಆಯಾರಾಮ್, ಗಯಾರಾಮ್…
ಹಾಡುಹಗಲಲ್ಲೇ ನಡೆಯುತ್ತಿದೆ.…
ಹಣದ ಅಹಂಕಾರದ ಆಟ, ಮು…
ಯಡ್ಡಿಯ ತಿಕ್ಕಲುತನ ಮತ್ತು…
ರಾಜಕಾರಣಿ ದೇವೇಗೌಡರ ಹೊಸ ಸೂತ್ರ… …
ಮತದಾರರನ್ನು ಅಣಕಿಸುವಂತೆ ಕಾಣಿಸುತ್ತಿದೆ.
ಇದೆಲ್ಲವನ್ನು ಮೂಕಪ್ರೇಕ್ಷಕರಂತೆ ನೋಡುವ…
ರಾಜ್ಯದ ಮತದಾರ ಪ್ರಭುಗಳದ್ದಾಗಿದೆ. ಆದೇನ…
ಈ ಎಲ್ಲಾ ರಾಜಕೀಯ ಅನಿಶ್ಚಿತತೆಗಳಿಗೆ ತೆರೆಬಿದ್ದು…
ಸುದೃಢವಾದ ಸರ್ಕಾರ ರಚನೆಯಾಗಬೇಕಾಗಿ…
ಇಂದಿನ ಪರಿಸ್ಥಿತಿಯ ಅನಿವಾರ್ಯವಾಗಿದೆ.

● ಸದಾಶಿ…

ಸೋನಿಯಾ ಮೇಡಂಗೆ ಇಂಟರೆಸ್ಟ್ ಇಲ್ಲ



ಬಿಜೆಪಿಯಲ್ಲಿ ಮತ್ತೆ ಭಿನ್ನಮತ ಭುಗಿಲೆದ್ದಿದೆ. ಏನಿಲ್ಲವೆಂದರೂ 15 ...ಕರು ರಾಜೀನಾಮೆ ಕೊಟ್ಟು ಬರುತ್ತೇವೆ, ನೀವೇ ಸರ್ಕಾರ ರಚಿಸಿ ...ಮ ಜೆಡಿಎಸ್‌ನ ಕದ ತಟ್ಟುತ್ತಿದ್ದಾರೆ. ಇದರಿಂದ ಉತ್ತೇಜಿತರಾದ ಕುಮಾರ ...ಮಿ, ಸೋನಿಯಾ ಗಾಂಧಿ ಮನೆಯ ಅಂಗಳಕ್ಕೆ ಅಲೆಯಲಾರಂಭಿಸಿದ್ದಾರೆ. ಆದರೆ ಮೇಡಂ ಮನಸ್ಸು ಮಾಡುವಂತೆ ಕಾಣುತ್ತಿಲ್ಲ. ಆತುರದ ...ಕೀಯದಿಂದ ದೂರವಿದ್ದು ಲಾಭ-ನಷ್ಟದ ಲೆಕ್ಕಾಚಾರ ಹಾಕಿಯೇ ಮುಂದೆ ... ಇಡುತ್ತಾ ಬಂದಿರುವ ಸೋನಿಯಾ ಗಾಂಧಿಗೆ ಸದ್ಯ ರಾಜ್ಯದಲ್ಲಿನ ...ಪಿ ಸರ್ಕಾರವನ್ನು ಉರುಳಿಸುವ ಇಚ್ಛೆ ಇಲ್ಲ. ಈ ರೀತಿಯ ರಾಜಕೀಯ ...ಡುವುದಾದರೆ ಈಗಾಗಲೇ ಯಡ್ಡಿ ಸರ್ಕಾರವನ್ನು ...ಳಿಸಲು ಮೂರು ಬಾರಿ ಅವಕಾಶ ಸಿಕ್ಕಿತ್ತು. ...ಲೇ ಜೆಡಿಎಸ್‌ನೊಂದಿಗೆ ಸೇರಿ ಸರ್ಕಾರ ರಚಿಸಿಬಿಡ ...ಬಹುದಿತ್ತು. ಆದರೆ ಸೋನಿಯಾ ಸಹನೆಯ ...ಮೂರ್ತಿಯಂತೆ ವರ್ತಿಸಿ, ಮುತ್ಸದ್ದಿತನ ತೋರಿದ್ದಾರೆ. ...ಗಾಗಿ ಕೆಲ ಬಿಜೆಪಿ ಮತ್ತು ಜೆಡಿಎಸ್ ನಾಯಕರು ...ಡು ಕಾಣುತ್ತಿರುವಂತೆ ಈಗ ಸರ್ಕಾರ ...ಉರುಳಿಸಲೇನೋ ಸೋನಿಯಾ ಕೈ ಹಾಕುವುದಿಲ್ಲ ...ನ್ನುತ್ತಿವೆ ಪಕ್ಷದ ಉನ್ನತ ಮೂಲಗಳು.



...ಅಧಿಕಾರಕ್ಕಾಗಿ ಬಿಜೆಪಿಗೆ ರಾಜೀನಾಮೆ ಕೊಡಲು ...ಸಿದ್ಧವಾಗಿರುವ ಅವಕಾಶವಾದಿಗಳನ್ನು ಕಟ್ಟಿಕೊಂಡು ... ಆತುರದಲ್ಲಿ ಸರ್ಕಾರವನ್ನು ಕೆಡವಿದರೆ ಅದರಿಂದ ...ಗ್ರೆಸ್‌ಗೆ ನಷ್ಟ ಮತ್ತು ಬಿಜೆಪಿಗೇ ಲಾಭ ಎಂಬುದು ಸೋನಿಯಾ ...ರಿಗೆ ಚೆನ್ನಾಗಿ ಅರಿವಿದೆ. ಹೀಗಾಗಿ ಯಡ್ಡಿ ಸರ್ಕಾರವನ್ನು ಹೇಗೆ ಬೇಕಾದರೂ ...ಸಿ, ಆದರೆ ಪರ್ಯಾಯ ಸರ್ಕಾರ ರಚಿಸುವ ಕುರಿತು ಮಾತನಾಡಬೇಡಿ ... ಸೂಚನೆಯನ್ನೂ ರಾಜ್ಯದ ಕಾಂಗ್ರೆಸ್ ನಾಯಕರಿಗೆ ನೀಡಿದ್ದಾರೆ.

...ವಿರೋಧ ಪಕ್ಷವಾಗಿ ಕಾಂಗ್ರೆಸ್ ತನ್ನ ಜವಾಬ್ದಾರಿಯನ್ನು ಮರೆಯಬಾರದು ... ಎಚ್ಚರಿಕೆಯೂ ಸೋನಿಯಾ ಗಾಂಧಿಗಿದೆ. ಆದರೆ ಅವರಷ್ಟು ಫಾಸ್ಟ್ ...ಮತ್ತು ಸೂಕ್ಷ್ಮವಾಗಿ ಯೋಚನೆ ಮಾಡುವ ನಾಯಕರ ಕೊರತೆ ರಾಜ್ಯ ...ಗ್ರೆಸ್‌ನಲ್ಲಿ ಎದ್ದು ಕಾಣುತ್ತಿದೆ. ಅದ್ದರಿಂದ ಹೆಜ್ಜೆಹೆಜ್ಜೆಗೂ ಹಾದಿ ತಪ್ಪುತ್ತಿರುವ ...ಯಡ್ಡಿ-ರೆಡ್ಡಿ ಸರ್ಕಾರವನ್ನು ಸರಿಯಾಗಿ ಎಕ್ಸ್‌ಪೋಸ್ ಮಾಡುವುದನ್ನು ... ಗುಂಪು ರಾಜಕೀಯದಲ್ಲಿ ನಿರತರಾಗಿದ್ದಾರೆ.

...ಬಿಜೆಪಿಯಲ್ಲಾಗಲೀ, ಸರ್ಕಾರದಲ್ಲಾಗಲೀ ಸಂಭವಿಸುವ ಪ್ರತಿಯೊಂದು ...ಣಾತ್ಮಕ ಬೆಳವಣಿಗೆಯನ್ನೂ ಜನತೆಗೆ ತಲುಪಿಸಿ, ಬಿಜೆಪಿಯನ್ನು ಬೆತ್ತಲೆ ...ಬೇಕು. ಆ ಪಕ್ಷದ ಬಗ್ಗೆ ಇದುವರೆಗೆ ಹೊಂದಿದ್ದ ನಂಬಿಕೆಯನ್ನು ಜನ ...ಪೂರ್ಣವಾಗಿ ಕಳೆದುಕೊಳ್ಳುವಂತೆ ಮಾಡಬೇಕು. ಆ ನಂತರವಷ್ಟೇ ಕಾಂಗ್ರೆಸ್ ...ಮತ್ತೆ ಅಧಿಕಾರ ಹಿಡಿಯಬೇಕು ಎಂಬುದು ಮೇಡಂ ಸೋನಿಯಾ ...ಬಯಕೆಯಾಗಿದೆ. ಹೀಗೆ ಮಾಡುವುದರಿಂದ ಮಾತ್ರ ಮತ್ತೆ ಕಾಂಗ್ರೆಸ್ ಪಕ್ಷ ...ಹೆಚ್ಚು ಕಾಲ ಅಧಿಕಾರದಲ್ಲುಳಿಯಲು ಸಾಧ್ಯ ಎಂಬುದು ಅವರ ಅಭಿಪ್ರಾಯ. ...ಗಿಯೇ ರಾಜ್ಯ ಬಿಜೆಪಿ ಇಬ್ಭಾಗವಾಗುವ ಹಂತಕ್ಕೆ ಹೋದಾಗಲೂ ...ದೂ ಅಧಿಕಾರದ ಆಸೆ ಇಲ್ಲದವರಂತೆ ಸುಮ್ಮನಿದ್ದರು. ಆದರೆ ಇದು ...ಕಾಂಗ್ರೆಸ್ ನಾಯಕರಿಗೆ ಅರ್ಥವೇ ಆದಂತಿಲ್ಲ.

...ಣಿ ರೆಡ್ಡಿಗಳ ವಿಷಯವನ್ನೇ ತೆಗೆದುಕೊಳ್ಳಿ, ರಾಜ್ಯ ಕಾಂಗ್ರೆಸ್‌ನ ಎಲ್ಲ ...ಯಕರು ಬರೀ ಮಾತಿನ ಚಾಟಿ ಬೀಸುತ್ತಿದ್ದಾರೆಯೇ ಹೊರತು, ರಾಜ್ಯದ ಜನತೆಯಲ್ಲಿ ರೆಡ್ಡಿಗಳ ಬಗ್ಗೆ, ಅಕ್ರಮ ಗಣಿಗಾರಿಕೆಯ ಬಗ್ಗೆ ಇರುವ ಆಕ್ರೋಶಕ್ಕೆ ಹೋರಾಟದ ರೂಪ ನೀಡಿ, ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿ, ರೆಡ್ಡಿಗಳು ಅಧಿಕಾರ ಕಳೆದುಕೊಳ್ಳುವಂತೆ ಮಾಡುವ ಛಾತಿ ತೋರಿಸುತ್ತಿಲ್ಲ. ರೈತರಿಗೆ ಲಾಠಿ ಏಟು ಕೊಟ್ಟರೂ ಇವರು ಬೀದಿಗೆ ಇಳಿಯಲಾರರು!

ಹೀಗಾಗಿಯೇ ಮೇಡಂ ಸೋನಿಯಾ, ಈಗ ರಾಜ್ಯಪಾಲರ ಮೂಲಕ ಬಿಜೆಪಿ ಸರ್ಕಾರವನ್ನು ಇಕ್ಕಟ್ಟಿನಲ್ಲಿ ಸಿಲುಕಿಸಲು ಹೊರಟಿದ್ದಾರೆ. ರಾಜ್ಯಪಾಲ ಎಚ್.ಆರ್. ಭಾರದ್ವಾಜ್‌ರನ್ನು ಒಮ್ಮೆ ಗಮನಿಸಿ. ಅವರು ಸಂವಿಧಾನದ ಮಿತಿಯಲ್ಲಿಯೇ ರಾಜ್ಯ ಸರ್ಕಾರವನ್ನು ಅವಕಾಶ ಸಿಕ್ಕಾಗಲೆಲ್ಲಾ ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಅಕ್ರಮ ಗಣಿಗಾರಿಕೆಯ ಕುರಿತು ಲೋಕಾಯುಕ್ತರು ನೀಡಿದ ವರದಿಯನ್ನೇ ಇಟ್ಟುಕೊಂಡು ಈಗ ಮುಖ್ಯಮಂತ್ರಿ ಯಡ್ಡಿಗೆ ನೀರಿಳಿಸುತ್ತಿದ್ದಾರೆ. ಇವರನ್ನು ನೋಡಿಯಾದರೂ ರಾಜ್ಯ ಕಾಂಗ್ರೆಸ್ ನಾಯಕರು ನಿದ್ದೆಯಿಂದ ಏಳಬೇಕಿದೆ. ಸೋನಿಯಾ ಗಾಂಧಿಯ ಚಿಂತನೆಯಂತೆ ಸರ್ಕಾರ ತಾನಾಗಿಯೇ ಪತನಗೊಳ್ಳುವಂತೆ ಮಾಡಬೇಕಿದೆ.

ಕ್ರಿಯಾಶೀಲ ಕುಮಾರ

ದಿನದ 24 ಗಂಟೆಯೂ ರಾಜಕೀಯ ಮಾಡುವ ದೇವೇಗೌಡರ ಮಗನಾಗಿ ಕುಮಾರಸ್ವಾಮಿಗೆ ಹೀಗೆ 'ಕೈ' ಕಟ್ಟಿ ಕೂರುವುದು ಒಗ್ಗುತ್ತಿಲ್ಲ. ಬಿಜೆಪಿಯಲ್ಲಿನ ಭಿನ್ನಮತದ ಲಾಭ ಪಡೆಯಲು ಅವರು ಹೊಂಚುಹಾಕುತ್ತಲೇ ಇದ್ದಾರೆ. ಹೀಗಾಗಿಯೇ ಅಧಿಕಾರದ ಹಿಂದೆ ಬಿದ್ದಿರುವ ಬಿಜೆಪಿಯ ಅವಕಾಶವಾದಿಗಳು ಕಾಂಗ್ರೆಸ್ಸನ್ನು ಬಿಟ್ಟು ಕುಮಾರಸ್ವಾಮಿ ಮನೆಗೆ ಭೇಟಿ ನೀಡುತ್ತಿದ್ದಾರೆ. ಕುಮಾರಸ್ವಾಮಿ ಒಂದು 'ಕೈ' ನೋಡೋಣ ಎಂದು ದಿಲ್ಲಿಗೆ ಹೋಗಿ ಸೋನಿಯಾ ಮೇಡಂ ಮನೆಯ ಅಂಗಳದಲ್ಲಿ ಅಲೆದು ಬಂದಿದ್ದಾರೆ.

ಯಾವಾಗಲೂ 'ಯ್ಯಾಕ್ಟೀವ್'ಆಗಿ ಓಡಾಡುವ ಕುಮಾರಸ್ವಾಮಿಯನ್ನು ಕಂಡರೆ ಮೇಡಂಗೂ ಎಲ್ಲೋ ಮಮಕಾರ. ಹಾಗಾಗಿ ಕರೆದು ಮಾತನಾಡಿಸಿದರೂ ಆಶ್ಚರ್ಯವಿಲ್ಲ.

ಒಂದು ವೇಳೆ ಕುಮಾರಸ್ವಾಮಿ ಪಕ್ಕಾ ತಯಾರಿ ನಡೆಸಿ, ಸರ್ಕಾರ ಬೀಳಿಸಲು ಹೊರಟಿದ್ದಾರೆ ಎಂಬುದು ಗೊತ್ತಾದರೆ ಸೋನಿಯಾ ಕೂಡ 'ಎಸ್' ಎಂದು ಹುಸಿನಗೆ ಬೀರಬಹುದು. ಆಗ ಸರ್ಕಾರ ಬೀಳಿಸಿದ ಅಪಕೀರ್ತಿ ಜೆಡಿಎಸ್ ಹೆಗಲೇರುತ್ತದೆ ಎಂಬ ಲೆಕ್ಕಾಚಾರ ಹಾಕಿ ಮತ್ತೊಂದು ಸಮ್ಮಿಶ್ರ ಸರ್ಕಾರಕ್ಕೆ ಅಡಿಪಾಯ ಹಾಕಬಹುದು. ಆದರೆ ಈಗ ಅಂತಹ ಬೆಳವಣಿಗೇಯೇನೂ ಕಾಣಿಸುತ್ತಿಲ್ಲ ಎನ್ನುತ್ತಿವೆ ಕಾಂಗ್ರೆಸ್‌ನ ಉನ್ನತ ಮೂಲಗಳು.

ಮಗನ ಎಲ್ಲ ರೀತಿಯ ರಾಜಕೀಯವನ್ನೂ ಹಿಂಬಾಗಿಲಿನಿಂದ ಬೆಂಬಲಿಸುತ್ತಿರುವ ದೇವೇಗೌಡರು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯರ ಮೇಲೆ ಇದ್ದಕ್ಕಿದ್ದಂತೆ ಅಪಾರ ಪ್ರೀತಿ ತೋರಿಸಿ, 'ಅವರೇ ಮುಂದಿನ ಮುಖ್ಯಮಂತ್ರಿ' ಎಂದು ಪರೋಕ್ಷವಾಗಿ ಹೇಳುವ ಮೂಲಕ ಕಾಂಗ್ರೆಸ್‌ನಲ್ಲಿ ಒಂದು ರೀತಿಯ ಒಡಕನ್ನುಂಟು ಮಾಡುತ್ತಿದ್ದಾರೆ. ಈ ಮೂಲಕ ತಮ್ಮ ಮಗನ ರಾಜಕೀಯ ದಾರಿ ಸುಗಮಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ರಾಜ್ಯ ಕಾಂಗ್ರೆಸ್ ನಾಯಕರು ಮಾತ್ರ ಹಗಲುಗನಸು ಕಾಣುವುದನ್ನು ಬಿಟ್ಟು ಹೊರಬಂದಿಲ್ಲ. ಹೋರಾಟ ಕಟ್ಟುವುದಿರಲಿ, ರಾಜ್ಯದಲ್ಲಿ ಅಧಿಕಾರ ಹಿಡಿಯಲೂ ಕೂಡ ಅವರಿನ್ನೂ ಸಿದ್ಧರಾಗಿಲ್ಲ!

● ನೀರದ ಬೆಂಗಳೂರು

...ರಲಿದೆ ಗಣಿಕಳ್ಳರ ಚಾನಲ್!



...ರಾಜ್ಯದ ಸಂಪತ್ತನ್ನು ಹಗಲು-ರಾತ್ರಿ ಎನ್ನದೆ ಲೂಟಿ ಮಾಡಿ, ಅಧಿಕಾರ ಹಿಡಿದು ಮೆರೆಯುತ್ತಿರುವ ...ಕಳ್ಳರು ಈಗ ತಮ್ಮ ಪರವಾಗಿ ತುತ್ತೂರಿ ಊದುವ ಟಿವಿ ಚಾನಲ್ಲೊಂದನ್ನು ಆರಂಭಿಸಲು ...ರಟಿದ್ದಾರೆ.

...ರಾಜ್ಯದ ಎಲ್ಲ ಮಾಧ್ಯಮಗಳೂ ತಮ್ಮನ್ನು ವಿಲನ್‌ಗಳಂತೆ ಚಿತ್ರಿಸುತ್ತಿವೆ. ಹೀಗಾಗಿ ಎಲ್ಲ ಕಡೆ ... ತಮ್ಮ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಎಷ್ಟೇ ದುಡ್ಡು ಚೆಲ್ಲಿದರೂ ತಮ್ಮ 'ಇಮೇಜ್' ...ಬದಲಾಗುತ್ತಿಲ್ಲ ಎಂದು 'ನೊಂದಿರುವ' ರೆಡ್ಡಿಗಳು ಚಾನಲ್ ಆರಂಭಿಸುವ ತಮ್ಮ ಹಳೆಯ ಪ್ರಾಜೆಕ್ಟ್‌ಗೆ ಮತ್ತೆ ಚಾಲನೆ ನೀಡಿದ್ದಾರೆ. ಇದರ ಜೊತೆಗೆ ...ಮಟ್ಟದ ದಿನಪತ್ರಿಕೆಯನ್ನೂ ಆರಂಭಿಸಲು ಕೂಡ ನಿರ್ಧರಿಸಿದ್ದಾರಂತೆ. ಇದರಿಂದ ರಾಜಕೀಯದಲ್ಲಿ ಮತ್ತು ಸಾಂಸ್ಕೃತಿಕ ವಲಯದಲ್ಲಿ ತಮ್ಮ ಬಗ್ಗೆ ...ಪ್ರಾಯ ಮೂಡಿಸಲು ಸಾಧ್ಯವಾಗುತ್ತದೆ ಎಂಬುದು ರೆಡ್ಡಿಗಳ ಲೆಕ್ಕಾಚಾರ.

...ಇತ್ತೀಚಿಗಿನ ಬೆಳವಣಿಗೆ ಸಂದರ್ಭಗಳಲ್ಲಿ ಮಾಧ್ಯಮಗಳು ತಮ್ಮ ಪರವಾಗಿನ ಸುದ್ದಿಗಳನ್ನು ಆದ್ಯತೆ ನೀಡಿ ಪ್ರಕಟಿಸುತ್ತಿಲ್ಲ (ನಂ.1 ಚಡ್ಡಿ ಪತ್ರಿಕೆ 'ವಿ.ಕ' ...ಹೊರತುಪಡಿಸಿ). ಪತ್ರಕರ್ತರಿಗೆ ವೈಯಕ್ತಿಕವಾಗಿ ಎಷ್ಟೇ ದುಡ್ಡು ಸುರಿದರೂ ಏನೂ ಪ್ರಯೋಜನವಾಗುತ್ತಿಲ್ಲ. ಹೀಗಾಗಿ ತಾವೇ ಮಾಧ್ಯಮ ಧಣಿಗಳೂ ಆದಲ್ಲಿ ...ಷ್ಟಿ ದುಡ್ಡು ಸುರಿಯುವುದೂ ತಪ್ಪುತ್ತದೆ, ಹೊಸ ಇಮೇಜ್ ಕಟ್ಟಿಕೊಳ್ಳಲೂ ಅನುಕೂಲವಾಗುತ್ತದೆ ಎಂದು ಅವರು ಯೋಚಿಸಿದ್ದಾರಂತೆ.

...ಇಲ್ಲಿಯವರೆಗೆ ಗಣಿಧಣಿಗಳ ಪ್ರಚಾರಕನಂತೆ ಕೆಲಸ ಮಾಡುತ್ತಿರುವ ಕಪ್ಪು-ಬಿಳುಪು ಪತ್ರಿಕೆಯ ಸಂಪಾದಕನ ನೇತೃತ್ವದಲ್ಲಿಯೇ ಈ ಚಾನಲ್ ಮತ್ತು ಪತ್ರಿಕೆ ...ಹೊರಬರಲಿವೆಯಂತೆ. ಆಂಧ್ರದಲ್ಲಿ ಈಗ ಹೆಸರು ಮಾಡಿರುವ, ರಾಜಶೇಖರ ರೆಡ್ಡಿ ಕುಟುಂಬದ ಒಡೆತನದ 'ಸಾಕ್ಷಿ' ಪತ್ರಿಕೆ ಮತ್ತು ಚಾನೆಲ್ ಅನ್ನು ಕನ್ನಡದಲ್ಲಿ ... ಈ ಒಂದೆ ಗಣಿಧಣಿಗಳು ಮುಂದಾಗಿದ್ದರು. ಆದರೆ ಇದಕ್ಕೆ 'ಸಾಕ್ಷಿ'ಯ ಮ್ಯಾನೇಜ್‌ಮೆಂಟ್ ಉತ್ಸುಕತೆ ತೋರಿಸಿರಲಿಲ್ಲ. ಹಾಗೆಯೇ ಮೊನ್ನೆ ಕೊನೆಗೂ ...ಬಂದಿದ್ದಾರಂತೆ. ಹೀಗಾಗಿ ತಾವೇ 500 ಕೋಟಿ ರೂ. ಬಂಡವಾಳ ಹೂಡಿ ಚಾನಲ್ ಮತ್ತು ಪತ್ರಿಕೆ ಆರಂಭಿಸಲು ಹೊರಟಿದ್ದಾರೆ.

...ಎಲ್ಲವೂ ಅಂದುಕೊಂಡಂತೆ ನಡೆದಲ್ಲಿ ಮುಂದಿನ ಯುಗಾದಿಯ ಹೊತ್ತಿಗೆ ನಿಮ್ಮ ಮನೆಯ ಟಿವಿಯಲ್ಲಿ ಗಣಿಧಣಿಗಳ ಪರವಾದ ಸುದ್ದಿ ಬಿತ್ತರವಾಗುತ್ತಿರುತ್ತದೆ. ... ಪತ್ರಿಕೆ ಓದಲು ಬಹುಶಃ ನೀವು ಸ್ವಲ್ಪ ಕಾಯಬೇಕಾಗಿ ಬರಬಹುದು.

-ತಮ್ಮಯ್ಯ

ನೋ ಕಾಮೆಂಟ್ಸ್



"ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿ ನಾಟಕ ರಚನೆಗಳನ್ನು ಮಾಡುವುದರಿಂದ ಸ್ವತಂತ್ರವಾದ ಹಾಗೂ ವಿಭಿನ್ನವಾದ ಸ್ತ್ರೀ ಪಾತ್ರಗಳನ್ನು ಸೃಷ್ಟಿಸುವಲ್ಲಿ ಸೋಲುತ್ತಿದ್ದಾರೆ."

-ಡಾ. ವಿಜಯಾ

"ಸಣ್ಣ ರಾಜ್ಯಗಳ ರಚನೆಯಲ್ಲಿ ತಪ್ಪೇನಿಲ್ಲ, ಆದರೆ ಆಳುವವರು ಸಣ್ಣ ಮನಸ್ಸಿನವರಾಗಿರಬಾರದಷ್ಟೆ!"

-ದಿನೇಶ್ ಅಮೀನ್ ಮಟ್ಟು

ನಂಬಿದವರೆನಂಬಿ ಬಿಟ್ರೆಬಿಡಿ

"ಈಗ ನಮ್ಮ ಪಕ್ಷದಲ್ಲಿ ಯಾವ ಭಿನ್ನಮತೀಯತೆಯೂ ಇಲ್ಲ, ಕೆಲವು ಶಾಸಕರು ಒಟ್ಟಿಗೆ ಊಟ ಮಾಡುತ್ತೇವೆಂದು ನನಗೆ ಹೇಳಿಯೇ ರೆಸಾರ್ಟ್‌ಗೆ ಹೋಗಿದ್ದರು."

- ಯಡಿಯೂರಪ್ಪ

"ಬೆಂಗಳೂರು ಹಬ್ಬದಿಂದ ನನಗೆ ವೈಯಕ್ತಿಕವಾಗಿ ಏನೂ ಲಾಭವಿಲ್ಲ, ದಯವಿಟ್ಟು ನನ್ನನ್ನು ನಂಬಿ, ಪ್ಲೀಸ್."

- ನಂದಿನಿ ಆಳ್ವ

ಇದು ಪ್ರಾಣೇಶರ ಮತ್ತೊಂದು ಹಾಸ್ಯ ಪ್ರಸಂಗವೇ?

"ಶಾ.ಮಂ. ಕೃಷ್ಣರಾಯ ಸಂಪಾದನೆಯ 'ತಿಂಮ ದರ್ಶನ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಚಿಂತಕ ಗಂಗಾವತಿ ಪ್ರಾಣೇಶ್ ಪಾಲ್ಗೊಂಡಿದ್ದರು."

- ಪತ್ರಿಕಾ ವರದಿ

ನಿಮ್ಮ ಒಳ್ಳೆಯ ಕೆಲಸಕ್ಕೆ ಪಕ್ಷಾತೀತ ಬೆಂಬಲವೇ ಇದೆ, ಬಿಡಿ!


"ಒಳ್ಳೆಯ ಕೆಲಸಕ್ಕೆ ಪಕ್ಷಾತೀತವಾಗಿ ಹೋರಾಟ ಮಾಡಬೇಕಾದ ಪ್ರತಿಪಕ್ಷಗಳು ಸನ್ಮಾರ್ಗದಲ್ಲಿ ನಡೆಯುತ್ತಿರುವ ನನ್ನ ವಿರುದ್ಧ ಅನಗತ್ಯವಾಗಿ ಟೀಕಿಸುವ ಕೆಲಸ ಮಾಡುತ್ತಿವೆ. ಯಾವುದೇ ಟೀಕೆಗಳಿಗೂ ನಾನು ಜಗ್ಗುವುದಿಲ್ಲ."

- ಜನಾರ್ದನ ರೆಡ್ಡಿ

ಬೆಂಗಳೂರಿನ ಅಭಿವೃದ್ಧಿಯ ಮತ್ತೊಂದು ಮೈಲಿಗಲ್ಲು!

"ಬೆಂಗಳೂರಿನ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ಸಂಖ್ಯೆ ದಿನೇದಿನೇ ಹೆಚ್ಚುತ್ತಿರುವುದರಿಂದ ಬೆಂಗಳೂರಿನಲ್ಲಿ ಇನ್ನೊಂದು ದೊಡ್ಡ ಜೈಲು ನಿರ್ಮಿಸಲಾಗುತ್ತದೆ."

-ಪತ್ರಿಕಾ ವರದಿ



ಕ್ರಿಕೆಟಿಗರ 'ಮೆಂಟಲ್' ಫಿಟ್‌ನೆಸ್

ಮೊನ್ನೆ ನಾನೂರು, ನಾನೂರು ರನ್ನುಗಳ ಮ್ಯಾಚ್ ನಡೀತಲ್ಲ? ಶ್ರೀಲಂಕಾ ಬ್ಯಾಟ್ ಮಾಡುವಾಗ ವೀರೇಂದ್ರ ಸೆಹ್ವಾಗ್ ಶ್ರೀಲಂಕಾ ಗೆಲ್ಲಲಿ ಅಂತಾ ಪ್ರಾರ್ಥಿಸುತ್ತಿದ್ದನಂತೆ! ಆತ ಭಾರತದ ಪರ ಪ್ರಾರ್ಥನೆ ಮಾಡಿದಾಗಲೆಲ್ಲ ಭಾರತ ಸೋತಿದೆಯಂತೆ! ಅದಕ್ಕೆ ಆತ ಈಗ ಯಾವಾಗಲೂ ಎದುರಾಳಿ ತಂಡದ ಪರ ಪ್ರಾರ್ಥನೆ ಮಾಡುತ್ತಾನಂತೆ!

ರಾಹುಲ್ ದ್ರಾವಿಡ್ ಬಲಗಾಲಿಗೆ ಮೊದಲು ಪ್ಯಾಡ್ ಕಟ್ಕೋದಂತೆ; ಬಲಗಾಲಿಟ್ಟು ಮೈದಾನ ಪ್ರವೇಶಿಸುತ್ತಾನಂತೆ; ಮದುವಣಗಿತ್ತಿಯಂತೆ ಅಕ್ಕಿ-ಬೆಲ್ಲದ ಸೇರು ಒದ್ದು ಹೋಗುತ್ತಿಲ್ಲವಷ್ಟೇ. ತೆಂಡೂಲ್ಕರ್‌ದು ಉಲ್ಟಾ. ಈತ ಮೊದಲು ಎಡಗಾಲಿಗೆ ಪ್ಯಾಡ್ ಕಟ್ತಾನಂತೆ. ಗ್ರೌಂಡಿಗೆ ಎಡಗಾಲಿಟ್ಟು ಹೋಗ್ತಾನೋ, ಬಲಗಾಲಿಟ್ಟು ಹೋಗ್ತಾನೋ ಗೊತ್ತಿಲ್ಲ. ಅಥವಾ ಟಿಗ್ ಅಂತಾ ಜಿಗಿದು ಎರಡೂ ಕಾಲುಗಳನ್ನು ಒಮ್ಮೆಲೆ ಇಡ್ತಾನೇನೋ?

ಆಡುವಾಗ ಸೆಹ್ವಾಗ್ ಕಿಸೆಯಲ್ಲಿ ಯಾವಾಗಲೂ ಕೆಂಪು ಕರ್ಚೀಫು ಇರುತ್ತಂತೆ! ಅದಕ್ಕೇ ಇರಬೇಕು ಆತ ಸಿಡಿಗುಂಡಿನಂತೆ ಸ್ಫೋಟಿಸುವುದು! ಗಂಗೂಲಿ ಗ್ರೌಂಡಿಗೆ ಇಳಿವಾಗ ಯಾವಾಗಲೂ ಆತನ ಆಧ್ಯಾತ್ಮಿಕ ಗುರುವಿನ ಫೋಟೋ ಕಿಸೆಯಲ್ಲಿರುತ್ತಿತ್ತಂತೆ!

ಇವು ನಮ್ಮ ಕ್ರಿಕೆಟಿಗರ ಮೂಢನಂಬಿಕೆಗಳು. ಇದು ಇವರ ಮೆಂಟಲ್ ಫಿಟ್‌ನೆಸ್‌ಗೆ ಸಾಕ್ಷಿ!

ಪ್ಯಾಡು, ಗ್ಲೌಸು ಹಾಕಿಕೊಳ್ಳುವಾಗ ಎಡ, ಬಲ ಪ್ರಶ್ನೆ ಬರುತ್ತೆ. ಆದರೆ ಗಾರ್ಡ್ ಹಾಕುವಾಗ ಆ ಸಮಸ್ಯೆ ಇಲ್ಲವಲ್ಲ ಬಿಡಿ.

-ಮಲ್ಲಿ

ಸ್ವಾಮೀಜಿಯೊಬ್ಬರು ತಮ್ಮ ಉತ್ತಮ ನಡೆನುಡಿ, ಉದಾತ್ತ ಚಿಂತನೆ, ಸನ್ನಡತೆ, ಕಾಯಕ ನಿಷ್ಠೆ ಮತ್ತು ಸೇವಾಭಾವನೆಯಿಂದ ಅಪಾರ ಜನಪ್ರೀತಿಯನ್ನು ಗಳಿಸಿ ಕೊಂಡು ಕೆಲಕಾಲ ಅಜ್ಞಾತವಾಗಿ ಬದುಕಿ, ಆನಂತರ ಪುನಃ ಮತ್ತೆ ಅದೇ ಜನಪ್ರೀತಿಯನ್ನು ಗಳಿಸತೊಡಗಿರುವ ಅಪರೂಪದ ಕಥೆ ಇದು.

ಈ ಸ್ವಾಮೀಜಿಯೊಂದಿಗೆ ಕೆಲಕ್ಷಣ ಕಳೆದಿದ್ದೇ ಆದಲ್ಲಿ ನಿಮಗೆ ಖಂಡಿತವಾಗಿಯೂ ಆಶ್ಚರ್ಯವಾಗಬಹುದು. ಇವತ್ತು ಮಠಗಳಲ್ಲಿ ಮೇಲಾಧಿಪತ್ಯಕ್ಕಾಗಿ, ಅಧಿಕಾರಕ್ಕಾಗಿ ತೆರೆಮರೆಯ ಗುದುಮುರುಗಿಗಳೇ ನಡೆಯುತ್ತಿರುವಾಗ; ಮಠದ ಸಂಪತ್ತಿನ ಮೇಲಣ ಮೋಹದಿಂದಾಗಿ ಕೀಳು ರಾಜಕೀಯಕ್ಕೂ ಇಳಿಯಬಲ್ಲ ಮಠಾಧಿಪತಿಗಳೇ ಎಲ್ಲೆಡೆ ಇರುವಾಗ; ಅಲೌಕಿಕ ಬದುಕಿನ ಉಪಾಸನೆಗಳನ್ನು ನೀಡುತ್ತಾ ಮಠಗಳನ್ನೇ ತಮ್ಮ ಲೌಕಿಕ ವಾಂಛೆಗಳಿಗೆ ವೇದಿಕೆಗಳನ್ನಾಗಿ ಮಾಡಿಕೊಂಡಿರುವ ಢೋಂಗಿ ಸ್ವಾಮೀಜಿಗಳ ನಡುವಿನಲ್ಲಿ ತೀರಾ ಪ್ರಾಮಾಣಿಕನಾಗಿ ಬದುಕು ಸಾಗಿಸುತ್ತಿದ್ದವರು ದಾವಣಗೆರೆಯ ನಂದಗುಡಿ ವೃಷಭಾಪುರಿ ಮಠಾಧೀಶ ರಾಗಿದ್ದ ನಂದೀಶ್ವರ ಶಿವಾಚಾರ್ಯ ಸ್ವಾಮೀಜಿ.

ಶಿವಮೊಗ್ಗ, ದಾವಣಗೆರೆ, ಹರಿಹರ, ಹಿರೇಕೆರೂರು, ಹಾವೇರಿ, ಧಾರವಾಡ, ಚಿತ್ರದುರ್ಗ ಭಾಗಗಳಲ್ಲಿರುವ ನೊಳಂಬ ಲಿಂಗಾಯತರಿಗೆ ತಮ್ಮದೇ ಆದ ಬಲಿಷ್ಠ ಮಠ ಒಂದೂ ಇರಲಿಲ್ಲ. ಹಾಸನದ ಯಲಗುಂದ, ಪುಷ್ಪಗಿರಿ, ಅರ್ತಿಕಟ್ಟೆ ಮುಂತಾದ ಶಾಖಾಮಠಗಳನ್ನು ಹೊಂದಿದ್ದರೂ ನಂದಗುಡಿ ವೃಷಭಾಪುರಿ ಮಠ ಅಷ್ಟು ಪ್ರಬಲವಾಗೇನೂ ಇರಲಿಲ್ಲ.

ಆದರೆ ಯಾವಾಗ ನಂದೀಶ್ವರ ಶಿವಾಚಾರ್ಯರು 1992 ರಲ್ಲಿ ಮಠಾಧೀಶರಾಗಿ ಆಗಮಿಸಿದರೋ ಅಂದಿನಿಂದ ಮಠದ ದಿಕ್ಕೇ ಬದಲಾಯಿತು. ತಮ್ಮಲ್ಲಿರುವ ಸಮರ್ಥ ನಾಯಕತ್ವದ ಗುಣದಿಂದಾಗಿ ಕ್ಷಿಪ್ರಗತಿಯಲ್ಲಿ ನಂದಗುಡಿ ಮಠವನ್ನು ಎಲ್ಲರ ಕಣ್ಣುಕುಕ್ಕುವಂತೆ ಬೆಳೆಸಿದರು. ನಂದಗುಡಿ, ಉಕ್ಕಡಗಾತ್ರಿ, ಹೊನ್ನಾಳಿಯ ಹತ್ತೂರು ಎರಹಳ್ಳಿಗಳಲ್ಲಿ ಉತ್ತಮ ಶೈಕ್ಷಣಿಕ ಸಂಸ್ಥೆಗಳನ್ನು ಬೆಳೆಸಿದರು. ಬಿ.ಎಡ್, ಡಿ.ಎಡ್ ಕಾಲೇಜುಗಳು, ಐಟಿಐ, ನರ್ಸರಿ ಕಾಲೇಜುಗಳು ಅದ್ಭುತವಾಗಿ ಅಭಿವೃದ್ಧಿ ಹೊಂದುವಂತೆ ಮಾಡಿದರು.

ಇದೆಲ್ಲಾ ನಡೆಯುತ್ತಿದ್ದಾಗಲೇ ಮಠಕ್ಕೆ ಒಕ್ಕರಿಸಿಕೊಂಡ ಒಂದಷ್ಟು ಮಂದಿ ನಂದೀಶ್ವರ ಶಿವಾಚಾರ್ಯರ ಎಡಬಲ ಗಳಲ್ಲಿ ಎಡತಾಕತೊಡಗಿ ಸ್ವಾಮೀಜಿಯನ್ನು ಹೊಗಳಿ ಹೊನ್ನಶೂಲಕ್ಕೇರಿಸುತ್ತಾ ಹಲವಾರು ವಿಚಾರಗಳಲ್ಲಿ ಅವರನ್ನು ಇಕ್ಕಟ್ಟಿನಲ್ಲಿ ಸಿಲುಕಿಸತೊಡಗಿದರು. ಮಠದಲ್ಲಿ ಹೆಚ್ಚತೊಡಗಿದ ಸಂಪತ್ತಿನ ಮೇಲೆ ಕಣ್ಣಿಟ್ಟಿದ್ದ ಅವರು ನಂದೀಶ್ವರರನ್ನೇ ತಮ್ಮ ನಿಯಂತ್ರಣದಲ್ಲಿಟ್ಟುಕೊಂಡು ತನ್ಮೂಲಕ ಮಠದ ಹಾಗೂ ನೊಳಂಬ ಜನಾಂಗದ ಮೇಲೆ ಹತೋಟಿ ಸಾಧಿಸುವ ರಾಜಕಾರಣವನ್ನು ಶುರುವಿಟ್ಟುಕೊಂಡರು. ಆದರೆ ಕಾಯಕ, ನಿಸ್ವಾರ್ಥ ಸೇವೆಗಳನ್ನೇ ಧರ್ಮ ಎಂದು ನಂಬಿ ಅಂತೆಯೇ ನಡೆಯುತ್ತಿದ್ದ ನಂದೀಶ್ವರರಲ್ಲಿ ಇದೆಲ್ಲಾ ಹೇಸಿಗೆ ಹುಟ್ಟಿಸತೊಡಗಿತು.

ಗೃಹಸ್ಥನಾಗಲು ನಿರ್ಧಾರ

ಅಧಿಕಾರ, ಹಣ, ಆಸ್ತಿ, ಸಂಪತ್ತುಗಳನ್ನೇ ಬಯಸುವ ಹಲವು ಮಠಾಧಿಪತಿಗಳಂತೆ ನಂದೀಶ್ವರ ಶಿವಾಚಾರ್ಯರೂ ಬಯಸಿದ್ದರೆ ಅವರಿಗೆ ಮಠಾಧೀಶರಾಗಿ ಮುಂದುವರೆಯುವುದು ಕಷ್ಟವಾಗುತ್ತಿರಲಿಲ್ಲ. ಆದರೆ ತಮ್ಮ ವ್ಯಕ್ತಿತ್ವವನ್ನೇ ಕಳೆದುಕೊಂಡು, ಮಹಾ ಲೋಭಿಯಾಗಿ, ಗುಂಪುಗಾರಿಕೆ ಮಾಡುತ್ತಾ ಕಾಲಕಳೆಯಲು ಅವರ ಪ್ರಾಮಾಣಿಕ ಮನಸ್ಸು ಒಪ್ಪಲಿಲ್ಲ.

ತನ್ನ ತನು, ಮನವೆಲ್ಲವನ್ನೂ ಧಾರೆ ಎರೆದು ಬಹು ಎತ್ತರಕ್ಕೆ ಏರಿಸಿದ್ದ ಮಠದಲ್ಲಿ ಯಾವಾಗ ಸ್ಥಾಪಿತ ಹಿತಾಸಕ್ತಿಗಳ ಕೈ ಬಲವಾಗತೊಡಗಿತೋ ಆಗ ಬಹುವಾಗಿ ಮನನೊಂದ ನಂದೀಶ್ವರರು ತಮ್ಮ ಬದುಕಿನ ಮಾರ್ಗವನ್ನೇ ಬದಲಾಯಿಸಿ ಕೊಳ್ಳುವ ನಿರ್ಧಾರಕ್ಕೆ ಬಂದರು.

ಆದ್ದರಿಂದ ಈಗ್ಗೆ ಮೂರು ವರ್ಷಗಳ ಹಿಂದೆ - ಅಂದರೆ 2006 ರಲ್ಲಿ - ಮಠಾಧೀಶನ ಸ್ಥಾನವನ್ನು ತಾವು ತೊರೆಯುತ್ತಿದ್ದೇವೆ ಎಂದು ನಂದೀಶ್ವರ ಶಿವಾಚಾರ್ಯ ಸ್ವಾಮೀಜಿ ಘೋಷಿಸಿದಾಗ ಮಠದ ಸಾವಿರಾರು ಭಕ್ತರಿಗೆ ಆಘಾತವೇ ಆಗಿತ್ತು. ಜನ ಎಷ್ಟು ಬೇಡಿಕೊಂಡರೂ ಒಪ್ಪದ ನಂದೀಶ್ವರರು ಪೀಠ ತ್ಯಾಗ ಮಾಡಿ ಅಲ್ಲಿಂದ ಹೊರಟೇ ಹೋದರು. ಹೊಸ ಬದುಕನ್ನು ಹುಡುಕಿಕೊಳ್ಳುವ ಕನಸು ಕಂಡು ಅಲ್ಲಿಂದ ಹೊರಟ ನಂದೀಶ್ವರರು ಸ್ವಲ್ಪ ಕಾಲ ಯಲಗುಂದ ಶಾಖಾ ಮಠದಲ್ಲಿದ್ದು ಬಳಿಕ ಮೈಸೂರು ಭಾಗದಲ್ಲಿ ಸಂಚರಿಸಿ 2007 ರಲ್ಲಿ ಉತ್ತರ ಭಾರತ ಯಾತ್ರೆಗೆ ತೆರಳಿದರು. 2007ರ ಫೆಬ್ರವರಿಯಲ್ಲಿ ಹರಿದ್ವಾರಕ್ಕೆ ಹೋಗಿ ಅಲ್ಲಿ ಸನ್ಯಾಸ ತ್ಯಾಗ ಮಾಡಿದರು.

ಇಷ್ಟರಲ್ಲಾಗಲೇ ವೈವಾಹಿಕ ಜೀವನವನ್ನು ನಡೆಸಲು ನಿರ್ಧರಿಸಿದ್ದ ನಂದೀಶ್ವರರು ಅದಕ್ಕಾಗಿ ಆರಿಸಿಕೊಂಡಿದ್ದು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕು ಸೂಡಂಬಿ ಗ್ರಾಮದ ಗೀತಾ ಕರಡೇರರನ್ನು. ಸಮಾಜ ಸೇವೆಯನ್ನೇ ಗುರಿಯಾಗಿಟ್ಟುಕೊಂಡು ಕಾಲೇಜೊಂದರಲ್ಲಿ ಸಂಬಳ ಪಡೆಯದೇ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದ ಹೆಣ್ಣುಮಗಳು ಈ ಗೀತಾ. ನಂತರ ಅವರು ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿದ್ದರು ಕೂಡ.

ನೊಳಂಬ ಸ್ವಾಮಿ ನಂದೀಶ್ವರ

ಜನಸಾಮಾನ್ಯರ ಅಸಾಮಾನ್ಯ 'ಸ್ವಾಮಿ'




ಇದು ಎರಡು ಸ್ವಾಮಿಗಳ ಕತೆ. ಒಬ್ಬ ರಾಮಚಂದ್ರಾಪುರ ಮಠದ ಸಗಣಿ ... ರಾಘವೇಶ, ಇನ್ನೊಬ್ಬ ನೊಳಂಬ ಸಮುದಾಯದ ನಂದಿಗುಡಿ ಮಠದ ನಂ... ಶಿವಾಚಾರ್ಯ ಸ್ವಾಮಿ. ಮೊದಲನೇ ಸ್ವಾಮಿ ವಿರುದ್ಧ ಹವ್ಯಕ ಸಮುದಾಯ ಪಿ... ಮಾಡಿ ಮಠ ಬಿಟ್ಟು ತೊಲಗು ಎಂದು ಪ್ರತಿಭಟನೆ ನಡೆಸುತ್ತಿದ್ದರೂ ... ಪೀಠಕ್ಕೆ ಗೂಟ ಹೊಡೆದುಕೊಂಡು ಕುಳಿತಿದ್ದಾನೆ. ಇನ್ನು ಎರಡನೇ ಸ್ವಾಮಿ ಸ್ವಇಚ್ಛೆ... ನಂದಿಗುಡಿ ಮಠ ತೊರೆದು, ದೂರದ ಹಳ್ಳಿಗೆ ಹೋಗಿ, ಮದುವೆಯಾ... ಪಾಡಿಗೆ ತಾನು ವ್ಯವಸಾಯ ಮಾಡಿಕೊಂಡಿದ್ದರೂ ಭಕ್ತರು ಮಾತ್ರ ಅವರನ್ನೇ ... ನಿಜವಾದ ಸ್ವಾಮಿ ಎಂದು ಗೌರವಿಸುತ್ತಾ ಸಾವಿರಾರು ಸಂಖ್ಯೆಯಲ್ಲಿ ಅವರ... ಹೋಗಿ ಆಶೀರ್ವಾದ ಪಡೆಯುತ್ತಿದ್ದಾರೆ. ಎಂಥ Contrast ಅಲ್ಲವೇ?

ಗೀತಾರೊಂದಿಗೆ ನಂದೀಶ್ವರರು ಉತ್ತರ ಭಾರತದಲ್ಲೇ ಗೃಹಸ್ಥಾಶ್ರಮಕ್ಕೆ ಕಾಲಿಟ್ಟರು. ನಂತರದಲ್ಲಿ ಕರ್ನಾಟಕಕ್ಕೆ ಹಿಂದಿರುಗಿದ ಈ ಪತಿಪತಿಗಳಿಬ್ಬರೂ ನಡೆಸಿದ್ದು ಅಕ್ಷರಶಃ ಅಜ್ಞಾತವಾಸ.

ಸೊರಬದಲ್ಲಿ ಅಜ್ಞಾತವಾಸ

ಪ್ರಾರಂಭದಲ್ಲಿ ದಕ್ಷಿಣ ಕನ್ನಡದ ಸುಳ್ಯದಲ್ಲಿ ಕೆಲಕಾಲ ವಾಸವಾಗಿದ್ದ ಈ ದಂಪತಿ ಆನಂತರ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಬಾಡದಬೈಲು ಗ್ರಾಮದಲ್ಲಿ ಹೊಸ ಜೀವನವನ್ನು ಆರಂಭಿಸಿದರು. ಅಂದವಳ್ಳಿ ಗ್ರಾಮದ ಇಂದೂದರ ಗೌಡರಿಂದ ಒಂದು ವಾಸದ ಮನೆಯನ್ನೂ ಒಳಗೊಂಡಂತೆ ಸ.ನಂ. 329ರಲ್ಲಿ ಐದು ಎಕರೆ ಎರಡು ಗುಂಟೆ ಜಮೀನನ್ನು ಖರೀದಿಸಿದರು.

ತಾವು ಖರೀದಿಸಿದ ಜಮೀನಿನಲ್ಲಿ ಸತತವಾಗಿ ಒಂದೂವರೆ ವರ್ಷಗಳ ಕಾಲ ಸಾಮಾನ್ಯ ರೈತನಂತೆ ದೈಹಿಕ ಶ್ರಮದ ಕಾಯಕವನ್ನು ನಂದೀಶ್ವರರು ಮಾಡಿದರು. ಭತ್ತ, ಜೋಳ, ಅನಾನಸು, ಅಡಿಕೆ ಕೃಷಿಯಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡರು. ವಾರ ಹದಿನೈದು



ತಮ್ಮ ತೋಟದಲ್ಲಿ ಮಗನೊಂದಿಗೆ..

ದಿನಗಳಿಗೊಮ್ಮೆ ಸೊರಬ ಪೇಟೆಗೆ ಹೋಗಿ ಸಂತೆ ಮಾಡಿಕೊಂಡು ಬರುತ್ತಿದ್ದರು. ತೋಟ, ಗದ್ದೆ, ಮನೆ, ಪಶು ಸಂಗೋಪನೆ, ತಮ್ಮ ಒಂದು ವರ್ಷದ ಮಗು ಗುರುಪ್ರಸಾದನ ಲಾಲನೆ ಪಾಲನೆ, ಮನೆಯ ಪಕ್ಕದ ಆಲದ ಮರದಡಿ ನಿತ್ಯ ಪ್ರಾಣಯಾಮ, ಧ್ಯಾನ ಇವೇ ಇವರ ದಿನಚರಿಯಾಯಿತು.

ಇವರಿದ್ದ ಮನೆಯ ಅಕ್ಕಪಕ್ಕದ ಜನರಿಗಾಗಲಿ, ಸುತ್ತಮುತ್ತಲಿನ ಹಳ್ಳಿಯವರಿಗಾಗಲಿ ನಂದೀಶ್ವರರು ಈ ಹಿಂದೆ ದೊಡ್ಡ ಮಠವೊಂದರ ಪೀಠಾಧೀಶರಾಗಿದ್ದ ಬಗ್ಗೆಯಾಗಲಿ, ಕೋಟ್ಯಂತರ ರೂ.ಗಳ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದ ವ್ಯಕ್ತಿ ಎಂದಾಗಲಿ, ಸಾವಿರಾರು ಭಕ್ತರಿಂದ ದಿನಂಪ್ರತಿ ಗೌರವಾದರಗಳನ್ನು ಸ್ವೀಕರಿಸುತ್ತಿದ್ದ ಸ್ವಾಮೀಜಿ ಯಾಗಿದ್ದರೆಂಬ ಸಂಗತಿಯಾಗಲಿ ಯಾರಿಗೂ ಸೂಜಿಮೊನೆ ಯಷ್ಟೂ ತಿಳಿದಿರಲಿಲ್ಲ.

ಆದರೆ ತಮ್ಮ ತೋಟ ಗದ್ದೆಗಳಲ್ಲಿ ಕೂಲಿ ಕೆಲಸ ಮಾಡಲು ಬರುತ್ತಿದ್ದ ಕೆಳಜಾತಿಯ ಜನರೊಂದಿಗೂ ಸಹ ಯಾವುದೇ ಗತ್ತು ಗರ್ವ ಇಲ್ಲದೇ ಬೆರೆತು ಅವರೊಂದಿಗೆ ಶ್ರಮವಹಿಸಿ ದುಡಿಯುತ್ತಿದ್ದ ನಂದೀಶ್ವರರು ತಮ್ಮ ವ್ಯಕ್ತಿತ್ವದ ಕಾರಣ ಮಾತ್ರದಿಂದಾಗಿ ಸುತ್ತಮುತ್ತಲಿನ ಜನರ ಪ್ರೀತಿ ಮತ್ತು ಗೌರವವನ್ನು ಸಂಪಾದಿಸಿದ್ದರು.

"ನಾನು ಇಲ್ಲಿ ಬಂದು ಈ ರೀತಿಯ ಜೀವನ ಆರಂಭಿಸಿರುವುದು ನನ್ನನ್ನು ಅರಿಯಲು ಅನುಕೂಲ ಮಾಡಿಕೊಟ್ಟಿದೆ. ಕಾಯಕ ಹಾಗೂ ದಾಸೋಹಗಳ ವಿನಃ ಬೇರೆಯ ಧರ್ಮವಿಲ್ಲ ಎಂಬುದನ್ನು ಅರಿತಿದ್ದೇನೆ. ಹೀಗೆ ಬದುಕಿದಾಗ ಮಾತ್ರವೇ ನಿಜವಾದ ಜೀವನ ಏನೆಂದು ನಮಗೆ ಅರ್ಥವಾಗುತ್ತದೆ. ಈ ಬಗೆಯ ಬದುಕು ನನಗೆ



ಭಕ್ತರೇ ಹಾಕಿರುವ ಫಲಕ..

ನೆಮ್ಮದಿ ನೀಡಿದೆ" ಎಂದು ನುಡಿಯುವ ನಂದೀಶ್ವರರ ಲೋಕದೃಷ್ಟಿ ಉಳಿದ ಎಷ್ಟೋ ಬೂಟಾಟಿಕೆಯ. ಮಠಾಧಿಪತಿಗಳಿಗಿಂತ ಶ್ರೇಷ್ಠವಾದದ್ದೆಂದೆನಿಸದಿರದು.

ಭಕ್ತರು ಲಗ್ಗೆ ಇಟ್ಟರು

ಕೆಲ ವಾರಗಳ ಹಿಂದಿನ ತನಕ ನಂದೀಶ್ವರರ ರೈತಾಪಿ ಬದುಕು ಸುಸೂತ್ರವಾಗಿಯೇ ನಡೆಯುತ್ತಿತ್ತು. ಆದರೆ ಅವರು ಎಲ್ಲಿಗೆ ಹೋದರು ಎಂಬುದರ ಬಗ್ಗೆ ಕಿಂಚಿತ್ತೂ ಗೊತ್ತಿರದ ಅವರ ಭಕ್ತರು ಕಂಗಾಲಾದರು. ಅವರನ್ನು ಹುಡುಕಿಕೊಡುವಂತೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರು. ನಂದೀಶ್ವರರ ಮೊಬೈಲ್ ನೆಟ್‌ವರ್ಕ್ ಆಧಾರದ ಮೇಲೆ ಸೊರಬ, ಸಿದ್ದಾಪುರ ಮಾರ್ಗವಾಗಿ ಜೀಪು ಹಾಕಿಕೊಂಡು ಪೊಲೀಸರು ಸುತ್ತು ಹಾಕತೊಡಗಿದ್ದೂ ಈ ಮಾಜಿ ಸ್ವಾಮೀಜಿಯ ಗಮನಕ್ಕೆ ಬರಲೇ ಇಲ್ಲ.

ಹೀಗೆ ಹುಡುಕುತ್ತಿದ್ದ ದಾವಣಗೆರೆ ಪೊಲೀಸರಿಗೆ ಅಕ್ಟೋಬರ್ ಕೊನೆಯ ವಾರದಲ್ಲಿ ಸಾಗರದ ವ್ಯಕ್ತಿಯೊಬ್ಬರು ಸುಳಿವು ನೀಡಿದರು. ಅದನ್ನು ಆಧರಿಸಿ ಬಾಡದಬೈಲು ಶನೀಶ್ವರ ದೇವಸ್ಥಾನದ ಪೂಜಾರಿಯನ್ನು ಸಂಪರ್ಕಿಸಿದಾಗ ನಂದೀಶ್ವರರ ಇರುವಿಕೆ ಪೊಲೀಸರ ಅರಿವಿಗೆ ಬಂತು. ನಂತರ ಪೊಲೀಸರು ಅವರ ಹೇಳಿಕೆಯನ್ನು ದಾಖಲಿಸಿಕೊಂಡು ಅದನ್ನು ಮಾಧ್ಯಮಗಳ ಮೂಲಕ ಜನರಿಗೆ ತಿಳಿಸಿದರು. ಆ ಸುದ್ದಿ ಪ್ರಕಟವಾಗಿದ್ದೇ ತಡ ಮರುದಿನದಿಂದಲೆ ನಂದೀಶ್ವರರ ಮನೆಯಲ್ಲಿ ಜನಜಾತ್ರೆಯೇ ಶುರುವಾಯಿತು.

ಅಂದಿನಿಂದ ಇವತ್ತಿಗೂ ನಂದಿಗುಡಿ, ಹರಿಹರ, ದಾವಣಗೆರೆ, ಧಾರವಾಡ ಮುಂತಾದ ಹತ್ತು ಹಲವೆಡೆಗಳಿಂದ ಪ್ರತಿ ದಿನವೂ ನೂರಾರು ಜನರು ಬರುವುದು, ಬಂದು ಅತ್ತು ಕರೆದು ಗೋಳಿಡುವುದು, ಮಠಕ್ಕೆ ವಾಪಸ್ ಬನ್ನಿ ಎಂದು ಒತ್ತಾಯಿಸುವುದು, ಪೀಠಾಧಿಪತಿಯಾಗಿ ಅಲ್ಲದಿದ್ದರೂ ಆಡಳಿತಾಧಿಕಾರಿಯಾಗಿ ಯಾದರೂ ಬನ್ನಿ ಎಂದು ಆಗ್ರಹಿಸುವುದು ನಡೆದೇ ಇದೆ. ಜನರ ಪ್ರೀತಿಪೂರ್ವಕ ಆಗ್ರಹ, ಒತ್ತಾಯಗಳಲ್ಲವನ್ನೂ ನಂದೀಶ್ವರ ಶಿವಾಚಾರ್ಯ ವಿನಯ ಪೂರ್ವಕವಾಗಿಯೇ ನಿರಾಕರಿಸಿ ಬಂದವರನ್ನು ಸಂತೈಸಿ ಕಳುಹಿಸತೊಡಗಿದ್ದಾರೆ.

ತಮ್ಮನ್ನು ನೋಡಲು, ಮಾತನಾಡಿಸಲು ಜನರು ಇಷ್ಟೊಂದು ಸಂಖ್ಯೆಯಲ್ಲಿ ಬರುತ್ತಿರುವುದನ್ನು ಗಮನಿಸಿ ನಂದೀಶ್ವರರು ಅವರೆಲ್ಲರಿಗೆಂದು ತಮ್ಮ ಮನೆಯ ಅಂ... ದಲ್ಲೇ ಚಪ್ಪರ ಹಾಕಿಸಿ ಬಂದವರಿಗೆಲ್ಲಾ ನಿತ್ಯ ದಾಸೋಹ... ಆರಂಭಿಸಿದ್ದಾರೆ. ಆದರೆ ಈಗ ರೈತರಾಗಿ ಬದುಕುತ್ತಿ... ನಂದೀಶ್ವರರಿಗೆ ಇದರಿಂದ ಆಗತೊಡಗಿದ ಆರ್ಥಿ... ಒತ್ತಡವನ್ನು ಗ್ರಹಿಸಿದ ಜನ ತಾವು ಬರುವಾಗ ಅ... ದಾಸೋಹಕ್ಕಾಗಿ ಅಗತ್ಯವಿರುವ ದವಸ ಧಾನ್ಯಗಳ... ಹಿಡಿದುಕೊಂಡು ಬರತೊಡಗಿದ್ದಾರೆ.

ಇಲ್ಲಿ ಸ್ಪಷ್ಟವಾಗಿ ಗೋಚರಿಸುವಂತೆ ಜನರ ಈ ಪ... "ಸ್ವಾಮಿ" ನಿಷ್ಠೆಗೆ ಕೇವಲ ದೈವಭಕ್ತಿ ಮಾತ್ರ ಕಾರಣ... ಬದಲಾಗಿ ನಂದೀಶ್ವರ ಶಿವಾಚಾರ್ಯರ ಸಹಜ ಸ... ಪ್ರಾಮಾಣಿಕತೆ, ಕಾಯಕ ನಿಷ್ಠೆ, ಧಾಂಬಿಕತನವನ್ನೊ... ಜೀವನ ಪ್ರೀತಿ ಇವೇ ಕಾರಣ ಎನ್ನಬಹುದು.

ಈಗ ನಂದಿಗುಡಿಯಲ್ಲಿ ಹೊಸ ಪೀಠಾಧಿ... ಯಾರಾಗಬೇಕು ಎಂಬ ವಿಷಯದಲ್ಲಿ ಎರಡು ಗುಂಪು... ನಡುವೆ ತೀವ್ರ ಸ್ವರೂಪದ ಭಿನ್ನಾಭಿಪ್ರಾ... ಭುಗಿಲೆದ್ದಿದೆಯಲ್ಲದೆ, ನಂದೀಶ್ವರರು ಪೀಠತ್ಯಾಗ ಮಾ... ನಂತರದಲ್ಲಿ ಮಠದ ಸಂಪತ್ತು ಕರಗಿ ಹೋಗುತ್ತಿದೆ, ಅಭಿ... ಕಾರ್ಯಗಳು ಮೊದಲಿನ ಗತಿಯಲ್ಲಿ ಸಾಗುತ್ತಿಲ್ಲ ... ತಹತಹ ಮಠದ ಭಕ್ತರನ್ನು ಕಾಡುತ್ತಿದೆ.

ಈ ಕಾರಣಕ್ಕೇ ನೊಳಂಬ ಮಠಕ್ಕೆ ಯಾವು... ರೊಂದು ರೀತಿಯಲ್ಲಿ ನಂದೀಶ್ವರರನ್ನು ಮತ್ತೆ ಕರೆಸಿಕೊ... ಬಯಕೆ ಜನರದ್ದು. ಆದರೆ ನಂದೀಶ್ವರರು ಮಾತ್ರ ಯಾ... ಕಾರಣಕ್ಕೂ ತಾವು ಮತ್ತೆ ಮಠಕ್ಕೆ ಹಿಂದಿರುಗಿ ... ಜಂಜಾಟಗಳಲ್ಲಿ ಸಿಲುಕದೆ ಬದುಕಬೇಕೆಂದು ನಿರ್ಧ... ವಂತಿದೆ.

ಮಠಾಧೀಶರಾಗುವ ಬದಲು ತಮ್ಮನ್ನು ನಂಬಿ ... ಜನತೆಗೆ ತಮ್ಮ ಮನೆಯಲ್ಲೇ ಸಾಂತ್ವನ, ತಿಳಿವಳಿಕೆ ನೀ... ಕಾಯಕದಲ್ಲೇ ಕೈಲಾಸ ಕಾಣುತ್ತಾ, ಅನ್ನ ದಾಸೋ... ಧರ್ಮ ಜಾಗೃತಿ ನಡೆಸುತ್ತಾ ತಮ್ಮ ಧರ್ಮ ಶ್ರದ್ಧೆ... ಪ್ರದರ್ಶಿಸಿದರೆ ಸಾಕು ಎಂಬ ದೃಢ ನಿರ್ಧಾರದಲ್ಲಿ ... ಇರುವಂತೆ ತೋರುತ್ತಿದೆ.

ಓರ್ವ ಸಜ್ಜನ, ಧಾರ್ಮಿಕ ಮನುಷ್ಯ ಮಠ... ರಾಗಿದ್ದರೂ ಹೇಗೆ ಜನರೊಂದಿಗೆ ಇದ್ದು ತಮ್ಮ ... ನಿಷ್ಠೆಯನ್ನು ಪಾಲಿಸಬಹುದು ಎಂಬುದಕ್ಕೆ ನಂದೀ... ಉತ್ತಮ ಉದಾಹರಣೆ ಎನಿಸುತ್ತದೆ.

ಹರ್ಷಕುಮಾರ್

...ರಗಳೆ ರಾಘವೇಶನ ಪೀಠ ತ್ಯಾಗ

ಸ್ವೇಚ್ಛಂದ ಸ್ವಾಮಿ ರಾಘವೇಶ್ವರ ಭಾರತಿಗೆ ಆತನ ...ಜಾತಿ ಬ್ರಾಹ್ಮಣ ಬಂಧುಗಳೇ ಕುಂಡೆ ಮೇಲೆ ಒದ್ದು ...ಠದಿಂದ ಓಡಿಸಲು ಸರ್ವ ಸನ್ನದ್ಧರಾಗಿದ್ದಾರೆ. ರಾಘವೇಶ್ವ... ಕಿವಲು-ತೀಟೆಗಳಿಂದ ರೋಸತ್ತು ಹೋಗಿರುವ ...ವ್ಯಕರು 'ಅಖಿಲ ಭಾರತ ಹವ್ಯಕ ಹಿತರಕ್ಷಣಾ ಸಮಿತಿ' ...ಕೊಂಡು ದಂಗೆ ಎದ್ದಿದ್ದಾರೆ. ಬ್ರಾಹ್ಮಣ ಪರಮಪೂಜ್ಯ ...ಮಚಂದ್ರಾಪುರ ಮಠದ ಗುರುಪೀಠದಲ್ಲಿ ಪವಡಿಸುವ ...ನ್ನು ಈ ನಡತೆಗೆಟ್ಟವನಿಗೆ ಒಂಚೂರೂ ಇಲ್ಲ ಎಂದು ...ಹ್ಮಣ ಹಿತರಕ್ಷಕರು ಬೊಬ್ಬೆ ಹೊಡೆಯುತ್ತಿದ್ದಾರೆ.

ಮಲೆನಾಡು-ಕರಾವಳಿಯ ಬ್ರಾಹ್ಮಣ ಸೀಮೆಗಳಲ್ಲಿ ...ಡುಕೋರ ಬ್ರಾಹ್ಮಣರು ರಾಘವೇಶ್ವರನ ವಿರುದ್ಧ ...ಾಭಿಪ್ರಾಯ ರೂಪಿಸುತ್ತಿದ್ದಾರೆ. ಹವ್ಯಕರ ಕೇರಿ-ಕೇರಿಗಳಲ್ಲಿ ...ೆ ನಡೆಸಿ ರಾಘವೇಶನ ಮುಖವಾಡ ಕಳಚಿ ಕರ್ಮಕಾಂಡ ...ವರಿಸುತ್ತಿದ್ದಾರೆ. ರಾಮಚಂದ್ರಾಪುರ ಮಠದ ಹಿರಿಯ ...ಮಿಯ ಮಾತು ಮೀರಿ ಈ ಅಡ್ನಾಡಿಯನ್ನು ...ಠಾಧ್ಯಕ್ಷನಾಗಿ ಪ್ರತಿಷ್ಠಾಪಿಸಿದ ಹವ್ಯಕ ಅತಿರಥಮಹಾರಥರೇ



...ತ್ತು ಆ್ಯಂಟಿ ರಾಘವೇಶ್ವರ ಅಭಿಯಾನದ ಸೂತ್ರಧಾರರಾಗಿ ...ರೆ. ಮರ್ಯಾದೆಯಿಂದ ರಾಘವೇಶ್ವರನೇ ಪೀಠ ತ್ಯಾಗ ...ಡಿದರಾಯ್ತು; ಇಲ್ಲದಿದ್ದರೆ ರಾಮಚಂದ್ರಾಪುರ ಮಠದ ...ರ್ಗದ ಶಿಷ್ಯ ವರ್ಗವೇ ಒಂದಾಗಿ ಈ ರಸಿಕ ಸ್ವಾಮಿಯನ್ನು ...ಠದಿಂದ ಎಳೆದೆಸೆಯುವ 'ವ್ಯವಸ್ಥೆ' ಮಾಡಲು ...ಗೆಕೋರರು ಸ್ಕೆಚ್ ಹಾಕಿಕೊಂಡಿದ್ದಾರೆ.

ಬ್ರಾಹ್ಮಣರ ಪ್ರತಿಷ್ಠಿತ ಹವ್ಯಕ ಮಹಾಸಭಾ, ಅಗ್ನಿಸೇವಾ ...ನಂಥ ಸಂಘಟನೆಯ ಮುಂದಾಳುಗಳು, ಗೋಕರ್ಣದ ...ಕ ಶ್ರೇಷ್ಠರು ಈ ರಾಘವೇಶ್ವರನ ವಿರೋಧಿ ...ಗಿನಲ್ಲಿರುವುದು ಹವ್ಯಕರ ಸಮುದಾಯದಲ್ಲಿ ದೊಡ್ಡ ...ನ ಎಬ್ಬಿಸಿಬಿಟ್ಟಿದೆ. ರಾಮಚಂದ್ರಾಪುರ ಮಠದ ಈ ...ವಿ ಭಕ್ತರಿಗೆ ಶಿರಸಿಯ ಸೀಮೆ ಬ್ರಾಹ್ಮಣ ಗುರು ...ವಲ್ಲಿ ಸ್ವಾಮೀಜಿಯ ರಹಸ್ಯ ಸಹಕಾರವೂ ಸಿಕ್ಕಿದೆ. ...ದು ರಗಳೆ ರಾಘವೇಶ್ವರನನ್ನು ಕಂಗಾಲಾಗಿಸಿಬಿಟ್ಟಿದೆ.

ರಾಮಚಂದ್ರಾಪುರ ಮಠದ ಶಿಷ್ಯ ಸಂಕುಲ ಹೆಚ್ಚಿರುವ ...-ಸಾಗರ ಸೀಮೆಯಲ್ಲೀಗ ರಾಘವೇಶ್ವರನ 'ಗುಣಗಾನ' ...ವಾಗಿ ಸಾಗಿದೆ. 'ರಾಘವೇಶ್ವರ ಹಠಾವೋ' ...ದೋಲನದ ಹಿರೇಮಣಿಗಳು ಒಂದಿಷ್ಟು ನೈತಿಕ ...ಗಳನ್ನು ಜನರ ಮುಂದಿಟ್ಟು ರಾಘವೇಶ್ವರನ ಅಸಲಿ ...ಹಾರ ಅನಾವರಣ ಮಾಡುತ್ತಿದ್ದಾರೆ. ಸ್ವಾಮಿ ಯತಿ ...ರ್ಮ ಬಿಟ್ಟು 'ಸತಿಧರ್ಮ' ಪಾಲಿಸುತ್ತಿದ್ದಾರೆ. ಸರ್ವಸಂಗ ...ತ್ಯಾಗಿಗೆ ಕೋಟ್ಯಾಂತರ ರೂ. ಜೀವ ವಿಮೆ ಅವಶ್ಯವಿತ್ತೇ? ...ದ ಆ ಪಾಲಿಸಿ ಸಣ್ಣ ವಯಸ್ಸಿನ ಸುಂದರ ಸದ್ಗೃಹಿಣಿಗೇ ...ಮೂದ ಆಗತ್ಯವೇನಿತ್ತು ಧರ್ಮಪೀಠಕ್ಕೆ?

...ಪಾಠಕ್ಕೆ, ಬರೂದ ಅಥವಾ ಸ್ವಾಮೀಜಿಯ ...ಮೊಲ್ಲಂಘನ"ಕ್ಕೆ ಆಗಮಿಸುವ ಹೆಂಗಸರ ಹೆಗಲಿಗೆ ...ಹಾಕುವುದು ಸರಿಯೇ? ತಿಲಕವಿಡುವಾಗ ಮಹಿಳೆಯರ ...ದಮುವುದೇಕೆ? ಸಿನಿಮಾ ನಟಿ, ಅದರಲ್ಲೂ 'ಹೆಸರಾಂತ' ...ಲೋತ್ಸವಕ ಪ್ರಸ್ತಾಪಿತ ಮಲ್ಲಿಕಾ ಶೆರಾವತ್‌ಳಂಥ ...ಚೆ ಬೆಡಗಿಯ ಸಹವಾಸ ಬ್ರಾಹ್ಮಣಚರ್ಯೆದಲ್ಲಿರುವ ...ಗೇಕೆ? ಸಿನಿಮಾ ಗಾಯಕರು, ಆಡಳಿತದ ರಾಜಕಾರಣಿಗಳ ...ದು ಹೋಗುವುದು, ಪುಢಾರಿಯಂತೆ ಅಂದಲೆಯು ...ದ ಹವ್ಯಕ ಸಮಾಜಕ್ಕೆ ಕಳಂಕ ತಾರದೆ?

...ಇಂಥ ಪ್ರಶ್ನೆಗಳನ್ನು ಹವ್ಯಕ ವಲಯದಲ್ಲಿ

ರಾಘವೇಶ್ವರನ ವೇಷ ಕಳಚುತ್ತಿರುವ ಬಂಡಾಯಗಾರರು ಬಿತ್ತಿದ್ದಾರೆ. ಜಪ-ತಪ ಅನುಷ್ಠಾನಕ್ಕೆ ಎಳ್ಳು ನೀರು ಬಿಟ್ಟು ಲೌಕಿಕ ಲೋಕದಲ್ಲಿ ಸ್ವಚ್ಛಂದವಾಗಿ ಮುಳುಗೇಳುತ್ತಿರುವ ಸ್ವಾಮಿಗೆ ರಾಮಚಂದ್ರಾಪುರ ಮಠದ ದಿವ್ಯ ಪೀಠದಲ್ಲಿ ಕುಳಿತುಕೊಳ್ಳುವ ನೈತಿಕತೆ ಇಲ್ಲವೆಂಬುದು ವಿರೋಧಿಗಳ ವಾದ. ಹಾಗೊಮ್ಮೆ ಜಗತ್ಪ್ರಸಿದ್ಧಿಯ ವ್ಯಾಮೋಹವಿದ್ದರೆ ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸ, ಶಂಕರಾಚಾರ್ಯರಂತೆ ಧರ್ಮ ಪ್ರಚಾರ ನಡೆಸಲಿ. ಅದು ಬಿಟ್ಟು ಸೆಕ್ಸ್ ಬಾಂಬ್ ನಟಿ, ಭ್ರಷ್ಟ ರಾಜಕಾರಣಿಗಳ ಜತೆ ಕಳಾಯಿಸುವುದರ ಮೂಲಕ ಪ್ರಸಿದ್ಧಿಗೆ ಹಾತೊರೆಯುವುದು ಯತಿ ಧರ್ಮಕ್ಕೆ ವಿರುದ್ಧ ಎಂದು ಬಂಡಾಯಗಾರರು ಭಾಷಣ ಬಿಗಿಯುತ್ತಿದ್ದಾರೆ. ಅಷ್ಟೇ ಅಲ್ಲ; ರಾಮಚಂದ್ರಾಪುರ ಮಠವನ್ನು ಲಿಂಗಾಯತರ ಅಥವಾ ಒಕ್ಕಲಿಗರ ಮಠದಂತೆ ಧರ್ಮಾಕರ್ಷಣೆಯ ಕೇಂದ್ರ ಮಾಡಲಾಗದ ಹೇತ್ಲಾಂಡಿ ಸ್ವಾಮಿ ಅಪಾರ ಭಕ್ತರು ಬರುವ ಗೋಕರ್ಣ ದೇವಾಲಯವನ್ನು ರಾಜಕೀಯ ಪ್ರಭಾವದಿಂದ ಕಬಳಿಸಿ ಫೇಮಸ್ ಆಗಲು ಹವಣಿಸುತ್ತಿರುವುದೂ ಈಗ ಬಂಡಾಯ ಸಭೆಗಳಲ್ಲಿ ಮಾರ್ದನಿಸುತ್ತಿದೆ.

ಒಟ್ಟಿನಲ್ಲಿ ಸನ್ಯಾಸತ್ವ ಸರಿಯಿಲ್ಲದ ರಾಘವೇಶ್ವರನಿಂದ ಗುರುಪೀಠ-ಹವ್ಯಕ ಸಮಾಜ ಗಂಡಾಂತರಕ್ಕೆ ಸಿಲುಕಿದೆ. ಬ್ರಾಹ್ಮಣ ಸಮುದಾಯ ಬಚಾವಾಗಿಸಲು ರಾಘವೇಶ್ವರನ ರಾಮಚಂದ್ರಾಪುರದ ಮಠಾಧ್ಯಕ್ಷತೆಯಿಂದ ಒದ್ದೋಡಿಸುವುದೊಂದೇ ದಾರಿ. ಹಾಗಂತ ದೃಢ ನಿರ್ಧಾರಕ್ಕೆ ಹವ್ಯಕ ಹಿತರಕ್ಷಕರೆಂಬ ದಂಗೆಕೋರರು ಬಂದುಬಿಟ್ಟಿದ್ದಾರೆ. ಮೊನ್ನೆಮೊನ್ನೆ ರಾಮಚಂದ್ರಾಪುರ ಮಠದ ಗುರುಕುಲದಲ್ಲಿ ಮುಗ್ಧ ವಿದ್ಯಾರ್ಥಿನಿಗಾದ ಲೈಂಗಿಕ ಕಿರುಕುಳವಂತೂ ಹವ್ಯಕ ಹೆಂಗಸರನ್ನು ಕಂಗೆಡಿಸಿಬಿಟ್ಟಿದೆ. ಕಾಮುಕರ ಪರವೇ ಸ್ವಾಮಿ ವಕಾಲತ್ತು ವಹಿಸಿರುವುದಂತೂ ರಾಮಚಂದ್ರಾಪುರ ಮಠದ ಬಗ್ಗೆ ಇದ್ದ ಪೂಜ್ಯ ಭಾವನೆಯನ್ನು ಮಣ್ಣು ಪಾಲು ಮಾಡಿಬಿಟ್ಟಿದೆ. ಸ್ವಾಮೀಜಿ ಕೂಡಿಸಿರುವ ಕಳ್ಳ ಹಣದ ಬಗ್ಗೆಗಂತೂ ರಂಗು-ರಂಗಿನ ಕತೆಗಳಿವೆ.

ರಾಮಚಂದ್ರಾಪುರ ಮಠದಲ್ಲಿ ನಡೆಯುತ್ತಿರುವ ಕರ್ಮಕಾಂಡಗಳು ರಾಘವೇಶ್ವರನ ಪೀಠ ತ್ಯಾಗಕ್ಕೆ ಒತ್ತಾಯಿಸಲು ಆತನ ವಿರೋಧಿಗಳಿಗೆ ಬ್ರಹ್ಮಾಸ್ತ್ರಗಳಂತಾಗಿ ಹೋಗಿದೆ. 'ರಾಘವೇಶ್ವರ ಹಠಾವೋ' ಸಭೆಗಳು ಈಗ ಹವ್ಯಕರ ಹಳ್ಳಿಹಳ್ಳಿಗಳಲ್ಲಿ ಗುಪ್ತಗಾಮಿನಿಯಾಗಿ ನಡೆದಿವೆ. ಇಂಥದೊಂದು ಬಂಡಾಯ ಸಭೆ ಮೊನ್ನೆ ಉತ್ತರಕನ್ನಡದ ಸಿದ್ದಾಪುರದಲ್ಲಿ ನಡೆಯಿತು. ಆ ವಿರೋಧಿ ಸಭೆ ನಡೆಯುವುದು ಅದ್ಹೇಗೋ ಗೊತ್ತುಮಾಡಿಕೊಂಡ ರಾಘವೇಶ್ವರನ ರೌಡಿ ಪಡೆ ಪುಂಡಾಟಕ್ಕೆ ರೆಡಿಯಾಗಿ ಹೋಗಿತ್ತು. ಆಹ್ವಾನಿತರಿಗಷ್ಟೇ ಆಗಿದ್ದ ಸಭೆಗೆ ರಾಘವೇಶ್ವರನ ಮಾರಾಮಾರಿ ಗ್ಯಾಂಗ್ ನುಗ್ಗಿ ವಿರೋಧಿಗಳನ್ನು ಹಿಗ್ಗಾ-ಮುಗ್ಗಾ ಬಡಿದು ಓಡಿದೆ.



ಈ ಗೂಂಡಾ ಗ್ಯಾಂಗಿನಲ್ಲಿ ಇದ್ದವರೆಲ್ಲ ಮಠದಿಂದ ಹಳ್ಳಿಗಳಲ್ಲಿ ನೇಮಿಸಲ್ಪಟ್ಟ ಗುರಿಕಾರರು. ಸಮಾಜದಲ್ಲಿ ಮೂರು ಕಾಸಿನ ಮಾನ-ಮರ್ಯಾದೆಯಿಲ್ಲದ ಉಂಡಾಡಿಗಳೇ ಈ ಗುರಿಕಾರರು. ಪ್ರತಿ ಹಳ್ಳಿಗೆ ತಲಾ ಇಬ್ಬರಂತೆ ಈ ಗುರಿಕಾರರು ಸ್ವಾಮೀಜಿಯಿಂದ ನೇಮಕವಾಗಿದ್ದಾರೆ ಪ್ರತಿ ಹವ್ಯಕ ಮನೆಯಿಂದ ಪ್ರತಿದಿನ ಒಂದು ಮುಷ್ಠಿ ಅಕ್ಕಿ ಒಂದು ರೂಪಾಯಿ ವಸೂಲಿ ಮಾಡುವ, ಮಠದ ಫರ್ಮಾನು ಹವ್ಯಕರಿಗೆ ಮುಟ್ಟಿಸುವ ಡ್ಯೂಟಿ ಇವರದು. ಈ 'ದಂಧೆ'ಯಿಂದ ಈ

ಕಾಲದಕಟ್ಟ್ಯಾದ ಗಣಪತಿ ದೇವಾಲಯದಲ್ಲಿ ನಡೆದ 'ಹಠಾವೋ' ಸಭೆಯೊಳಗೆ ನುಸುಳಿಕೊಂಡಿದ್ದರು. ಜಿಲ್ಲೆಯ ಹಿರಿಯ ಹವ್ಯಕ ಮುಖಂಡ-ಸಜ್ಜನ ಬ್ರಾಹ್ಮಣ ಡಾ. ಟಿ.ಟಿ. ಹೆಗಡೆ ರಾಘವೇಶ್ವರನ ವೇಷಗಳನ್ನು ಒಂದೊಂದಾಗಿ ಕಳಚುತ್ತಿದ್ದಂತೆಯೇ ಈ ಗುರಿಕಾರ ಗೂಂಡಾಗಳು ವೇದಿಕೆಯಲ್ಲಿದ್ದವರ ಮೇಲೆ ಮುಗಿಬಿದ್ದರು. ಟಿ.ಟಿ.ಹೆಗಡೆ, ಗೋಪಾಲ ಗಾಯತ್ರಿ, ಇಂದಿರಾ ಹೆಗಡೆ, ಅಶ್ವಿನ್‌ಕುಮಾರ್ ಹೆಗಡೆ ಇತರರು ರಾಘವನ ರಗಳೆಗಳನ್ನು ಸಭಿಕರರಿಗೆ ಮನದಟ್ಟು ಮಾಡಿದ್ದು ಮಠದ ಮುಠ್ಠಾಳರಿಗೆ ಸಹಿಸಲಾಗಲಿಲ್ಲ. ಆ ಸಭೆಯಲ್ಲಿ ಸಾಗರ, ಸಿದ್ದಾಪುರ, ಯಲ್ಲಾಪುರ, ಬೆಂಗಳೂರಿನ ಬ್ರಾಹ್ಮಣ ಬಳಗವೂ ಭಾಗವಹಿಸಿತ್ತು.

ವಯೋವೃದ್ಧ ಡಾ. ಹೆಗಡೆಯಂಥವರ ವಯಸ್ಸೂ ನೋಡದೆ ಸ್ವಾಮಿಯ ಬೌನ್ಸರ್‌ಗಳು ಸಿಕ್ಕಸಿಕ್ಕವರಿಗೆ ಬಡಿದರು. ದೊಡ್ಡ ಗಲಾಟೆಯೇ ಆಯ್ತು; ಪೊಲೀಸ್ ಪ್ರವೇಶವೂ ಆಯ್ತು. ಸರ್ಕಾರಿ ಸ್ವಾಮಿಯಾದ್ದರಿಂದ ಕೇಸುಗಳೇನೂ ಆಗಲಿಲ್ಲ. ಆದರೆ ರಾಘವೇಶ್ವರನೆಂಬ ಸೋಗಲಾಡಿ ಸ್ವಾಮಿಯ ಬುರ್ನಾಸ್ ಸಂಸ್ಕೃತಿ-ಸಂಸ್ಕಾರಗಳೂ ಹವ್ಯಕ ಪ್ರಪಂಚಕ್ಕೆ ಪರಿಚಯವೂ ಆಯಿತು. ಗೋಕರ್ಣದಲ್ಲಿ ಪುಂಡರ ಮತ್ತು ಪೊಲೀಸರ ಬಳಸಿಕೊಂಡು ಅಮಾಯಕರಿಗೆ ಚಿತ್ರಹಿಂಸೆ ಕೊಟ್ಟಿದ್ದ ರಾಘವೇಶ್ವರನ 'ಧರ್ಮೋನ್ಮಾದ' ನಿಸ್ಸಂದಿಗ್ಧವಾಗಿ ಸಾಬೀತಾಗಿಹೋಗಿದೆ. ತನ್ಮೂಲಕ ರಾಘವೇಶ್ವರನ ಒದ್ದೋಡಿಸುವ ಆಂದೋಲನಕ್ಕೆ ಹೊಸ ಕಾವು ಬಂದುಬಿಟ್ಟಿದೆ.

ಒಂದಂತೂ ಖರೆ; ತನ್ನ ದಗಲ್ಬಾಜಿ ದಂಧೆಗಳನ್ನು



ಸಿದ್ದಾಪುರದ ಸಭೆ ಮತ್ತು ಗಲಾಟೆ ಎಬ್ಬಿಸಿದ ಪುಂಡರು



ಅಪಾಪೋಲಿಗಳು ಕೊಬ್ಬಿಹೋಗಿದ್ದಾರೆ. ಸ್ವಾಮೀಜಿಯ ಅವ್ಯವಹಾರ-ಅವಾಂತರ-ಅನೈತಿಕತೆ ಬಗ್ಗೆ ಯಾರಾದರೂ ಮಾತಾಡಿದರೆ ಅವರ ಸದೆ ಬಡಿವ ರೌಡಿಪಡೆಯಿದು.

ಸಿದ್ದಾಪುರ ತಾಲ್ಲೂಕೊಂದರಲ್ಲೇ ಇಂಥ ಸಾವಿರ ಗೂಂಡಾ ಗುರಿಕಾರರಿದ್ದಾರೆ. ಗೋಕರ್ಣ ದೇವಾಲಯವನ್ನು ರಾಘವೇಶ್ವರ ಸ್ವಾಧೀನ ಪಡಿಸಿಕೊಳ್ಳುವಾಗ ಹುಂಡಿ ಒಡೆಯಲು ಹೋದ ಹರಾಮಿಗಳು ಇವರು. ಸ್ವಾಮೀಜಿ ಸಾಕಿರುವ ಈ ರೌಡಿಗಳು ಮೊನ್ನೆ ಸಿದ್ದಾಪುರದ

ಮರೆಮಾಚಲು ಗೋ-ಮುಖ ಹಾಕಿಕೊಂಡಿರುವ ರಾಘವೇಶ್ವರ ಭಾರತಿಗೆ ತನ್ನ ಸ್ವಜಾತಿ ಜನರ ಸಾತ್ವಿಕ ಸಿಟ್ಟಿಂದ ಬಚಾವಾಗಲು 'ಸಾಗರೋಲ್ಲಂಘನ' ಒಂದೇ ಗತಿ. ಇಂಥದೊಂದು ದೂ(ದು)ರಾಲೋಚನೆ ಮಠದಲ್ಲಿ ನಡೆದಿದೆಯೆಂಬ ಚರ್ಚೆ ವಿಪ್ರ ಸಂಕುಲದಲ್ಲಿ ನಡೆದಿದೆ. ರಾಘವೇಶ್ವರನ 'ಪೀಠೋಚ್ಚಾಟನೆ' ಪ್ರಹಸನ ದಿನಕ್ಕೊಂದು ಆಯಾಮ ಪಡೆಯುತ್ತಿದೆ!

• ನಹುಶ

ಮಠಾಧೀಶರಿಗೊಂದು ಪ್ರಶ್ನೆ

ಈ ಪ್ರಶ್ನೆಯನ್ನು ಹವ್ಯಕರು ಹಾಗೂ ಹವ್ಯಕ ಮಠಾಧೀಶರಿಗೆ ಕೇಳಬೇಕಾಗಿದೆ. ಹವ್ಯಕರ ಸಭೆ ನಡೆಸಿ ಎಲ್ಲರೂ ತಮ್ಮ ಅನಿಸಿಕೆಗಳನ್ನು ಹೇಳಬಹುದೆಂದು ಘೋಷಿಸಿದಾಗ ಪ್ರಾಮಾಣಿಕವಾಗಿ ನನ್ನ ಅನಿಸಿಕೆಗಳನ್ನು ತಿಳಿಸಿದೆ. ಅನಿಸಿಕೆಗಳನ್ನು ಒಪ್ಪಬಹುದು, ಬಿಡಬಹುದು. ಆದರೆ ಹೇಳಿದವರ ಮೇಲೆ ಹಲ್ಲೆ ಮಾಡುವುದು ಯಾವ ಸಂಸ್ಕೃತಿ? ಸಭೆಯಲ್ಲಿದ್ದವರು ಎದ್ದು ಹಲ್ಲೆ ಮಾಡುವುದು ಯಾವ ಸಭೆಯ ನೀತಿ? ಮಠದ ಸಭೆ ಎಂದರೆ ಗೂಂಡಾಗಳ ಸಭೆಯಾ? ಭಯೋತ್ಪಾದಕರ ಸಭೆಯಾ? ಯು.ಹೆಚ್.ರಾಮಪ್ಪನಂತವರು ಎದ್ದು ಬಂದು ಬಾಯಿಗೆಬಂದಂತೆ ಮಾತಾಡಿ, ಗೂಂಡಾಗಿರಿ ನಡೆಸುವುದು ಸರೀನಾ? ತಾವು ಪೀಠದ ಮೇಲೆ ಕುಳಿತು ಅನಿಸಿಕೆಗಳನ್ನು ತಿಳಿಸಿ, ಗೊಂದಲ ಬಗೆಹರಿಸಿಕೊಳ್ಳೋಣ ಎಂದು ಹೇಳಿ ನನ್ನ ಅನಿಸಿಕೆಗಳನ್ನು ಹೇಳಿದಾಗ, ಕೆಲವರು ನನ್ನ ಮೇಲೆ ಹಲ್ಲೆ ಮಾಡಲು ಬಂದಾಗ, ತಾವು ತಪಸ್ವಿಗಳಾಗಿದ್ದರೆ ಹೀಗೆ ಹೇಳಬೇಕಿತ್ತು, ಅವರು ಮಠದ ಶಿಷ್ಯರು. ಅವರಿಗೆ ಅಭಿಪ್ರಾಯ ಹೇಳಲು ಹಕ್ಕಿದೆ. ಮಹಿಳೆಯನ್ನು ಅವಮಾನ ಮಾಡಬೇಡಿ ಎಂದು. ಆದರೆ ಹಾಗೆ ಹೇಳದೆ, ನನ್ನ ಬಗ್ಗೆ ತಾವೇ ಕೀಳಾಗಿ ಮಾತಾಡಿದ್ದಲ್ಲದೇ, 'ಇವಳು ನನ್ನ ಹತ್ತಿರ ಎಂಎಲ್‌ಎ, ಸೀಟಿಗೆ ಟಿಕೆಟು ಕೊಡಿಸಿ ಎಂದು ಕೇಳಲು ಬಂದಿದ್ದಳು' ಎಂದು ಸುಳ್ಳು ನುಡಿದಿರಿ. ನನಗೆ ಸೀಟು ಕೊಡಿಸಲು ತಾವು ಯಾವ ರಾಜಕೀಯ ಪಕ್ಷದ ಅಧ್ಯಕ್ಷರಾಗಿದ್ದೀರೋ ನನಗೆ ಗೊತ್ತಿಲ್ಲ, ನಿಮ್ಮ ಗೂಂಡಾ ಶಿಷ್ಯರಿಗೆ ನಿಮ್ಮ ಬಗೆಗೆ ನಿಜವಾಗಿ ನಿಷ್ಠೆಯಿಲ್ಲ, ತಮ್ಮ ಬೇಳೆ ಬೇಯಲು ಮಠ ಸೇರಿಕೊಂಡು ಸಮುದಾಯದ ಮೇಲೆ ಗೂಂಡಾಗಿರಿಗಿಳಿದಿದ್ದಾರೆ. ತಾವು ಒಬ್ಬ ಶ್ರೇಷ್ಠ ಮಠಾಧೀಶರಾಗಿದ್ದರೆ ಹೀಗೆ ಗೂಂಡಾ ಪಡೆ ಕಟ್ಟಿಕೊಂಡು ಸಮುದಾಯವನ್ನು ಬೆದರಿಸಿ ಪೀಠ ಉಳಿಸಿಕೊಳ್ಳುವ ಪ್ರಯತ್ನ ಬೇಡ.

ಎಲ್ಲರೂ ಮಠದ ಶಿಷ್ಯರೇ. ಕೆಲವರಿಗೆ ಮಠದ ಬಗೆಗೆ ಅಸಮಾಧಾನವಿದೆ. ಯಾಕೆ ಎಂದು ವಿಶ್ವಾಸದಿಂದ ವರ್ತಿಸಿ, ವಿಚಾರಿಸಿ.

ಕಳೆದ ವರ್ಷ ಗೂಂಡಾಗಿರಿಯಿಂದ ಗೋಕರ್ಣದ ಮಹಾಬಲೇಶ್ವರನ ಮೇಲೆ ಅಧಿಕಾರ ಸ್ಥಾಪಿಸಿದಿರಿ. ಕೇವಲ ಒಂದೇ ವರ್ಷದಲ್ಲಿ ತಮ್ಮ ಪೀಠದ ಅವನತಿಯನ್ನು ಕಾಣುತ್ತಿದ್ದೀರಿ. ಇದು ಮಹಾಬಲೇಶ್ವರನ ಶಾಪವಾ?

-ಇಂದಿರಾ ಮೋಹನ ಹೆಗಡೆ, ಸಾಗರ



ಬಿಜಾಪುರ: ಚೆಡ್ಡಿ ಶಾಸಕನ ಸೇಡಿಗೆ ಸ್ಲಮ್ ಜನರು ಬೀದಿಗೆ...





ಬಿಜಾಪುರದ ಸ್ಲಮ್ ಜನರೀಗ ಬೀದಿಗೆ ಬೀಳುತ್ತಿದ್ದಾರೆ. ಅಂತಹ ಭಯಂಕರ ನೆರೆಯನ್ನೂ ಎದುರಿಸಿ ಹೇಗೋ ಬದುಕುಳಿದ ಸ್ಲಮ್ ಜನರೀಗ ಚೆಡ್ಡಿ ಶಾಸಕ ಅಪ್ಪು ಪಟ್ಟಣಶೆಟ್ಟಿಯ ಸೇಡಿಗೆ ಬಲಿಯಾಗುತ್ತಿದ್ದಾರೆ.

ಸ್ಲಮ್‌ಗಳ ಕಾರಣದಿಂದಾಗಿಯೇ ಬಿಜಾಪುರ ನಗರದಲ್ಲಿ ನೆರೆ ಪ್ರವಾಹ ಉಂಟಾಗಿದ್ದು ಎಂಬ 'ಸಂಶೋಧನೆ' ಮಾಡಿರುವ ಶಾಸಕ ಪಟ್ಟಣಶೆಟ್ಟಿ ಮತ್ತು ಜಿಲ್ಲಾಧಿಕಾರಿ ಶಾಂತರಾಜ್ ಬಿಜಾಪುರದ ಸ್ಲಮ್‌ಗಳ ಮನೆಗಳನ್ನು ಜೆಸಿಬಿ ಯಂತ್ರಗಳಿಂದ ಒಡೆದು ಹಾಕುತ್ತಿದ್ದಾರೆ. ಈಗಾಗಲೇ ಸಿ.ಟಿ.ಎಸ್.ನಂ. 510/A, ಸಿ.ಟಿ.ಎಸ್.ನಂ. 324/1B/2A ಮತ್ತು ನಂ. 638ರ ಒಟ್ಟು 1 ಎಕರೆ 14 ಗುಂಟೆ ಜಾಗದಲ್ಲಿದ್ದ ಮನೆಗಳನ್ನೆಲ್ಲ ಕೆಡವಿ ಹಾಕಲಾಗಿದ್ದು, ಅಲ್ಲಿದ್ದ ನೂರಾರು ಬಡಕುಟುಂಬಗಳನ್ನು ಬಿಜಾಪುರ ನಗರದಿಂದ ಹನ್ನೆರಡು ಕಿ.ಮೀ. ದೂರದ ಶೆಡ್ಡುಗಳಿಗೆ ವರ್ಗಾಯಿಸಲಾಗಿದೆ. ನಗರದಲ್ಲಿ ಕೂಲಿ ಮಾಡುವ ಈ ಜನರ ಜೀವನೋಪಾಯಕ್ಕೂ ಧಕ್ಕೆ ಒದಗಿದೆ. ಮಕ್ಕಳು ಶಾಲೆಗೆ ಬರಲು ಒದ್ದಾಡುತ್ತಿವೆ.



ಅಂದಂತೆ ಸ್ಲಮ್‌ಗಳ ಮೇಲೆ ಪಟ್ಟಣಶೆಟ್ಟಿಯ ಕಣ್ಣು ಬಿದ್ದಿರುವುದು ಇದೇ ಮೊದಲ ಸಲವಲ್ಲ. ಇದಕ್ಕೆ ಪ್ರಮುಖವಾಗಿ ಎರಡು ಕಾರಣಗಳಿವೆ. ಮೊದಲನೆಯದು: ಸ್ಲಮ್‌ನಲ್ಲಿರುವ ಶೇ.80ರಷ್ಟು ಜನ ಮುಸ್ಲಿಮರಾಗಿದ್ದು, ಇವರು ಬಿಜೆಪಿಗೆ ಓಟು ಹಾಕುವುದಿಲ್ಲ ಎಂಬುದು. ಎರಡನೆಯದು : ಪಟ್ಟಣಶೆಟ್ಟಿ ಪಕ್ಕಾ ರಿಯಲ್ ಎಸ್ಟೇಟ್ ವ್ಯಾಪಾರಿಯಾಗಿದ್ದು, ಆತನ ಪಂಚಮಿ ಡೆವಲಪರ್ಸ್‌ಗೆ ಸ್ಲಮ್ ಭೂಮಿ ಬೇಕಾಗಿರುವುದು. ಹೀಗೆ ಶಾಸಕನೊಬ್ಬನ ಸ್ವಾರ್ಥ ಮತ್ತು ಸೇಡು ಎರಡೂ ಬೆರೆತುಕೊಂಡು ಬಡಪಾಯಿಗಳು ಬೀದಿಗೆ ಬೀಳುವಂತಾಗಿದೆ. ಇಲ್ಲಿ 'ನೆರೆ ಪ್ರವಾಹ ತಡೆಗಾಗಿ' ಎಂಬ ಮೂರ್ಖ ಕಾರಣವನ್ನು ಮುಂದೊಡ್ಡಲಾಗುತ್ತಿದೆಯಷ್ಟೇ.

ಬಿಜಾಪುರ ನಗರದಲ್ಲಿ ಸುಮಾರು 95 ಸ್ಲಮ್‌ಗಳಿದ್ದು 67 ಸ್ಲಮ್‌ಗಳು ಸ್ಲಮ್ ಬೋರ್ಡ್‌ನಿಂದ ಮಾನ್ಯತೆ ಪಡೆದಿವೆ. ಈ ಸ್ಲಮ್‌ಗಳಲ್ಲಿ ಸುಮಾರು 30 ಸಾವಿರ ಜನ ವಾಸಿಸುತ್ತಿದ್ದು, ಇಲ್ಲಿ ಮುಸ್ಲಿಮರು, ದಲಿತರೇ ಜಾಸ್ತಿಯಾಗಿದ್ದಾರೆ. ಕಟ್ಟಡ ಕಾಮಗಾರಿ, ರಸ್ತೆ ಕಾಮಗಾರಿ, ಆಟೋ, ಟಾಂಗಾ ನಡೆಸುವುದು, ಕೂಲಿ ಕೆಲಸ, ಮನೆಗೆಲಸ- ಇಂತಹವುಗಳಿಂದ ಹೊಟ್ಟೆ ಹೊರೆಯುತ್ತಿರುವ ಈ ಬಡಜನರನ್ನು ಒಕ್ಕಲೆಬ್ಬಿಸಿದರೆ ಲಭ್ಯವಾಗುವ ಅಪಾರ ಪ್ರಮಾಣದ ಭೂಮಿಯ ಮೇಲೆ ಲ್ಯಾಂಡ್ ಮಾಫಿಯಾಗಳ ಕಣ್ಣು ಬಿದ್ದಿದೆ. ತನಗೆ ಅಲ್ಪಸಂಖ್ಯಾತರ ಓಟುಗಳ ಅಗತ್ಯವಿಲ್ಲ ಎಂದು ಬಹಿರಂಗವಾಗಿಯೇ ಹೇಳಿಕೆ ನೀಡುವ ನೆಲಗಳ್ಳ ಶಾಸಕ ತನಗೆ ಓಟು ನೀಡದ ಈ ಬಡಜನರ ಮೇಲೆ ಸೇಡು ತೀರಿಸಿಕೊಳ್ಳುವಂತಹ ನಾಚಿಕೆಗೇಡಿನ ಕೆಲಸಕ್ಕೆ ಮುಂದಾಗಿದ್ದಾನೆ.

ಮೊನ್ನೆಯ ನೆರೆಹಾವಳಿ ನಂತರ ಜಿಲ್ಲಾಡಳಿತ ಯಾವ ಮುನ್ಸೂಚನೆಯನ್ನೂ ನೀಡದೇ ಏಕಾಏಕಿ ಸ್ಲಮ್‌ಗಳ ಮೇಲೆ ಮುಗಿಬಿದ್ದಿದೆ. ಪಟೇಲ್‌ಗಲ್ಲಿ ಮತ್ತು ಕಣಕಿ ಬಜಾರ್‌ನ ಸ್ಲಮ್‌ಗಳ ಮನೆಗಳನ್ನು ಜೆಸಿಬಿ ಯಂತ್ರಗಳಿಂದ ಒಡೆದುಹಾಕಿದೆ. ಬದಿಪಾಲಾದ ಜನ ಪ್ರತಿಭಟಿಸಿದರೆ ಅವರ ಮೇಲೆ ಲಾಠಿ ಚಾರ್ಜ್ ಮಾಡಿದೆ ದುಷ್ಟ ಜಿಲ್ಲಾಡಳಿತ. ಬಡಜನರಿಗೆ ತಮ್ಮ ಸಾಮಾನು, ಆಹಾರ ಪದಾರ್ಥಗಳನ್ನು ತೆಗೆದುಕೊಳ್ಳಲೂ ಅವಕಾಶ ನೀಡಿಲ್ಲ. 40 ವರ್ಷಗಳಿಂದ ಈ ಪ್ರದೇಶದಲ್ಲಿ ವಾಸವಾಗಿರುವ ಈ ಜನರ ಬಳಿ ಭೂದಾಖಲೆ, ಕಂದಾಯಪತ್ರಗಳಿವೆ. ವಿದ್ಯುತ್, ನೀರಿನ ಕರ ಮತ್ತು ಸ್ವಯಂಘೋಷಿತ ಆಸ್ತಿ ತೆರಿಗೆಯನ್ನು ಪಾವತಿಸುತ್ತ ಬಂದಿರುವ ಈ ಜನ, ಈ ವಿಳಾಸದ ಆಧಾರದ ಮೇಲೆಯೇ ರೇಷನ್ ಕಾರ್ಡ್ ಮತ್ತು ಇಲೆಕ್ಷನ್ ಐಡೆಂಟಿಟಿ ಕಾರ್ಡ್‌ಗಳನ್ನು ಪಡೆದುಕೊಂಡಿದ್ದಾರೆ. ಹೀಗೆ ನ್ಯಾಯಯುತವಾಗಿ ಬದುಕುತ್ತಿದ್ದ ಜನರಿಗೆ ಮೂಲಭೂತ ಸೌಕರ್ಯ ಒದಗಿಸಬೇಕಾದ ಶಾಸಕನೇ ಅವರನ್ನು ಬೀದಿಪಾಲು ಮಾಡುತ್ತಾನೆಂದರೆ ಇವನೆಂತಹ ದುಷ್ಟನಿರಬಹುದು ಲೆಕ್ಕ ಹಾಕಿ.

ಆದರೆ ಇದೇ ಏರಿಯಾದಲ್ಲಿರುವ ಆರೆಸ್ಸೆಸ್ ಮುಖಂಡನೊಬ್ಬನ ಮನೆ ಮತ್ತು ಮಾಜಿ ಶಾಸಕನೊಬ್ಬನ ವೈನ್‌ಶಾಪ್‌ಗಳನ್ನು ಮಾತ್ರ ಮುಟ್ಟದ ಜಿಲ್ಲಾಡಳಿತ ಕಡುಬಡವರನ್ನು ಬೀದಿಗೆ ತಳ್ಳುವಲ್ಲಿ ಕಾರ್ಯನಿರತವಾಗಿದೆ.

ಲ್ಯಾಂಡ್ ಮಾಫಿಯಾ ಲಾಬಿ

ಜನರಿಗೆ ಪುನರ್ವಸತಿ ಸೌಲಭ್ಯವನ್ನು ಒದಗಿಸದೇ ಹೀಗೆ ಏಕಾಏಕಿ ಸ್ಲಮ್‌ಗಳನ್ನು ಖಾಲಿ ಮಾಡುತ್ತಿರುವುದರ ಹಿಂದೆ ಲ್ಯಾಂಡ್ ಮಾಫಿಯಾದ ಕೈವಾಡವೂ ಇದೆ. ಶಾಸಕ ಅಪ್ಪುಪಟ್ಟಣಶೆಟ್ಟಿಯ ಪಂಚಮಿ ಡೆವಲಪರ್ಸ್ ಸೇರಿದಂತೆ ಹತ್ತಾರು ರಿಯಲ್ ಎಸ್ಟೇಟ್ ಕಂಪೆನಿಗಳು ಈಗಾಗಲೇ ಬಿಜಾಪುರ ನಗರದಾದ್ಯಂತ ಸಾಕಷ್ಟು ಭೂಮಿ ಕಬಳಿಸಿಯಾಗಿದೆ. ಈಗ ಅವು ಸ್ಲಂ ಭೂಮಿಯನ್ನು ಸ್ವಾಹಾ ಮಾಡಲು ಜಿಲ್ಲಾಡಳಿತದ ಮೂಲಕ ಕಾರ್ಯಾಚರಣೆಗಿಳಿದಿವೆ.

ಈ ಹಿಂದೆ ಬಿಜಾಪುರದ ಬಬಲೇಶ್ವರ ಸರ್ಕಲ್ ಹತ್ತಿರದ ಸ್ಲಮ್ ಅನ್ನು ಟ್ರಾಫಿಕ್ ದಟ್ಟಣೆಯ ಕಾರಣದಿಂದ ಖಾಲಿ ಮಾಡಿಸಿ ಆ ಜಾಗವನ್ನು ಶಿವಾನಂದ ಪಾಟೀಲನಿಗೆ ಲೀಸ್ ಆಧಾರದ ಮೇಲೆ ನೀಡಲಾಗಿತ್ತು, ಈಗಲೂ ಅದು ಶಿವಾನಂದ ಪಾಟೀಲನ ವಶದಲ್ಲೇ ಇದೆ. ಈಗಲೂ ಅಷ್ಟೇ ಈಗ ತೆರವಾಗಿರುವ ಕಣಕಿ ಬಜಾರ್ ಸ್ಲಮ್ ಪ್ರದೇಶವನ್ನು ಖಾಸಗಿ ಬಸ್ ಮಾಫಿಯಾಕ್ಕೆ ಅನಧಿಕೃತವಾಗಿ ನೀಡಲಾಗಿದೆ.

ನೆರೆ ಪ್ರವಾಹ ತಡೆಯುವ ನೆಪದಲ್ಲಿ ಸ್ಲಮ್‌ಗಳ ಬಡಜನರನ್ನು ಬೀದಿಗೆ ತಳ್ಳುತ್ತಿರುವ ಭೂಗಳ್ಳ ಚೆಡ್ಡಿ ಶಾಸಕ ಅಪ್ಪುಪಟ್ಟಣಶೆಟ್ಟಿ ವಿರುದ್ಧ ಜನ ಬೀದಿಗಿಳಿಯಬೇಕಿದೆ. ಏಕೆಂದರೆ ವಿರೋಧ ಪಕ್ಷಗಳಿನ್ನೂ ಗಾಢ ನಿದ್ರೆಯಲ್ಲಿ ಮುಳುಗಿವೆ.

● ಮಹಾಲಿಂಗಪ್ಪ ಆಲಬಾಳ



ಬಳ್ಳಾರಿ, ಧಾರವಾಡ: ಪಂಚಾಯತ್ ಸದಸ್ಯರ ಹೈಜಾಕ್

ರೆಸಾರ್ಟ್ ರಾಜಕಾರಣ ಮತ್ತು 'ಆಪರೇಷನ್ ಕಮಲ'ಗಳು ಮತ್ತೊಂದು ಹೊಸ ವಿಕೃತಿಯನ್ನು ಬಿಚ್ಚಿಟ್ಟಿವೆ. ಅವು ಸ್ಥಳೀಯ ಸಂಸ್ಥೆಗಳ ಸದಸ್ಯರನ್ನೂ ಕುಲಗೆಡಿಸುವ ಮೂಲಕ ಅಸಹ್ಯದ ಪರಮಾವಧಿಯನ್ನು ತಲುಪಿದಂತಾಗಿದೆ.


ವಿಧಾನ ಪರಿಷತ್ ಚುನಾವಣೆಯಲ್ಲಿ ಸೋಲುವ ಭೀತಿಗೆ ಬಿದ್ದ ಬಳ್ಳಾರಿಯ ಗಣಿಗಳ್ಳ ಸಚಿವರು ಬಳ್ಳಾರಿಯ ಜಿ.ಪಂ., ತಾ.ಪಂ., ಗ್ರಾ.ಪಂ. ಮತ್ತು ಪುರಸಭೆಗಳ ನಾಲ್ಕು ಸಾವಿರದಷ್ಟು ಸದಸ್ಯರನ್ನು ಹೈಜಾಕ್ ಮಾಡಿ ಹುಬ್ಬಳ್ಳಿ-ಧಾರವಾಡ, ಗೋವಾ, ಮುರ್ಡೇಶ್ವರದ ರೆಸಾರ್ಟುಗಳಲ್ಲಿ ಹಿಡಿದಿಟ್ಟುಕೊಂಡು ಹಣಹೆಂಡಗಳ ಹೊಳೆ ಹರಿಸಿದ್ದಾರೆ. ಹುಬ್ಬಳ್ಳಿಯ ಮಯೂರ್ ರೆಸಾರ್ಟ್ ಮತ್ತು ಟ್ರಾವಲ್ಸ್-ಇನ್ ಹೋಟೆಲ್‌ಗಳಲ್ಲಿ 2965 ಸದಸ್ಯರನ್ನು ಕೂಡಿ ಹಾಕಲಾಗಿತ್ತು. ರೆಡ್ಡಿಯ ಕಡೆಯ ರವೀಂದ್ರ ಒದುಗೌಡ್ರ ಮತ್ತು ಶಿವನಗೌಡ್ರ ಎಂಬಿಬ್ಬರು, "ಮದುವೆಗಾಗಿ ಬಳ್ಳಾರಿ ಕಡೆಯ ಜನ ಬರುತ್ತಾರೆ" ಎಂದು ಹೇಳಿ ರೆಸಾರ್ಟ್, ಹೋಟೆಲ್‌ಗಳನ್ನು ಬುಕ್ ಮಾಡಿದ್ದರು. ಆದರೆ ಅಲ್ಲಿಗೆ ಬಂದವರೆಲ್ಲ ಮದುವೆಗೆ ಬಂದವರಲ್ಲ, ಬದಲಿಗೆ ಹೈಜಾಕಾದ ಬಳ್ಳಾರಿಯ ಸ್ಥಳೀಯ ಸಂಸ್ಥೆಗಳ ಸದಸ್ಯರು ಎಂಬುದನ್ನು ಮಾಧ್ಯಮಗಳು ಪತ್ತೆಹಚ್ಚಿ ಯಡ್ಡಿ-ರೆಡ್ಡಿಗಳ ಹೊಲಸಾಟವನ್ನು ಬಯಲಿಗೆಳೆದವು. ನಾಚಿಕೆಗೇಡಿ ರೆಡ್ಡಿಗಳು ಅವರನ್ನೆಲ್ಲ ಹುಬ್ಬಳ್ಳಿ-ಧಾರವಾಡದಿಂದ ಖಾಲಿ ಮಾಡಿಸಿ, ಗೋವಾ, ಮುರ್ಡೇಶ್ವರಗಳತ್ತ ಎಳೆದುಕೊಂಡು ಹೋಗಿದ್ದಾರೆ.

ರೆಡ್ಡಿಗಳ ಈ ಹಲ್ಕಟ್ ತಂತ್ರವನ್ನೇ ಅನುಸರಿಸಿದ ಸಚಿವರಾದ ಜಗದೀಶ್ ಶೆಟ್ಟರ್, ಬೊಮ್ಮಾಯಿ, ಉದಾಸಿಗಳು ಕೂಡಾ ಧಾರವಾಡ ವಿಧಾನ ಪರಿಷತ್ ಕ್ಷೇತ್ರದಲ್ಲಿ ಬಿಜೆಪಿಯ ಶಿವರಾಜ ಸಜ್ಜನರ ಸೋಲುವ ಮುನ್ಸೂಚನೆ ಸಿಕ್ಕಿದ್ದರಿಂದ, ಗದಗ-ಹಾವೇರಿಗಳ 300 ಕ್ಕೂ ಹೆಚ್ಚು ಸ್ಥಳೀಯ ಸಂಸ್ಥೆ ಸದಸ್ಯರನ್ನು ಧರ್ಮಸ್ಥಳ, ಉಡುಪಿ, ಸುಬ್ರಮಣ್ಯಗಳಲ್ಲಿ ತಿರುಗಾಡಿಸಿ, ಮಂಗಳೂರಿನ ಮೂಲಕ ಗೋವಾದ ರೆಸಾರ್ಟ್‌ಗಳಿಗೆ ಸಾಗಿಸಿದ್ದಾರೆ.

ಬಿಜೆಪಿಗಳಿಂದಾಗಿ ರಾಜಕೀಯ ದಿನೇದಿನೇ ಅಧೋಗತಿಗಿಳಿಯುತ್ತಿದೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಸರಿಯಾಗಿ ಪಾಠ ಕಲಿಸುವುದು ಸ್ಥಳೀಯ ಸಂಸ್ಥೆಗಳ ಸದಸ್ಯರ ಕರ್ತವ್ಯವಾಗಿದೆ.

ಹುಬ್ಬಳ್ಳಿ: ಅದಮ್ಯ ಚೇತನದ ನಾನ್‌ವೆಜ್ ಬಿಸಿಯೂಟ!

ಮಕ್ಕಳಿಗೆ ಬಿಸಿಯೂಟದಲ್ಲಿ ಮೊಟ್ಟೆ ಕೊಡುವುದಕ್ಕೂ ತಕರಾರು ಎತ್ತಿದ ಸನಾತನವಾದಿಗಳು ಈಗ ನಾನ್‌ವೆಜ್ ಬಿಸಿಯೂಟ ಪೂರೈಸುತ್ತಿದ್ದಾರಾ ಅಂತಾ ಕನ್ಫ್ಯೂಸ್ ಆಗಬೇಡಿ. ಹುಬ್ಬಳ್ಳಿಯ 'ಅದಮ್ಯ ಚೇತನ'ವು ಸಾಂಬಾರಿನಲ್ಲಿ ಹಲ್ಲಿ ಬೇಯಿಸುವ ಮೂಲಕ ತನ್ನ ಶಿಸ್ತು, ಅಚ್ಚುಕಟ್ಟುತನದ ಲೆವೆಲ್ ಅನ್ನು ತಾನೇ ತೋರಿಸಿಕೊಂಡಿದೆ.



ಈ ತಿಂಗಳ 14 ರಂದು ಹುಬ್ಬಳ್ಳಿಯ ಕೇಶ್ವಾಪುರದ ಸೇಂಟ್ ಮೇರಿಸ್ ಪ್ರಾಥಮಿಕ ಮತ್ತು ಫಾತೀಮಾ ಪ್ರೌಢಶಾಲೆಗಳಿಗೆ ಅದಮ್ಯ ಚೇತನ ನೀಡಿದ ಬಿಸಿಯೂಟದ ಸಾರಿನಲ್ಲಿ ಹಲ್ಲಿ ಪತ್ತೆಯಾಗಿದೆ. ಅದಾಗಲೇ ಅರ್ಧ ಮಕ್ಕಳು ಊಟ ಮಾಡಿಯಾಗಿತ್ತು, ಗಾಬರಿಬಿದ್ದ ಶಿಕ್ಷಕರು ಆ ಮಕ್ಕಳ ತಪಾಸಣೆ ಮಾಡಿಸಿ, ಉಳಿದ ಮಕ್ಕಳಿಗೆ ಊಟ ನೀಡದೇ ಜಾಗೃತಿ ವಹಿಸಿದರು. ಇತ್ತೀಚೇಗಷ್ಟೇ ಹುಳುಸು ಹಿಡಿದ ಧಾನ್ಯಗಳಿಂದ ಆಹಾರ ತಯಾರಿಸಿ ನೀಡಿದ್ದು ಸಹ ಅಲ್ಲಲ್ಲಿ ನಡೆದಿದೆ.

ಇದನ್ನು ಏನೋ ಆಕಸ್ಮಿಕ ಎಂದು ತಳ್ಳಿ ಹಾಕುವಂತಿಲ್ಲ. ಈ ಹಿಂದಿದ್ದ ಸರ್ಕಾರಿ ವ್ಯವಸ್ಥೆ ನೀಟಾಗಿಲ್ಲ ಎಂದು ಪುಕಾರು ಎಬ್ಬಿಸಿ, ಈ ಬಿಸಿಯೂಟದ 'ಜವಾಬ್ದಾರಿ'ಯನ್ನು ಪಡೆದುಕೊಂಡ ಇಸ್ಕಾನ್, ಅದಮ್ಯ ಚೇತನಗಳು ತಮ್ಮದು ಭಾರೀ ಅಚ್ಚುಕಟ್ಟಾದ ಕೆಲಸ ಎಂದಿದ್ದವು. ಅಡುಗೆ ಕೆಲಸಕ್ಕಿದ್ದ ಸಾವಿರಾರು ಹಿಂದುಳಿದ, ದಲಿತ, ಅಲ್ಪಸಂಖ್ಯಾತ ಮಹಿಳೆಯರ ಹೊಟ್ಟೆ ಮೇಲೆ ಕಲ್ಲು ಚಪ್ಪಡಿ ಹಾಕಿ, ಭಟ್ಟಾತಿಭಟ್ಟರನ್ನು ಅಡುಗೆಗೆ ನೇಮಿಸಿಕೊಂಡವು. ಸರ್ಕಾರ ನೀಡುವ ಅಕ್ಕಿ, ಬೇಳೆ, ಎಣ್ಣೆ ಉಪ್ಪು ಇತ್ಯಾದಿಗಳಲ್ಲಿ ಅಡುಗೆ ಮಾಡಿ ಪುಕ್ಕಟೆ ಪ್ರಚಾರ ಪಡೆಯುವ ಈ ಸಂಸ್ಥೆಗಳು ಮಕ್ಕಳಲ್ಲಿ ಜಾತಿ ವಿಷ ಬೀಜ ಬಿತ್ತುವ ದಿನಗಳು ದೂರವಿಲ್ಲ, ಏಕೆಂದರೆ ಈಗಾಗಲೇ ಇಸ್ಕಾನ್‌ನ ಬಿಸಿಯೂಟ ತಿನ್ನುವ ಮೊದಲು ಮಕ್ಕಳು 'ಹರೇ ರಾಮ, ಹರೇ ಕೃಷ್ಣ' ಎಂದು ಹೇಳಲೇಬೇಕು.



ವಿದೇಶಿ ಫಂಡು ಪಡೆದು, ಸರ್ಕಾರದ ಸವಲತ್ತಿನಲ್ಲಿ ಹಲ್ಲಿ ಮಿಶ್ರಿತ ನಾನ್‌ವೆಜ್ ಬಿಸಿಯೂಟ ನೀಡುವ ಇಂತಹ ಕೋಮುವಾದಿ ಸಂಸ್ಥೆಗಳನ್ನು ಹೊರಗಿಟ್ಟು, ಮೊದಲಿನಂತೆ ಸರ್ಕಾರದ ಶಿಕ್ಷಣ ಇಲಾಖೆಯೇ ಆ ಕೆಲಸ ಮಾಡುವುದೊಳಿತು.

● ಹುಬ್ಬಳ್ಳಿಯಾಂವ

ಚಾಮರಾಜನಗರ: ರೈತರ ಮೇಲೆ ಡಿ.ಸಿ. ಲಾಠಿ





ಚಳವಳಿ, ಹೋರಾಟ, ಪ್ರತಿಭಟನೆಗಳನ್ನು ಎದುರಿಸಲಾಗದ ಯಡ್ಡಿ ಸರ್ಕಾರ ಎಲ್ಲದಕ್ಕೂ ಲಾಠಿ, ಬಂದೂಕುಗಳ ಮೂಲಕ ಪರಿಹಾರ ಕಂಡುಕೊಳ್ಳುತ್ತಿದೆ. ಕಳೆದ ವಾರ ಚಾಮರಾಜನಗರ, ದಾವಣಗೆರೆ, ರಾಯಚೂರುಗಳಲ್ಲಿ ಪ್ರತಿಭಟನಾನಿರತ ರೈತರ ಮೇಲೆ ಲಾಠಿ ಚಾರ್ಜ್ ಮಾಡುವ ಮೂಲಕ ತಾನೆಂತಹ ಜನದ್ರೋಹಿ



ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿಕೊಂಡಿದೆ ಯಡ್ಡಿ ಆಡಳಿತ. ಚಾಮರಾಜನಗರದಲ್ಲಂತೂ, ಚೆಡ್ಡಿ ಜಿಲ್ಲಾಧಿಕಾರಿ ಮನೋಜ್‌ಕುಮಾರ್ ಮೀನಾ ತಾನೇ ಲಾಠಿ ಬೀಸುತ್ತಾ ಪಕ್ಕಾ ರೌಡಿಯಂತೆ ವರ್ತಿಸಿದ್ದಾನೆ. ಇವನಿಗೆ ಸಾಥ್ ಆಗಿ ನಿಂತವನು ಎಸ್ಪಿ ಡಿ.ಟಿ. ಪವಾರ್ ಇವರಿಬ್ಬರನ್ನು ಸಸ್ಪೆಂಡ್ ಮಾಡಬೇಕಾಗಿದ್ದ ಸರ್ಕಾರ ಏನೂ ಆಗಿಲ್ಲವೆಂಬಂತೆ ತನ್ನ ದಂಧೆಯಲ್ಲಿ ಮುಳುಗಿದೆ. ಬಹುಶಃ ಹಾವೇರಿಯಲ್ಲಾದಂತೆ ಇಲ್ಲೂ ಗೋಲಿಬಾರ್ ಮಾಡಿ ರೈತರ ಬಲಿ ತೆಗೆದುಕೊಂಡಿದ್ದರೆ ಯಡ್ಡಿ, ಆಚಾರ್ಯರಿಗೆ ಇನ್ನೂ ಖುಷಿಯಾಗುತ್ತಿತ್ತೇನೋ?

ಡಿಸೆಂಬರ್ 11 ರಂದು ಸಮರ್ಪಕ ವಿದ್ಯುತ್ ಪೂರೈಕೆ, ಬೀಜ-ಗೊಬ್ಬರ ಪೂರೈಕೆಗಾಗಿ ಶಾಂತಿಯುತ ಪ್ರತಿಭಟನೆ ಮಾಡುತ್ತಿದ್ದ ರೈತರ ಮೇಲೆ ಅನಗತ್ಯವಾಗಿ ಲಾಠಿ ಚಾರ್ಜ್ ಮಾಡಿಸಿದ ಜಿಲ್ಲಾಧಿಕಾರಿ ಮನೋಜ್ ಕುಮಾರ್ ಮೀನಾ ಮೂಲತಃ ಚೆಡ್ಡಿ ಮನಸ್ಸಿನವನೇ. ಡಿ.ಸಿ, ಎಸ್ಪಿಗಳ ಆದೇಶ ಹೊರಟದ್ದೇ ತಡ, ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದವರಂತೆ ಕಾಣುತ್ತಿದ್ದ ಪೊಲೀಸರು ರೈತರ ಮೇಲೆ ಎರ್‍ರಾಬಿರ್‍ರಿ ಲಾಠಿ ಬೀಸಿ ರಕ್ತಪಾತ ನಡೆಸಿಬಿಟ್ಟರು. ಬೇಡರಪುರದ ಶಿವಕುಮಾರ್, ಮಹೇಶ್, ರಾಜಪ್ಪ, ಹೆಗ್ಗವಾಡಿಪುರದ ಮಹೇಶ್, ಎಮ್ಮತ್ತೂರಿನ ಮೂರ್ತಿ, ಕೆಂಗಾಳಿ ನಾಗರಾಜ್, ನಿಟ್ರೆ ವಸಂತ್ ಮುಂತಾದ ರೈತರು ಗಂಭೀರ ಗಾಯಗಳಿಂದ ಆಸ್ಪತ್ರೆಯ ಐಸಿಯು ಸೇರುವಂತಾಗಿದೆ. ಇನ್ನು ನೂರಾರು ರೈತರು ತಾವೇನೂ ತಪ್ಪು ಮಾಡದಿದ್ದರೂ ಜೈಲು ಪಾಲಾಗಿದ್ದಾರೆ.

ಲಾಠಿ ಚಾರ್ಜ್ ಆಗುವವರೆಗೂ ರೈತರ ಪರ ಬೀದಿಗಿಳಿದಿರದಿದ್ದ ರೈತ ನಾಯಕರು, ಕಾಂಗ್ರೆಸ್ ನಾಯಕರು ಕೊನೆಗೂ ಎಚ್ಚರಗೊಂಡರು. ರೈತ ನಾಯಕರಾದ ಕೆ.ಎಸ್. ಪುಟ್ಟಣ್ಣಯ್ಯ, ಚುಕ್ಕಿ ನಂಜುಂಡಸ್ವಾಮಿ, ಕೋಡಿಹಳ್ಳಿ ಚಂದ್ರಶೇಖರ್ ಮುಂತಾದವರೆಲ್ಲ ಚಾಮರಾಜನಗರಕ್ಕೆ ಧಾವಿಸಿ ಡಿಸೆಂಬರ್ 12 ರಂದು ಚಾಮರಾಜನಗರ ಬಂದ್‌ಗೆ ಕರೆ ನೀಡಿದರು. ಆದರೆ ಮಾನಗೇಡಿ ಜಿಲ್ಲಾಡಳಿತ ನಿಷೇಧಾಜ್ಞೆ ಜಾರಿ ಮಾಡುವ ಮೂಲಕ ಮತ್ತೊಮ್ಮೆ ತನ್ನ ಫ್ಯಾಸಿಸ್ಟ್ ಬುದ್ಧಿಯನ್ನು ತೋರಿಸಿಬಿಟ್ಟಿತು. ಡಿಸಿ, ಎಸ್ಪಿಗಳ ಈ ಕುತಂತ್ರಕ್ಕೆ ಹೆದರದ ರೈತರು ಸುತ್ತಲೂರುಗಳಿಂದ ಚಕ್ಕಡಿ, ಟ್ರ್ಯಾಕ್ಟರ್‌ಗಳಲ್ಲಿ ಬಂದು ಪ್ರವಾಸಿಮಂದಿರದ ಬಳಿ ಜಮಾವಣೆಗೊಂಡರು.

ಸಾವಿರಾರು ಸಂಖ್ಯೆಯಲ್ಲಿ ಸೇರತೊಡಗಿದ ರೈತರನ್ನು ಗದುಮಲೆಂದೇ ಮೂರುಪಟ್ಟು ಪೊಲೀಸರನ್ನು ನಿಯೋಜಿಸಿತ್ತು ಗೂಂಡಾ ಜಿಲ್ಲಾಡಳಿತ. ಆದರೆ ಶಾಂತಿಯುತವಾಗಿಯೇ ಇದ್ದ ರೈತರು ಜಿಲ್ಲಾಡಳಿತದ ಸಂಚನ್ನು ವಿಫಲಗೊಳಿಸಿದರು. ಇಲ್ಲಿವರೆಗೂ ರೈತರ ಪರ ಚಕಾರವೆತ್ತದಿದ್ದ ಚಾಮರಾಜನಗರ ಜಿಲ್ಲೆಯ ಕಾಂಗ್ರೆಸ್ ಶಾಸಕರಾದ ಪುಟ್ಟರಂಗಶೆಟ್ಟಿ, ಮಹದೇವ ಪ್ರಸಾದ್, ನರೇಂದ್ರ ಸ್ವಾಮಿ, ಕಾಂಗ್ರೆಸ್ ನಾಯಕ ಶ್ರೀನಿವಾಸ ಪ್ರಸಾದ್‌ಗಳೆಲ್ಲ ಬಂದ್‌ನಲ್ಲಿ ಪಾಲ್ಗೊಂಡು ತಾವು ರೈತರ ಪರ ಎಂದು ಪೋಸು ಕೊಟ್ಟರಷ್ಟೇ.

ಲಾಠಿ ಹಿಡಿದ ಡಿಸಿ, ಅರ್ಧ ರಾತ್ರಿಯಲ್ಲಿ ಹಾಲಪ್ಪ!

ರೈತರ ಬಂದ್ ಅನ್ನು ವಿಫಲಗೊಳಿಸಿ, ಮತ್ತೊಮ್ಮೆ ಲಾಠಿ ಚಾರ್ಜ್ ಮಾಡಲು ತಯಾರಾಗಿದ್ದ ಡಿಸಿ ಮನೋಜ್‌ಕುಮಾರ್ ಮೀನಾ ಸ್ವತಃ ಕೈಯಲ್ಲಿ ಲಾಠಿ ಹಿಡಿದು ತಿರುಗಿಸುತ್ತಾ ಥೇಟ್ ರೌಡಿಯಂತೆ ವರ್ತಿಸಿದ್ದು ಅವನ ಗುರು ಯಡ್ಡಿಯ ದರ್ಪಕ್ಕೆ ಸಾಕ್ಷಿಯಂತಿತ್ತು. ಲಾಠಿ ಚಾರ್ಜ್ ಆದಮೇಲೆ ಅರ್ಧರಾತ್ರಿಯ ಹೊತ್ತಿನಲ್ಲಿ ಓಡಿಬಂದ ಜಿಲ್ಲಾ ಉಸ್ತುವಾರಿ ಸಚಿವ ಹಾಲಪ್ಪ ಕಾಟಾಚಾರಕ್ಕೆ ಡಿ.ಸಿ.ಯ ಜೊತೆ ಮಾತಾಡಿ ಓಡಿಹೋಗಿದ್ದಾನೆ. ಆದರೆ ಡಿ.ಸಿ. ಮತ್ತು ಎಸ್ಪಿಗಳನ್ನು ಸಸ್ಪೆಂಡ್ ಅಥವಾ ಟ್ರಾನ್ಸ್‌ಫರ್ ಮಾಡಲಾಗದ ಸಚಿವ ಹಾಲಪ್ಪ ನೊಂದ ರೈತರಿಗೂ ಸಾಂತ್ವನ ಹೇಳದೇ ಓಡಿಹೋಗಿರುವುದು ಅಸಹ್ಯವಾಗಿದೆ. ಈ ಸರ್ಕಾರಕ್ಕೆ ಮಾನಮರ್ಯಾದೆ ಎಂಬುದಿದ್ದರೆ, ಕೂಡಲೇ ರೈತರ ಮೇಲಿನ ಕೇಸ್‌ಗಳನ್ನು ಹಿಂತೆಗೆದುಕೊಳ್ಳಬೇಕು. ಗಾಯಗೊಂಡ ರೈತರಿಗೆ ಪರಿಹಾರ ನೀಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ ರೈತರ ಬೇಡಿಕೆಗಳನ್ನು ಈಡೇರಿಸಬೇಕು.

ಛೇ, ಈ ರೈತ ವಿರೋಧಿ, ಜನದ್ರೋಹಿ, ಜೀವ ದ್ರೋಹಿ ಸರ್ಕಾರದಿಂದ ಇಂಥದ್ದನ್ನೆಲ್ಲ ನಿರೀಕ್ಷಿಸುವುದು ಸಾಧ್ಯವೇ?

● ಕೊಳ್ಳೇಗಾಲ ಚಿಕ್ಕಮಾಳಿಗೆ




ಶಿವಮೊಗ್ಗ: ಪಾರ್ಕ್ ಕದ್ದ ಮಹಿಪಾಲನ ಮಹಿಮೆ



ಯುವ ಕಾಂಗ್ರೆಸ್‌ನಿಂದ ಪ್ರತಿಭಟನೆ

ಶಿವಮೊಗ್ಗದ ಅಧಿಕಾರಿಗಳು ನಿಜಕ್ಕೂ ಯಾರ ಪರವಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದಕ್ಕೆ ಇತ್ತೀಚೆಗೆ ಸಾಲು ಸಾಲು ಉದಾಹರಣೆಗಳು ಸಿಗುತ್ತವೆ. ಮುಖ್ಯಮಂತ್ರಿ ಯಡಿಯೂರಪ್ಪರ ಅಭಿವೃದ್ಧಿ ಮಂತ್ರ ಶಿವಮೊಗ್ಗದ ಸಾಮಾನ್ಯ ಜನರಿಗೆ ಎಷ್ಟು ಒಳ್ಳೆಯದೋ ಗೊತ್ತಿಲ್ಲ, ಆದರೆ ಸಾರ್ವಜನಿಕರಿಗೆ ನಾನಾ ತರದ ಸಮಸ್ಯೆಗಳನ್ನಂತೂ ಒಡ್ಡುತ್ತಿದೆ. ಇಡೀ ಶಿವಮೊಗ್ಗ ಧೂಳು ಹಿಡಿದು ಕೂತಿದೆ. ಜನರಿಗೆ ಅಸ್ತಮಾ, ಕೆಮ್ಮು, ಕಫಗಳಂತಹ ಸಮಸ್ಯೆಗಳು ಹೆಚ್ಚಾಗತೊಡಗಿವೆ. ಇದಲ್ಲಾ, ಒಂದು ಕಡೆಯಾದರೆ ರೋಡು, ಹೈಟೆನ್ಷನ್ ಲೈನ್, ವಿಮಾನ ನಿಲ್ದಾಣ ಇತ್ಯಾದಿಗಳ ಹೆಸರಲ್ಲಿ ಮನೆ, ಜಮೀನುಗಳನ್ನು ಜನರು ಕಳೆದುಕೊಳ್ಳುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳಿಗಾಗಿ ಜನರನ್ನು ಎತ್ತಂಗಡಿ ಮಾಡುವಾಗ ಮನೆ, ಅಂಗಡಿ ಮುಂತಾದುವನ್ನು ಕಳೆದುಕೊಳ್ಳುವ ಜನರ ಬಗ್ಗೆ ಕಿಂಚಿತ್ತೂ ಕನಿಕರ ತೋರಿಸದೆ ಡೆಮಾಲಿಷ್ ಮಾಡಿರುವ ಹಲವು ಉದಾಹರಣೆಗಳಿವೆ. ಹೊಸದಾಗಿ ನಿರ್ಮಾಣವಾಗುತ್ತಿರುವ ಯಡಿಯೂರಪ್ಪನ ಬೃಹತ್ ಕಾಂಪ್ಲೆಕ್ಸ್‌ಗೆ ಸಮೀಪದ ಪಂಚವಟಿ ಕಾಲನಿ ಸ್ಲಂನ್ನು ಇತ್ತೀಚೆಗೆ ಇದೇ ರೀತಿ ಡೆಮಾಲಿಷ್ ಮಾಡಲಾಯ್ತು. ಪರ್ಯಾಯ ವ್ಯವಸ್ಥೆಯನ್ನು ಕೊಡಿಸುವ ಈಶ್ವರಪ್ಪನ ಭರವಸೆಯನ್ನೇ ನೆಚ್ಚಿಕೊಂಡ ಜನರು ಅಸಹಾಯಕರಾಗಿ ನಿಂತುಕೊಂಡಿದ್ದರು. ಇದಾಗಿ ಎರಡು ತಿಂಗಳುಗಳಾದರೂ ಪಂಚವಟಿ ಕಾಲನಿಯ 35 ಕುಟುಂಬಗಳು ಇನ್ನೂ ಬಾಡಿಗೆ ಮನೆಗಳಲ್ಲಿ ಇವೆ. ಟಿಪ್ಪೂ ನಗರ, ತುಂಗಾನಗರ, ಅಂಬೇಡ್ಕರ್ ನಗರಗಳಲ್ಲಿ ಹೈಟೆನ್ಷನ್ ಲೈನಿನ ಕೆಳಗಿರುವ ಮನೆಗಳ ಜನರು ಹಕ್ಕುಪತ್ರಗಳನ್ನು ಹೊಂದಿರುವ ತಮಗೆ ಪರ್ಯಾಯ ಜಾಗ, ಪರಿಹಾರ ಒದಗಿಸಿ ಅಂತ ಕೇಳಿದರೆ ಜಿಲ್ಲಾಧಿಕಾರಿ ಪಂಕಜ್ ಕುಮಾರ್ ಪಾಂಡೆ "ಹಾಗೆಲ್ಲಾ ಕೊಡಕ್ಕಾಗಲ್ಲ, ಇದು ಸರ್ಕಾರಕ್ಕೆ ಸೇರಿದ್ದು, ನೀವು ಕಾನೂನು ಬಾಹಿರವಾಗಿ ಮನೆ ಮಾಡಿಕೊಂಡಿದ್ದೀರಾ" ಎಂದು ದಾರ್ಷ್ಟ್ಯದಿಂದ ನುಡಿಯುತ್ತಾನೆ.

ಆದರೆ ನೀವೇನಾದರೂ ಭರ್ಜರಿ ದುಡ್ಡಿನ ಕುಳವೇ ಆಗಿದ್ದರೆ ಇಲ್ಲಿ ಕಾನೂನನ್ನೇ ನಿಮ್ಮ ಪರವಾಗಿ ಮಾಡಿ ಕೊಡುವುದರಲ್ಲಿ ಶಿವಮೊಗ್ಗದ ಅಧಿಕಾರಿಗಳು ಸಿದ್ಧಹಸ್ತರು ಎಂಬುದಕ್ಕೆ ಲೇಟೆಸ್ಟ್ ನಿದರ್ಶನವೆಂದರೆ ಅದು ಶಿವಮೊಗ್ಗದ ಗೋಪಾಳದ ಸಾರ್ವಜನಿಕ ಉದ್ಯಾನವನದ ಜಾಗವನ್ನು ಖಾಸಗಿ ವ್ಯಕ್ತಿಯೊಬ್ಬರಿಗೆ ಕೊಡಮಾಡಲು ನಗರಸಭೆ, ಸೂಡಾ ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಮಾಡಿರುವ ಕಸರತ್ತು,



ಮಹಿಪಾಲ್ ಬಂಗಲೆ...



ಕೆ.ರಂಗನಾಥ್

ಗೋಪಾಳದ ಸರ್ವೆ ನಂ. 66/1,2 ರಲ್ಲಿ ಎರಡು ಎಕರೆ 32 ಗುಂಟೆ ವಿಸ್ತೀರ್ಣ ಸಾರ್ವಜನಿಕ ಉದ್ಯಾನವನವನ್ನು ಬಹಳ ವರ್ಷಗಳ ಹಿಂದೆಯೇ ಕೆ.ಎಸ್. ಮಹಿಪಾಲ್ ಎಂಬ ವ್ಯಕ್ತಿ ಅತಿಕ್ರಮವಾಗಿ ಆಕ್ರಮಿಸಿಕೊಂಡು ಮನೆ ಕಟ್ಟಿಸಿಕೊಂಡಿದ್ದಾರೆ. ಹೀಗೆ ಮನೆ ಕಟ್ಟಿಸಿಕೊಳ್ಳುವಾಗ ಈ ಮನುಷ್ಯನಿಗೆ ತಾನು ಉದ್ಯಾನವನದ ಜಾಗವನ್ನು ಅತಿಕ್ರಮಿಸಿಕೊಳ್ಳುತ್ತೇನೆಂದು ಸ್ಪಷ್ಟವಾಗಿ ತಿಳಿದಿತ್ತು, ಹಾಗೆಯೇ ನಗರಸಭೆ ಕಮೀಷನರ್ ಜಯಪ್ಪ ಮತ್ತು ಸೂಡಾ ಕಮೀಷನರ್ ಸದಾಶಿವಪ್ಪರಿಗೂ ತಿಳಿದಿತ್ತು. ಆದರೆ ಅದೇನು ದುಡ್ಡಿನ ಮಹಿಮೆಯೋ ಹಾಗೆ ಉದ್ಯಾನವನದ ಜಾಗದಲ್ಲಿ ಮನೆ ಕಟ್ಟಲು ಈ ಮಹಿಪಾಲ್‌ಗೆ ಸುಲಭವಾಗಿ ಪರವಾನಗಿಯೂ ಸಿಕ್ಕಿಬಿಟ್ಟಿತ್ತು. ಆದರೆ ಈತ ಅಕ್ರಮವಾಗಿ 4700 ಚ.ಅಡಿಯಷ್ಟು ಸಾರ್ವಜನಿಕ ಜಾಗವನ್ನು ಕಬಳಿಸಿಕೊಂಡಿರುವ ವಿಷಯ ಬಹಿರಂಗವಾಗತೊಡಗಿದಂತೆ ಜಾಗೃತರಾದ ಮಹಿಪಾಲ್ ಬಿನ್ ಶಂಕರಪ್ಪಗೌಡ ನಾಟಕ ಶುರು ಮಾಡಿದರು. ಸಾರ್ವಜನಿಕ ಪಾರ್ಕಿನ ಜಾಗವನ್ನು ತಾವು ಅತಿಕ್ರಮಿಸಿಕೊಂಡಿರುವುದು ತಮ್ಮ ಅಚಾತುರ್ಯದಿಂದ ಎಂದೂ, ಈಗ ಅದರ ಬದಲಿಗೆ ಬೇರೆ ಜಾಗವನ್ನು ನೀಡುತ್ತೇನೆ ಎಂದೂ ಹೇಳಿ ನಗರಸಭೆ ಹಾಗೂ ಸೂಡಾ ಅಧಿಕಾರಿಗಳನ್ನು ಬೇರೆ ವಿಧಾನದ ಮೂಲಕವೂ ಒಪ್ಪಿಸಿದರು. ಇದರಂತೆ 24-03-2001 ರಂದು ಒಪ್ಪಿಗೆ ಪತ್ರವನ್ನೂ ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಡೆದರು. ನಂತರ 9-7-2008 ರಂದು ನಗರಸಭೆಯೂ ಈ ಅದಲು-ಬದಲು ಕ್ರಮಕ್ಕೆ ಒಪ್ಪಿಗೆ ನೀಡಿತು. ಈ ವಿಚಾರದ ಕುರಿತು ಸಾರ್ವಜನಿಕ ಆಕ್ಷೇಪಣೆಗಳಿಗಾಗಿ ಶಿವಮೊಗ್ಗದ ಬಹುಪಾಲು ಜನರು ಕೇಳಿಯೆ ಇರದ ಹಾಗೂ ನೋಡಿಯೂ ಇರದ "ಈ ಪತ್ರಿಕೆ"ಯಲ್ಲಿ ಮಾತ್ರ 26-9-2009 ರಂದು ಪ್ರಕಟಣೆಯನ್ನು ಹೊರಡಿಸಲಾಗಿದೆ. ನಂತರ ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ಸಭೆಯಲ್ಲಿ ಈ ಕೋಟಿ ಕುಳ ಮಹಿಪಾಲ್‌ನ ಹಿತವನ್ನು ಪಕ್ಷಾತೀತವಾಗಿ ಕಾಪಾಡಲಾಗಿದೆ. 'ಮಾನವೀಯತೆ'ಯ ದೃಷ್ಟಿಯಿಂದ ಹೀಗೆ ಒಪ್ಪಿಗೆ ನೀಡಲಾಗಿದೆಯಂತೆ.

ಅಧಿಕಾರಿಗಳಿಗೆ ಮತ್ತು ರಾಜಕಾರಣಿಗಳಿಗೆ ಮಾನವೀಯತೆ ಎನ್ನುವುದು ಕೋಟ್ಯಾಧಿಪತಿ ಮತ್ತು ಪ್ರಭಾವಿ ಕುಳ ಮಹಿಪಾಲ್ ವಿಷಯದಲ್ಲಿ ಇರುತ್ತದೆಯಾದರೆ ಬಡವರ ವಿಷಯದಲ್ಲಿ ಏಕೆ ಇರುವುದಿಲ್ಲ ಎಂಬುದೇ ಸಾಮಾನ್ಯರ ಪ್ರಶ್ನೆ. ಶಿವಮೊಗ್ಗದಲ್ಲಿ ನಡೆಯುತ್ತಿರುವ ಈ ಬಗೆಯ ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆಯ ನೀತಿಯನ್ನು ಪ್ರತಿಭಟಿಸಿದ ಯುವ ಕಾಂಗ್ರೆಸ್ ಕಾರ್ಯದರ್ಶಿ ಹಾಗೂ ಆರ್ ಆಗ್ನಿ ಕೆ ಸಿಪಾಯ್‌ನ ಜಿಲ್ಲಾ ಅಧ್ಯಕ್ಷ ಕೆ. ರಂಗನಾಥ್ ಮತ್ತಿತರರ ಪ್ರಯತ್ನಗಳಿಗೆ ಸ್ವತಃ ಕಾಂಗ್ರೆಸ್ ಹಿರಿತಲೆಗಳೇ ಕಾಲೆಳೆಯುತ್ತಿರುವುದರಲ್ಲಿ ಹಾಗೂ ಶಿವಮೊಗ್ಗದ ಕೆಲವು ಮಾಧ್ಯಮದವರು ಈ ಕುರಿತು ಸುದ್ದಿಯನ್ನೇ ಮರೆಮಾಚಿದ್ದರಲ್ಲಿ ಮಹಿಪಾಲನ ಮಹಿಮೆ ಅಡಗಿದೆ ಎಂದು ಶುಬ ●

ಮೊಬೈಲ್ ಪ್ರೈಸ್ ವಾರ್ ಉಳಿಯೋರ್‍ಯಾರು - ಮುಳುಗೋರ್‍ಯಾರು?

ಮೊಬೈಲ್ ಫೋನ್ ಸೇವೆ ಒದಗಿಸುತ್ತಿರುವ ಕಂಪನಿಗಳಲ್ಲೀಗ ಪ್ರೈಸ್ ವಾರ್ ಶುರುವಾಗಿದೆ. ಈ ಕ್ಷೇತ್ರದಲ್ಲಿ ಈಗಾಗಲೇ ಬೇರು ಬಿಟ್ಟಿರುವ ಏರ್‌ಟೆಲ್, ವೊಡಾಫೋನ್, ಬಿಎಸ್‌ಎನ್‌ಎಲ್, ರಿಲಾಯನ್ಸ್, ಟಾಟಾ, ಐಡಿಯಾಗಳ ಜೊತೆಗೆ ಏರ್‌ಸೆಲ್, ಎಂಟಿಎಸ್, ಯೂನಿನಾರ್‌ಗಳಂಥ ಕಂಪನಿಗಳೂ ಪ್ರವೇಶ ಪಡೆಯುವುದರೊಂದಿಗೆ ಹಾಗೂ ಇಲ್ಲಿಯತನಕ ಕೇವಲ ಸಿಡಿಎಂಎ ಮೊಬೈಲ್ ಫೋನ್ ಸೇವೆ ಒದಗಿಸುತ್ತಿದ್ದ ರಿಲಾಯನ್ಸ್ ಮತ್ತು ಟಾಟಾಗಳು ಜಿಎಸ್‌ಎಂ ಸೇವೆಗೆ ಬರುವುದರೊಂದಿಗೆ ಈ ಬೆಲೆ ಯುದ್ಧ ಮತ್ತಷ್ಟು ತೀಕ್ಷ್ಣಗೊಂಡಿದೆ. ಪ್ರತೀ ನಿಮಿಷಕ್ಕೆ ಇದ್ದ ಪಲ್ಸ್ ದರವೀಗ ಪ್ರತೀ ಸೆಕೆಂಡಿಗೆ ವರ್ಗಾವಣೆಗೊಂಡಿದೆ. ಇದೇ ವರ್ಷದ ಮಾರ್ಚ್ ತಿಂಗಳಿನಲ್ಲಿ ರಿಲಾಯನ್ಸ್ ಕಮ್ಯೂನಿಕೇಶನ್ಸ್ ಜಿಎಸ್‌ಎಂ ಮಾರ್ಕೆಟ್‌ಗೆ ಬಂದಾಗಲೇ ನಿಮಿಷದ ಪಲ್ಸ್ ದರವನ್ನು ಸೆಕೆಂಡಿಗೆ ವರ್ಗಾಯಿಸಿ ಕೇವಲ ಮೂರೇ ತಿಂಗಳಲ್ಲಿ ಸುಮಾರು ಒಂದು ಕೋಟಿಗಿಂತ ಹೆಚ್ಚು ಗ್ರಾಹಕರನ್ನು ತನ್ನ ಬುಟ್ಟಿಗೆ ಹಾಕಿಕೊಂಡಿತ್ತು.

ತದನಂತರ ಟಾಟಾ ಕಂಪೆನಿ ಕೂಡ ಟಾಟಾ ಡೋಕೋಮೋ ಬ್ರ್ಯಾಂಡ್‌ನಡಿಯಲ್ಲಿ ಜಿಎಸ್‌ಎಂ ಸೇವೆಯನ್ನು ಪ್ರಾರಂಭಿಸಿ ಲೋಕಲ್, ನ್ಯಾಶನಲ್, ರೋಮಿಂಗ್ - ಎಲ್ಲಾ ಕಾಲ್‌ಗಳಿಗೂ ಪ್ರತೀ ಸೆಕೆಂಡಿಗೆ ಒಂದು ಪೈಸೆಯಂತೆ ನಿಗದಿ ಮಾಡಿ ಬೆಲೆ ಯುದ್ಧವನ್ನು ಇನ್ನಷ್ಟು ತೀಕ್ಷ್ಣಗೊಳಿಸಿಬಿಟ್ಟಿತು. ಈ ಮೂಲಕ ಪ್ರಸಕ್ತ ವರ್ಷದ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಸುಮಾರು ಒಂದು ಕೋಟಿ ಇಪ್ಪತ್ತು ಲಕ್ಷ ಗ್ರಾಹಕರನ್ನು ಸೆಳೆದುಕೊಂಡಿರುವುದಾಗಿ ಟಾಟಾ ಕಂಪೆನಿ ಹೇಳಿದೆ.

ಈ ಬೆಲೆ ಯುದ್ಧದಲ್ಲಿ ಹಿಂದೆ ಬಿದ್ದರೆ ತಮಗೆ ಉಳಿಗಾಲವಿಲ್ಲ ಎಂದು ಪರಿಭಾವಿಸಿದ ಏರ್‌ಟೆಲ್, ಬಿಎಸ್‌ಎನ್‌ಎಲ್, ವೊಡಾಫೋನ್‌ಗಳಂಥ ಇನ್ನಿತರ ಕಂಪೆನಿಗಳೂ ಸಹ ನಿಮಿಷದ ಪಲ್ಸ್ ದರವನ್ನು ಸೆಕೆಂಡಿಗೆ ಇಳಿಸಿವೆ. ಅಲ್ಲದೇ ಈಗಿರುವ ದರಗಳನ್ನೂ ಶೇ.೬೦ರಷ್ಟು ಕಡಿತಗೊಳಿಸಿವೆ.

ಹೊಸ ಕಂಪೆನಿಗಳು ಮೊಬೈಲ್ ಸೇವಾ ಕ್ಷೇತ್ರವನ್ನು ಪ್ರವೇಶಿಸಿರುವುದು, ಅತ್ಯಂತ ಕಡಿಮೆ ಬೆಲೆಯನ್ನು ನಿಗದಿ ಮಾಡಿರುವುದು ನಿಜಕ್ಕೂ ಹಳೆಯ ಕಂಪೆನಿಗಳಲ್ಲಿ ಆತಂಕ ಹುಟ್ಟಿಸಿದೆ. ಉದಾಹರಣೆಗೆ ಹೇಳಬೇಕೆಂದರೆ ಈ ಕ್ಷೇತ್ರದಲ್ಲಿ ದೇಶದಲ್ಲೇ ಅಗ್ರಸ್ಥಾನ ಪಡೆದಿದ್ದ ಏರ್‌ಟೆಲ್ ಅಸ್ತಿತ್ವದಲ್ಲಿದ್ದ ತನ್ನ ಗ್ರಾಹಕರನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆಯಾದರೂ ಹೊಸ ಗ್ರಾಹಕರನ್ನು ಗಣನೀಯ ಪ್ರಮಾಣದಲ್ಲಿ ಸೆಳೆದುಕೊಳ್ಳಲು ಸಾಧ್ಯವಾಗಿಲ್ಲ. ಕಳೆದ ಮೂರು ತಿಂಗಳಲ್ಲಿ ಅದು ಹೊಸದಾಗಿ ಪಡೆದುಕೊಂಡಿರುವ ಗ್ರಾಹಕರ ಸಂಖ್ಯೆ ಕೇವಲ 25 ಲಕ್ಷ. ಅದೇ ವೇಳೆಯಲ್ಲಿ ಟಾಟಾ ಡೋಕೋಮೋ ಬ್ರ್ಯಾಂಡಿನಡಿಯಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ಸೆಳೆದುಕೊಂಡಿರುವ ಗ್ರಾಹಕರ ಸಂಖ್ಯೆ 40 ಲಕ್ಷ. ಅಲ್ಲದೇ ಅಕ್ಟೋಬರ್‌ನಲ್ಲಿ ಮತ್ತೆ ಮೂವತ್ತೈದು ಲಕ್ಷ ಗ್ರಾಹಕರು ಅದಕ್ಕೆ ಸೇರಿಕೊಂಡಿದ್ದಾರೆ.

ಈ ಬೆಲೆ ಯುದ್ಧಕ್ಕೆ ಹಲವು ಕಾರಣಗಳಿವೆ. ಈಗಾಗಲೇ ವಿವರಿಸಿರುವಂತೆ ಎಂಟಿಎಸ್, ಯೂನಿನಾರ್, ಐಡಿಯಾ, ಏರ್‌ಸೆಲ್‌ಗಳಂಥ ಹೊಸ ಕಂಪೆನಿಗಳು ಮಾರುಕಟ್ಟೆ ಪ್ರವೇಶಿಸಿರುವುದರಿಂದ ಈಗಾಗಲೇ ಅಸ್ತಿತ್ವದಲ್ಲಿರುವ ಏರ್‌ಟೆಲ್, ವೊಡಾಫೋನ್, ಬಿಎಸ್‌ಎನ್‌ಎಲ್‌ಗಳಂಥ ಕಂಪೆನಿಗಳ ಮೊಬೈಲ್ ಸೇವೆ ಉಪಯೋಗಿಸುತ್ತಿರುವ ಗ್ರಾಹಕರನ್ನು ತಮ್ಮೆಡೆ ಸೆಳೆದುಕೊಳ್ಳುವುದಕ್ಕೆ ಅತ್ಯಂತ ಕಡಿಮೆ ಬೆಲೆಯನ್ನು, ಆಕರ್ಷಕ ಯೋಜನೆಗಳನ್ನು ಘೋಷಿಸಿವೆ.

ಎರಡನೆಯದಾಗಿ, ಮೊಬೈಲ್ ಸೇವೆ ಒದಗಿಸುವ ಕಂಪೆನಿಯನ್ನು ಬದಲಾಯಿಸಿದರೂ ನಂಬರ್ ಮಾತ್ರ ಅದೇ ಇರುವಂತೆ ನೋಡಿಕೊಳ್ಳುವ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ. ಅಂದರೆ, ಏರ್‌ಟೆಲ್ ಬಳಸುತ್ತಿರುವ ಗ್ರಾಹಕನೊಬ್ಬ ವೊಡಾಫೋನ್‌ಗೆ ಬದಲಾಯಿಸಿಕೊಂಡರೂ ಆತನ ನಂಬರ್ ಬದಲಾಗುವುದಿಲ್ಲ. ಇದಕ್ಕೆ ಕೇವಲ 19 ರೂಪಾಯಿ ಶುಲ್ಕವನ್ನು ಪಾವತಿಸಬೇಕಾಗುತ್ತದೆಯಷ್ಟೆ. ಈ ವ್ಯವಸ್ಥೆಯನ್ನು ದೆಹಲಿ, ಮುಂಬೈ, ಕೊಲ್ಕತ್ತಾ, ಚೆನ್ನೈಗಳಂಥ ಮಹಾನಗರಗಳಲ್ಲಿ ಹಾಗೂ ಮಹಾರಾಷ್ಟ್ರ, ಕರ್ನಾಟಕ ಮತ್ತು ಮಧ್ಯಪ್ರದೇಶಗಳಂಥ 'ಎ' ಗುಂಪಿನ ಸರ್ಕಲ್‌ಗಳಲ್ಲಿ 2009ರ ವರ್ಷ ಮುಗಿಯುವುದರೊಳಗಾಗಿ ಹಾಗೂ ದೇಶದ ಇನ್ನಿತರ ಪ್ರದೇಶಗಳಲ್ಲಿ 2010ರ ಮಾರ್ಚ್ ವೇಳೆಗೆ ಜಾರಿಗೆ ತರುವುದಕ್ಕಾಗಿ ಉದ್ದೇಶಿಸಲಾಗಿದೆ. ಇಂತಹದ್ದೊಂದು ಅವಕಾಶವಿದ್ದರೆ ಮೊಬೈಲ್ ಬಳಕೆದಾರರು ಕಡಿಮೆ ದುಡ್ಡಿಗೆ ಹೆಚ್ಚು ಮಾತನಾಡುವ ಅವಕಾಶವಿರುವ ಕಂಪೆನಿಗಳಿಗೆ ಹಿಂದು ಮುಂದು ನೋಡದೇ ಬದಲಾಯಿಸಿ ಕೊಳ್ಳುತ್ತಾರೆ. ಹಾಗಾಗಿ, ಎಲ್ಲಾ ಕಂಪೆನಿಗಳು ತಮ್ಮಲ್ಲಿರುವ ಗ್ರಾಹಕರನ್ನು ಹಿಡಿದಿಟ್ಟುಕೊಳ್ಳುವ ಉದ್ದೇಶದಿಂದ ಅತ್ಯಂತ ಕಡಿಮೆ ಬೆಲೆಯನ್ನು ಘೋಷಿಸತೊಡಗಿವೆ.

ಮೂರನೆಯದಾಗಿ, ಮೊಬೈಲ್ ಸೇವಾ ಕ್ಷೇತ್ರದ ಪರಿಣಿತರ ಪ್ರಕಾರ ತರಂಗಾಂತರಗಳನ್ನು ಪಡೆಯುವುದಕ್ಕೆ ಸರ್ಕಾರ ನಿಗದಿ ಮಾಡಿರುವ ನಿಯಮಗಳೂ ಕಾರಣವಾಗಿವೆ. ಪ್ರಸ್ತುತವಾಗಿ ಮೊಬೈಲ್ ಸೇವೆ ಒದಗಿಸುವುದಕ್ಕೆ ಅನುಮತಿ ಪಡೆದಿರುವ ಕಂಪೆನಿಗಳಿಗೆ ಪ್ರಾರಂಭದಲ್ಲಿ 4.4 ಮೆಗಾಹರ್ಟ್ಜ್ ತರಂಗಾಂತರಗಳನ್ನು ಕೊಡಲಾಗುತ್ತದೆ. ಇದಕ್ಕಿಂತ ಹೆಚ್ಚು ತರಂಗಾಂತರಗಳನ್ನು ಪಡೆಯಬೇಕೆಂದರೆ ವಿಭಿನ್ನ ಸರ್ಕಲ್‌ಗಳಿಗೆ ವಿಭಿನ್ನ ಪೂರ್ವಶರತ್ತುಗಳನ್ನು ವಿಧಿಸಲಾಗಿದೆ. ಉದಾಹರಣೆಗೆ, 'ಎ' ಮತ್ತು 'ಬಿ' ಸರ್ಕಲ್‌ಗಳಲ್ಲಿ 8 ಲಕ್ಷ ಹೆಚ್ಚುವರಿ ಗ್ರಾಹಕರಿದ್ದರೆ ಮಾತ್ರ ಹೆಚ್ಚುವರಿ ತರಂಗಾಂತರಗಳನ್ನು ನೀಡುತ್ತದೆ. ಅಂದರೆ, ಹೆಚ್ಚುವರಿ ತರಂಗಾಂತರಗಳನ್ನು ಪಡೆದುಕೊಳ್ಳುವುದಕ್ಕಾಗಿ ಹೆಚ್ಚುವರಿ ಗ್ರಾಹಕರು ಅತ್ಯವಶ್ಯ. ಹೀಗಾಗಿ ಎಲ್ಲಾ ಮೊಬೈಲ್ ಕಂಪೆನಿಗಳು ಅತ್ಯಂತ ಕಡಿಮೆ ಬೆಲೆಗೆ ಹೆಚ್ಚು ಮಾತನಾಡುವ ಹೊಸ ಹೊಸ ಯೋಜನೆಗಳನ್ನು ಒದಗಿಸಿ ಗ್ರಾಹಕರನ್ನು ಸೆಳೆಯುವ ಯತ್ನ ನಡೆಸಿವೆ.

ಏನೇ ಆಗಲಿ, ಈ ಬೆಲೆ ಯುದ್ಧ ಮೊಬೈಲ್ ಬಳಕೆದಾರರಿಗೆ ಬಹಳಷ್ಟು ಅನುಕೂಲವನ್ನೇ ಮಾಡಿಕೊಟ್ಟಿದೆ. ಹೊಸ ಹೊಸ ಕಂಪನಿಗಳು ಈ ಕ್ಷೇತ್ರವನ್ನು ಪ್ರವೇಶಿಸುವುದರೊಂದಿಗೆ ದೇಶದಲ್ಲಿ ಮೊಬೈಲ್ ಸೇವೆಯನ್ನು ಒದಗಿಸುವ ಕಂಪೆನಿಗಳ ಸಂಖ್ಯೆ ಹನ್ನೊಂದನ್ನು ದಾಟಿದೆ! ಬೇರೆ ಬಹುತೇಕ ದೇಶಗಳಲ್ಲಿ ಈ ಸಂಖ್ಯೆ 5-6ರಷ್ಟಿದೆ. ಭವಿಷ್ಯದಲ್ಲಿ ಇನ್ನಷ್ಟು ಕಂಪೆನಿಗಳು ಭಾರತದ ಸೆಲ್ಯೂಲಾರ್ ಮಾರುಕಟ್ಟೆಯನ್ನು ಪ್ರವೇಶಿಸುವುದನ್ನು ನಿರಾಕರಿಸಲಾಗುವುದಿಲ್ಲ. ಅಂದರೆ ಮೊಬೈಲ್ ದರ ಸಮರ ಇನ್ನಷ್ಟು ತೀಕ್ಷ್ಣಗೊಳ್ಳುವ ಸಂಭವವೇ ಹೆಚ್ಚಾಗಿದೆ. ಹಾಗೇನಾದರೂ ಆದರೆ ಕಡಿಮೆ ಬೆಲೆಗೆ ಅತ್ಯುತ್ತಮ ಸೇವೆ ಒದಗಿಸುವ ಕಂಪೆನಿಗಳು ಮಾತ್ರವೇ ಉಳಿದುಕೊಂಡು ಮಿಕ್ಕವು ಮುಳುಗುತ್ತವೆಯಷ್ಟೆ. ಇಲ್ಲವೇ ಬೃಹತ್ ಕಂಪೆನಿಗಳೊಂದಿಗೆ ವಿಲೀನಗೊಂಡು ಬದುಕುತ್ತವೆ. ಏನೇ ಆದರೂ ಅದು ಗ್ರಾಹಕನಿಗೆ ಒಳ್ಳೆಯದೆ.

ಆದರೆ ಈ ಸಂತೋಷ ಬಹಳ ದಿನ ಉಳಿಯಲಾರದು. ಬೆಲೆ ಸಮರದ ಬಿರುಗಾಳಿಯಲ್ಲಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಚಿಕ್ಕಪುಟ್ಟ ಕಂಪೆನಿಗಳು ದೊಡ್ಡ ಕಂಪೆನಿಗಳೊಂದಿಗೆ ವಿಲೀನಗೊಳ್ಳುವುದು, ಸ್ಪರ್ಧೆಯನ್ನು ಎದುರಿಸಲಾಗದೇ ಚಿಕ್ಕಪುಟ್ಟ ಕಂಪೆನಿಗಳು ಮುಳುಗುವುದು ನಡೆಯುತ್ತಿದ್ದಂತೆ ಈ ಕ್ಷೇತ್ರದಲ್ಲಿ ಕೆಲವೇ ಬೃಹತ್ ಕಂಪೆನಿಗಳು ಉಳಿದು ಏಕಸ್ವಾಮ್ಯ ಸಾಧಿಸುತ್ತಿವೆ. ಆಗ ಪ್ರತಿಸ್ಪರ್ಧಿಗಳೇ ಇಲ್ಲದಂತಾಗಿ ಅವರು ಆಡಿದ್ದೇ ಆಟವಾಗುತ್ತದೆ. ಆಗ ಮತ್ತೆ ಮೊಬೈಲ್ ಕಾಲ್ ದರಗಳನ್ನು ಹೆಚ್ಚಿಸಿ ಗ್ರಾಹಕರನ್ನು ಸುಲಿಯಲಾರಂಭಿಸುತ್ತದೆ. ●

ದೇವರನ್ನೇ ಅವಮಾನಿಸುವ ಆಸ್ತಿಕರು!

ಒಂದು ಪತ್ರ

ಹಿಂದೆಲ್ಲಾ ಗಣಿಕಳ್ಳ ರೆಡ್ಡಿಗಳನ್ನು 'ಗಣಿ ದಣಿಗಳು', 'ಗಣಿ ಉದ್ಯಮಿಗಳು' ಎಂದೆಲ್ಲಾ ಪತ್ರಿಕೆಗಳು ಗೌರವಯುತವಾಗಿ ಕರೆಯುತ್ತಿದ್ದವು. ಆದರೆ ನಮ್ಮ 'ಲಂಕೇಶ್' ಮಾತ್ರ ಎರಡು ವರ್ಷಗಳ ಹಿಂದಯೇ ಮೊಟ್ಟಮೊದಲ ಬಾರಿಗೆ ರೆಡ್ಡಿ-ರಾಮುಲುಗಳನ್ನು 'ಗಣಿ ಮಾಫಿಯಾ', 'ಗಣಿ ಕಳ್ಳರು'' ಎಂದು ಸರಿಯಾಗಿ ಕರೆದಿತ್ತು, ಈಗ ಎಲ್ಲಾ ಪತ್ರಿಕೆಗಳು 'ಲಂಕೇಶ್'ಅನ್ನು ಅನುಕರಿಸಿ 'ಗಣಿ ಕಳ್ಳರು', 'ಗಣಿ ಮಾಫಿಯಾ' ಎಂದೇ ಸಂಬೋಧಿಸುತ್ತಿವೆ.

ತಾವು ಹೇಳಿರುವಂತೆ ಗಣಿ ಮಾಫಿಯಾದ ಮುಂದೆ ಕನ್ನಡದ ಕಟ್ಟಾಳುಗಳು ನಿಷ್ಕ್ರಿಯರಾಗಿರುವುದು ನಿಜ (ಲಂಕೇಶ್, ಡಿ.23). ಹಣ ಬಲದ ಎದುರು ನಿಷ್ಕ್ರಿಯರಾಗುವುದು ಸೋಕಾಲ್ಡ್ ಕನ್ನಡ ಹಿತರಕ್ಷಕರ ಹಳೆ ಚಾಯಮಾನ. ಕೇವಲ ಕನ್ನಡ ಚಲನಚಿತ್ರ ಪ್ರದರ್ಶನದ ಬಗ್ಗೆ ಹೋರಾಡುವುದು ಮಾತ್ರ ಕನ್ನಡದ ಕೆಲಸ, ಚಿತ್ರರಂಗ ಹೊರತುಪಡಿಸಿ ಇತರರಂಗಗಳಿಗೂ ತಮಗೂ ಸಂಬಂಧವಿಲ್ಲ ಎಂದು ಕನ್ನಡದ ಹೋರಾಟಗಾರರು ಭಾವಿಸಿದಂತಿದೆ.

ಮೊನ್ನೆ ಆಂಧ್ರ ಸರ್ಕಾರವು ಓಎಂಸಿ ಗಣಿಗೆ ಬೀಗ ಜಡಿದಾಗ ರೆಡ್ಡಿಗಳು ತಿರುಪತಿಗೆ ಓಡಿದರು. ಬಹುಶಃ ಕೆಲ ತಿಂಗಳ ಹಿಂದೆ ತಾವು 45 ಕೋಟಿ ರೂಪಾಯಿಯ ವಜ್ರದ ಕಿರೀಟದ ಲಂಚ ಕೊಟ್ಟಿದನ್ನು ವೆಂಕಟರಮಣನಿಗೆ ಜ್ಞಾಪಿಸಿ ಆತನಿಂದ ದೈವಿಕ ನೆರವು ಕೇಳಲು ಇರಬೇಕು. ಈಗ ಹೈಕೋರ್ಟ್ ಗಣಿ ಬೀಗದ ವಿರುದ್ಧ ಸ್ಟೇ ಕೊಟ್ಟ ಕೂಡಲೇ ಗಣಿ ಕಳ್ಳರು ಭೂಮಿ ಪೂಜೆ ಮಾಡಿದರಂತೆ. ಬಹುಶಃ ಈ ಪೂಜೆಯ ಉದ್ದೇಶ "ಭೂಮಿ ತಾಯಿಯೇ, ನಾವು ನಿನ್ನ ಗರ್ಭ ಬಗೆದು ನಿನ್ನನ್ನು ಬಂಜೆ ಮಾಡಿ ದ್ರೋಹ ಎಸಗುತ್ತಿದ್ದೇವೆ. ಆದರೂ ನೀನು ಸಹಿಸಿಕೊಳ್ಳಬೇಕು'' ಎಂದು ಹೇಳಲು ಇರಬೇಕು.

ಕುರಿ-ಕೋಣಗಳನ್ನು ದೇವರಿಗೆ ಬಲಿ ಕೊಡುವ ಮುಂಚೆ ಅವುಗಳಿಗೆ ಹೇಗೆ ಪೂಜೆ ಮಾಡಲಾಗುತ್ತದೆಯೋ, ಅದರಂತೆ ಪ್ರಕೃತಿ ಮಾತೆಯ ಬಲಿಗೆ ಮುಂಚೆ ಪ್ರಕೃತಿಗೆ ಪೂಜೆ ಗಣಿಕಳ್ಳರಿಂದ. ಒಟ್ಟಾರೆ ಎಲ್ಲೆಡೆ ದೇವರನ್ನು ಮೂರ್ಖ ಎಂದು ಭಾವಿಸುವ ಆಸ್ತಿಕರೇ ಹೆಚ್ಚು.

ನನ್ನ ಒಬ್ಬ ವಿಚಾರವಾದಿ ಮಿತ್ರ ಸಾಬೀತುಪಡಿಸಿದಂತೆ ಶೇ.98 ಹಿಂದೂಗಳು ಮೂಲದಲ್ಲಿ ನಾಸ್ತಿಕರೇ. ಏಕೆಂದರೆ ನಿಜವಾದ ನಾಸ್ತಿಕರು ಕೇವಲ ದೇವರ ಅಸ್ತಿತ್ವವನ್ನು ಒಪ್ಪುವುದಿಲ್ಲ ಅಷ್ಟೇ. ಆದರೆ ದೇವರನ್ನೆಂದೂ ಅವರು ಅಡಿಗಡಿಗೆ ಅವಮಾನಿಸುವುದಿಲ್ಲ. ಆದರೆ ಆಸ್ತಿಕರು ದೇವರಿಗೆ ವಿಚಿತ್ರ ಹೆಸರು, ಭೀಭತ್ಸ ರೂಪ ಕೊಟ್ಟು ಅವಮಾನಿಸುತ್ತಾರೆ. ದೇವರ ಅವಗುಣಗಳನ್ನೇ ಎತ್ತಿ ಎತ್ತಿ ತೋರಿಸುವುದಕ್ಕೆ ದೇವರ ಮಂತ್ರ-ಸ್ತುತಿ ಎನ್ನುತ್ತಾರೆ.

ದೇವರೂ ಲಂಚಕೋರ, ಲಂಪಟ, ಒಣಪ್ರತಿಷ್ಠೆಯುಳ್ಳವ, ಮಹಾ ಸ್ವಾರ್ಥಿ, ಕಾಮುಕ, ಮುಂದಾಲೋಚನೆ ಇಲ್ಲದ ಮೂರ್ಖ, ತಿಂಡಿತೀರ್ಥ-ಚಿನ್ನಾಭರಣಗಳಿಗೆ ಆಸೆಪಡುವ ಆಸೆಬುರುಕ, ಪೂಜೆ ಮಾಡದವರಿಗೆ ಕಷ್ಟ ಕೊಡುವ ಸ್ಯಾಡಿಸ್ಟ್, ಗಂಡಸರ ಪಕ್ಷಪಾತಿ-ಹೆಂಗಸರ ದ್ವೇಷಿ, ಜಾತಿಶೋಷಕ, ಕೆಟ್ಟ ಗಳಿಗೆ - ಕೆಟ್ಟ ಸಂಖ್ಯೆ - ಕೆಟ್ಟ ಗ್ರಹಗಳಿಗೆ ಹೆದರುವ ಅಶಕ್ತ, ನಡೆಯಲಾಗದೇ ಸಿಕ್ಕಸಿಕ್ಕ ಸಣ್ಣ ಪ್ರಾಣಿ-ಪಕ್ಷಿಗಳ ಮೇಲೆ ಇಲಿ-ಕಾಗೆಗಳ ಮೇಲೆ ಸವಾರಿ ಮಾಡುವ ಸೋಮಾರಿ.. ಹೀಗೆ ಎಲ್ಲಾ ತರಹದ ಅವಗುಣಗಳನ್ನು ತುಂಬಿ ಅದಕ್ಕೆ ಪೂರಕ ಕಾಲ್ಪನಿಕ ಕಥೆಕಟ್ಟಿ ದೇವರನ್ನು ಅಡಿಗಡಿಗೆ ಅವಮಾನಿಸುವ ಆಸ್ತಿಕರು ದೇವರ ದೃಷ್ಟಿಯಲ್ಲಿ ನಿರುಪದ್ರವಿ ನಾಸ್ತಿಕರಿಗಿಂತ ಹೆಚ್ಚು ಅಪಾಯಕಾರಿ ತಾನೆ!

ದೇವರನ್ನು ನಿಜವಾಗಿ ನಂಬುವವ ದೇವರಲ್ಲಿ ಯಾವ ಅವಗುಣ-ಅಶಕ್ತತೆಗಳನ್ನೂ ಕಾಣಲಾರ. ಹಾಗೆಯೇ ದೇವರೇ ಸೃಷ್ಟಿಸಿದ ದಿನ, ಗಳಿಗೆ, ಗ್ರಹ, ವಸ್ತು, ಸಂಖ್ಯೆಗಳು ಅಶುಭವಾಗಿರಲು ಸಾಧ್ಯವೇ ಇಲ್ಲ, ದೇವರಿಗೆ ಯಾವುದೇ ಭೀಭತ್ಸ ರೂಪಗಳಿಲ್ಲ ಎಂದು ನಂಬುವವನೇ ನಿಜವಾದ ಆಸ್ತಿಕ. ಉಳಿದವರೆಲ್ಲಾ ಆಸ್ತಿಕ ವೇಷದ ನಾಸ್ತಿಕರು ಎನ್ನುತ್ತಾರೆ ನನ್ನ ವಿಚಾರವಾದಿ ಮಿತ್ರರು.

ಅಡಿಗಡಿಗೆ ಪೂಜೆ ಮಾಡಿ ತಮ್ಮ ಅಕ್ರಮ ದಂಧೆ ಮುಂದುವರಿಸುತ್ತಿರುವ ಗಣಿಕಳ್ಳ ರೆಡ್ಡಿಗಳು ಇಂತಹದ್ದೇ ಡೇಂಜರಸ್ ಆಸ್ತಿಕರು. ದೇವರು ಎದುರಿಗೆ ಬಂದರೆ ದೇವರನ್ನೇ ಯಾಮಾರಿಸಲು ಹೇಸದವರು.

-ಪಿ.ಎಸ್.ಶೆಟ್ಟಿ, ಮಂಗಳೂರು

sms ಜೋಕ್ಸ್

'ಮುಂಗಾರು ಮಳೆ' ನೋಡಿದವರು ಲವ್ ಮಾಡಿದರು

'[illegible]' ನೋಡಿದವರು ಲವ್ ಮಾಡಿ [illegible] ಆದ್ರು

'ಚೆಲುವಿನ ಚಿತ್ತಾರ' ನೋಡಿದವರು ಲವ್ ಮಾಡಿ ಮೆಂಟಲ್ ಆದ್ರು

'ಮನಸಾರೆ' ನೋಡಿದ ಮೆಂಟಲ್‌ಗಳು ಲವ್ ಮಾಡಿದರು

'ದುನಿಯಾ' ನೋಡಿದ ಲವರ್‌ಗಳು ಸತ್ತು ಹೋದರು

ಲವ್ ಮಾಡದೇ ಪಾಪಿ ಆಗಿರಬೇಕೆಂದವರು [illegible] 'ಫ್ರೆಂಡ್ ಶಿಪ್' ಮಾಡಿ!

******

ಬದುಕಿನ ಮೂರು ವಿಚಿತ್ರ ಸ್ತರಗಳು

ಯೌವನ: ಎಲ್ಲದಕ್ಕೂ ಸಮಯ ಮತ್ತು ಉತ್ಸಾಹವಿದೆ ಆದರೆ ಹಣವಿಲ್ಲ!

ದುಡಿಯುವ ವಯಸ್ಸು: ಎಲ್ಲದಕ್ಕೂ ಹಣ ಮತ್ತು ಉತ್ಸಾಹವಿದೆ ಆದರೆ ಸಮಯವಿಲ್ಲ!

ವೃದ್ಧಾಪ್ಯ: ಎಲ್ಲದಕ್ಕೂ [illegible] ಮತ್ತು [illegible] ಆದರೆ ಉತ್ಸಾಹವಿಲ್ಲ!

*****

[illegible]

ಹತ್ತು ವರ್ಷಗಳ ನಂತರ: [illegible]


ಇಪ್ಪತ್ತು ವರ್ಷಗಳ ನಂತರ: [illegible]

ಮೂವತ್ತು ವರ್ಷಗಳ ನಂತರ: ಸಂಪೂರ್ಣ ಮುದುಕ!

'ಲೋಕಾಯತ'

ಅವೈದಿಕ ದರ್ಶನಕ್ಕೆ ಐವತ್ತು ವರ್ಷ!

ಹಾಗೆ ನೋಡಿದರೆ ಒಂದು ಪುಸ್ತಕ ಪ್ರಕಟಣೆಯಾಗಿ ಐವತ್ತು ವರ್ಷಗಳಾಗುವುದರಲ್ಲಿ ಹೊಸದೇನಿಲ್ಲ. ಎಲ್ಲಾ ಪುಸ್ತಕಗಳಿಗೂ 'ವಯಸ್ಸಾ'ಗುತ್ತದೆ. ಆದ್ದರಿಂದಲೇ ಸಮಕಾಲೀನ ಸಂದರ್ಭಕ್ಕೆ ಅಪ್ರಸ್ತುತವಾಗುತ್ತದೆ. ಆದರೆ ಕೆಲವು ಕೃತಿಗಳು ಸದ್ಯಕ್ಕೂ ಶಾಶ್ವತಕ್ಕೂ ಸಲ್ಲುವ ಅಂತಃಸತ್ವವನ್ನು ಪಡೆದಿರುತ್ತವೆ. ಅಂಥ ಅಪರೂಪದ ಕೃತಿಗಳಲ್ಲಿ 'ಲೋಕಾಯತ'ವೂ ಒಂದು. ಅದಕ್ಕೆ ಐವತ್ತು ವರ್ಷಗಳಾಗಿದ್ದರೂ ಆ ಕೃತಿಯಲ್ಲಿರುವ ದರ್ಶನದ ಸಮಕಾಲೀನತೆಯೇ ಈ ಸಂದರ್ಭದಲ್ಲಿ ಅದರ ನೆನಪನ್ನೂ ಮತ್ತು ಮರು ಓದನ್ನೂ ಜರೂರು ಮಾಡುತ್ತದೆ.



ಭಾರತದ ತತ್ವಶಾಸ್ತ್ರ ಪರಂಪರೆಯಲ್ಲಿ ಅಲೌಕಿಕ ...ನೆಗಳೇ ಪ್ರಧಾನವಾದದ್ದು ಎಂಬ ತಿಳಿವಳಿಕೆ ...ವಾದದ್ದು. ಐಹಿಕಕ್ಕಿಂತ ಪಾರಮಾರ್ಥಿಕಕ್ಕೆ ಭಾರತದ ತತ್ವಶಾಸ್ತ್ರ ಒತ್ತುಕೊಡುತ್ತದೆ ಎಂಬುದು ಭಾರತದ ಹೆಮ್ಮೆ ಎಂಬಂತೆ ಹಲವು ತತ್ವಶಾಸ್ತ್ರಜ್ಞರು ಸಂಭ್ರಮಿಸುವುದೂ ಉಂಟು. ಆದರೆ ಒಂದು ಸಮಾಜದಲ್ಲಿ ಕೂತುಣ್ಣುವ ...ರುವುದಾದರೆ ದುಡಿದು ಸವೆಯುವ ಜನರೂ ಇದ್ದೇ ಇರುತ್ತಾರೆ. ಅದೇ ರೀತಿ ಭಾರತೀಯ ಸಮಾಜದಲ್ಲೂ ...ರ್ಥ ಚಿಂತನೆಯ ತತ್ವಶಾಸ್ತ್ರದೊಂದಿಗೆ ಅದಕ್ಕೆ ವಿರುದ್ಧವಾದ ಐಹಿಕ ಬದುಕಿನ ಚಿಂತನೆಯನ್ನೂ ನಡೆಸಿದ ...ಗಳ ಮತ್ತು ಭೌತವಾದಿ ತತ್ವಶಾಸ್ತ್ರ ಪರಂಪರೆಯೂ ... ಎಂಬುದನ್ನು ಇಡೀ ಜಗತ್ತಿಗೆ ತೋರಿಸಿಕೊಟ್ಟದ್ದು ಭಾರತದ ಅಪ್ರತಿಮ ತತ್ವಶಾಸ್ತ್ರಜ್ಞ ದೇಬಿಪ್ರಸಾದ್ ಚಟ್ಟೋಪಾಧ್ಯಾಯರವರು. ಈ ನಿಟ್ಟಿನಲ್ಲಿ ಅವರು ಬರೆದ ...ಖ ಕೃತಿ 'ಲೋಕಾಯತ' ಪ್ರಕಟವಾಗಿ ಈಗ ಐವತ್ತು ...ವಾಗುತ್ತದೆ. ಕಳೆದ ಐವತ್ತು ವರ್ಷಗಳಲ್ಲಿ ಈ ಕೃತಿ ... ಮರು ಮುದ್ರಣಗಳನ್ನು ಕಂಡಿದೆ. ಚೀನಿ, ಜಪಾನೀ, ... ಮತ್ತು ಜರ್ಮನ್ ಭಾಷೆಗಳಿಗೆ ಅನುವಾದ ...ದೆ. ಕನ್ನಡದಲ್ಲಿ ಇದರ ಸಂಗ್ರಹಾನುವಾದವನ್ನು ... ಚಿಂತಕರಾದ ಡಾ. ಜಿ. ರಾಮಕೃಷ್ಣರವರು ...ದ್ದಾರೆ.

ಹಾಗೆ ನೋಡಿದರೆ ಒಂದು ಪುಸ್ತಕ ಪ್ರಕಟಣೆಯಾಗಿ ... ವರ್ಷಗಳಾಗುವುದರಲ್ಲಿ ಹೊಸದೇನಿಲ್ಲ, ಎಲ್ಲಾ ...ಗಳಿಗೂ 'ವಯಸ್ಸಾ'ಗುತ್ತದೆ. ಆದ್ದರಿಂದಲೇ ... ಸಂದರ್ಭಕ್ಕೆ ಅಪ್ರಸ್ತುತವಾಗುತ್ತದೆ. ಆದರೆ ... ಕೃತಿಗಳು ಸದ್ಯಕ್ಕೂ ಶಾಶ್ವತಕ್ಕೂ ಸಲ್ಲುವ ಅಂತಃಸತ್ವವನ್ನು ...ರುತ್ತವೆ. ಅಂಥ ಅಪರೂಪದ ಕೃತಿಗಳಲ್ಲಿ ...ಯತ'ವೂ ಒಂದು. ಅದಕ್ಕೆ ಐವತ್ತು ವರ್ಷಗಳಾಗಿ ... ಕೃತಿಯಲ್ಲಿರುವ ದರ್ಶನದ ಸಮಕಾಲೀನತೆಯೇ ... ಸಂದರ್ಭದಲ್ಲಿ ಅದರ ನೆನಪನ್ನೂ ಮತ್ತು ಮರು ... ಜರೂರು ಮಾಡುತ್ತದೆ.

ಇಂದಿನ ಸಮಕಾಲೀನ ಬದುಕಿನ ಸರಾಸರಿ ಜೀವನ ದರ್ಶನವೇ ಅತ್ಯಂತ ವೈರುಧ್ಯಗಳಿಂದ ಕೂಡಿದೆ. ಲೌಕಿಕ ಬದುಕಿನಲ್ಲಿ ಮಾತ್ರ ಆಧುನಿಕತೆ ಆದರೆ ಜೀವನ ದೃಷ್ಟಿಕೋನದಲ್ಲಿ ಮಾತ್ರ ಕುರುಡು ಸಂಪ್ರದಾಯನಿಷ್ಠತೆ ಮತ್ತು ಭಾವನಾವಾದಗಳೇ ಮುಂದುವರೆಯುತ್ತಿರುವ ಇಂದಿನ ವೈರುಧ್ಯಮಯ ಸಂದರ್ಭದಲ್ಲಿ 'ಲೋಕಾಯತ' ದರ್ಶನಕ್ಕೆ ಹೆಚ್ಚಿನ ಮಹತ್ವವಿದೆ. ಏಕೆಂದರೆ ದೇಬಿಪ್ರಸಾದರ 'ಲೋಕಾಯತ'ವು ಒಂದು ಸಮಾಜದಲ್ಲಿ ಈ ಬಗೆಯ ಬೌದ್ಧಿಕ ವೈರುಧ್ಯಗಳು ಹುಟ್ಟುವುದಕ್ಕೆ ಮತ್ತು ಮುಂದುವರೆಯುವುದಕ್ಕೆ ಕಾರಣವಾಗುವ ಸಾಮಾಜಿಕ ತಳಹದಿ ಏನೆಂಬುದನ್ನು ಅತ್ಯಂತ ವೈಜ್ಞಾನಿಕವಾಗಿ ನಿರೂಪಿಸುತ್ತದೆ ಹಾಗೂ ಇಂಥಾ ವೈರುಧ್ಯಗಳು ಬಗೆಹರಿಯುವ ಬಗ್ಗೆಯೂ ಕಾಣ್ಕೆಯನ್ನು ಒದಗಿಸುತ್ತದೆ.

ಐವತ್ತು ವರ್ಷದ ಕೆಳಗೆ ಈ ಕೃತಿ ಪ್ರಕಟವಾದಾಗ ವಿದ್ವತ್ ಲೋಕದಲ್ಲಿ ವಿದ್ಯುತ್ ಸಂಚಾರವೇ ಆಗಿತ್ತು. ಭಾರತದ ತತ್ವಶಾಸ್ತ್ರ ಪರಂಪರೆಯಲ್ಲಿ ಒಂದು ಪ್ರಬಲವಾದ ಭೌತವಾದಿ ಪರಂಪರೆಯಿತ್ತು ಮತ್ತು ಅದನ್ನು ಆದಿ ಶಂಕರ-ಮಾಧವರಂಥ ಭಾವನಾವಾದಿ-ಸಂಪ್ರದಾಯಸ್ಥ ತತ್ವಶಾಸ್ತ್ರಜ್ಞರು ಹತ್ತಿಕ್ಕಿದ್ದರೆಂಬ ಪ್ರತಿಪಾದನೆಯೇ ಸಂಪ್ರದಾಯನಿಷ್ಠರ ಲೋಕದಲ್ಲಿ ಅಪಾರ ವಿರೋಧವನ್ನು ಹುಟ್ಟುಹಾಕಿತ್ತು. ಆದ್ದರಿಂದಲೇ ಈ ಪುಸ್ತಕ ಪ್ರಕಟಣೆಯ ಪ್ರಾರಂಭಿಕ ವರ್ಷಗಳಲ್ಲಿ ದೇಬಿಪ್ರಸಾದರನ್ನು ಇತಿಹಾಸ ಮಂಡಳಿಯಂಥ ವಿದ್ವತ್ ಸಭೆಗಳಿಂದ ಬಹಿಷ್ಕಾರ ಹಾಕುವ ಪ್ರಯತ್ನಗಳು ನಡೆದಿತ್ತು. ಆದರೆ 'ಲೋಕಾಯತ'ವು ಈ ಎಲ್ಲಾ ದಾಳಿಗಳನ್ನು ಅರಗಿಸಿಕೊಂಡು ಈಗಲೂ ತತ್ವಶಾಸ್ತ್ರದ ಪ್ರಮುಖ ದೀಪಿಕೆಯಾಗಿರುವುದೇ ಆ ಕೃತಿಯ ಅಪಾರ ಅಂತಃಸತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಕೃತಿಯ ಉಪಶೀರ್ಷಿಕೆಯಲ್ಲಿ ಸ್ಪಷ್ಟಪಡಿಸುವಂತೆ 'ಲೋಕಾಯತ'ವು "ಪ್ರಾಚೀನ ಭಾರತದ ಭೌತವಾದದ ಬಗ್ಗೆ ಒಂದು ಅಧ್ಯಯನ. ತತ್ವಶಾಸ್ತ್ರದ ಜಗತ್ತಿನಲ್ಲಿ ಇರುವ ಕೆಲವು ಪ್ರಧಾನ ಸಮಸ್ಯೆಗಳಲ್ಲಿ ಅತಿ ಪ್ರಧಾನವಾದದ್ದು "ವಸ್ತು ಅರ್ಥಾತ್ ಭೌತಿಕ ಜಗತ್ತು" ಮೊದಲೋ ಅಥವಾ "ಜ್ಞಾನ"ವು ಮೊದಲೋ ಎಂಬುದು. ಭೌತಿಕ ಜಗತ್ತೇ ಎಲ್ಲಕ್ಕೂ ಮೂಲ ಎನ್ನುವವರನ್ನು ಭೌತವಾದಿಗಳೆಂದೂ, ಜಗತ್ತಿಗಿಂತ ಮುಂಚೆ ಜ್ಞಾನ-ಪರಮ ಜ್ಞಾನ-ಬ್ರಹ್ಮನ್ ಇತ್ತೆಂದು ಪ್ರತಿಪಾದಿಸುವವರನ್ನು ಭಾವನಾವಾದಿಗಳೆಂದೂ ತತ್ವಶಾಸ್ತ್ರ ವಲಯದಲ್ಲಿ ಕರೆಯಲಾಗುತ್ತದೆ. ಈ ಎರಡೂ ತತ್ವಶಾಸ್ತ್ರೀಯ ಶಿಬಿರಗಳ ನಡುವೆ ಪ್ರಾಚೀನ ಕಾಲದಿಂದ ಈವರೆಗೂ, ಭಾರತವನ್ನೂ ಒಳಗೊಂಡಂತೆ ಎಲ್ಲೆಡೆಯಲ್ಲೂ ಸಂಘರ್ಷಗಳು ನಡೆಯುತ್ತಲೇ ಬರುತ್ತಿದೆ.

ಪ್ರಾಚೀನ ಭಾರತದ ತತ್ವಶಾಸ್ತ್ರ ಜಗತ್ತಿನಲ್ಲಿ ಭೌತವಾದಿಗಳಿಗೂ ಭಾವನಾವಾದಿಗಳಿಗೂ ನಡೆದಿರುವ ತತ್ವಶಾಸ್ತ್ರೀಯ ಸಂಘರ್ಷವನ್ನೂ ಮತ್ತು ಅದರ ಸಾಮಾಜಿಕ ತಳಹದಿಯನ್ನೂ ದೇಬಿಪ್ರಸಾದರ 'ಲೋಕಾಯತ' ಅತ್ಯಗ್ರ್ಯತವಾಗಿ ಕಟ್ಟಿಕೊಡುತ್ತದೆ. ಭಾರತೀಯ ತತ್ವಶಾಸ್ತ್ರ ಪರಂಪರೆಯಲ್ಲಿ 'ಜ್ಞಾನ' ಮತ್ತು 'ಮೋಕ್ಷ'ವನ್ನು ಪ್ರಧಾನವೆಂದು ಭಾವಿಸುವ ಭಾವನಾವಾದಿ ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಇತ್ಯಾದಿ ಪರಂಪರೆಗಳಿದ್ದವು ಮತ್ತು ಇವೆ ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಆದರೆ ಅದಕ್ಕೆ ಭೌತ ಬದುಕಿನ ಸೆಲೆಯನ್ನು ಸವಾಲೆಸೆದ 'ಲೋಕಾಯತ', 'ಚಾರ್ವಾಕ', 'ಸಾಂಖ್ಯ', 'ನ್ಯಾಯ ವೈಶೇಷಿಕ' ಎಂಬಿತ್ಯಾದಿ ಭೌತವಾದಿ ದರ್ಶನಗಳೂ ಇದ್ದವು ಎಂಬುದು ದೇಬಿಪ್ರಸಾದರ 'ಲೋಕಾಯತ' ಪ್ರಕಟಣೆ ಆಗುವ ತನಕ ಹೆಚ್ಚಿನ ಜನರಿಗೆ ಗೊತ್ತೇ ಇರಲಿಲ್ಲ. ಆದರೆ ಅದರ ಕ್ರಾಂತಿಕಾರ ಕಾಣ್ಕೆಗಳನ್ನು ಅರಿತಿದ್ದ ಅಂದಿನ ಆಳುವ ವರ್ಗಗಳು ಹಲವು ರೀತಿಯಲ್ಲಿ ಈ ಭೌತವಾದಿಗಳ ಮೇಲೆ ಮತ್ತು ಅವರ ದರ್ಶನಗಳ ಮೇಲೆ ಆಕ್ರಮಣವನ್ನು ನಡೆಸಿದರು. ಅದರ ಪರಿಣಾಮವಾಗಿಯೇ ಇಂದು 'ಲೋಕಾ ಯತ'ದಂಥ ಭೌತವಾದಿ ದರ್ಶನಗಳ ಯಾವ ಮೂಲಕೃತಿಯೂ ಲಭ್ಯವಿಲ್ಲ.

ಇಂಥ ಸನ್ನಿವೇಶದಲ್ಲೂ ಪ್ರಾಚೀನ ಭಾರತದ ಭೌತದರ್ಶನವನ್ನು ಹುಡುಕಿ ತೆಗೆಯಲು ದೇಬಿಪ್ರಸಾದರು ಅನುಸರಿಸಿದ ವಿಧಾನ ಅತ್ಯಂತ ಕುತೂಹಲಕಾರಿಯಾಗಿದೆ. ತಾವು ಅನುಸರಿಸಿದ ಈ ಸಂಶೋಧನಾ ವಿಧಾನಕ್ಕೆ ಅವರು "ರಚನಾತ್ಮಕ ಪುನರ್‌ವ್ಯಾಖ್ಯಾನ"ವೆಂದು ಹೆಸರಿಸುತ್ತಾರೆ. ಇನ್ನೂ ಕೆಲವು ವಿದ್ವಾಂಸರು ಈ ಮಾರ್ಗವನ್ನು "ರೆಟ್ರೋಸ್ಪೆಕ್ಟೀವ್ ಪ್ರೋಬಿಂಗ್" ಎಂದೂ ಕರೆಯುತ್ತಾರೆ. ಇಂದು ಲೋಕಾಯತ ಹಾಗೂ ಇನ್ನಿತ್ಯಾದಿ ದರ್ಶನಗಳ ಪ್ರಸ್ತಾಪ ಲಭ್ಯವಿರುವುದು ಅದನ್ನು ದೂಷಿಸುವ, ತಿರಸ್ಕರಿಸುವ ಭಾವನಾವಾದಿ ತತ್ವಶಾಸ್ತ್ರಜ್ಞರ ಕೃತಿಗಳಲ್ಲಿ. ಉದಾಹರಣೆಗೆ ಆದಿ ಶಂಕರರ ಕೃತಿಗಳಲ್ಲಿ, ಮಾಧವರ "ಸರ್ವಧರ್ಮ ದರ್ಶನ"ಗಳಲ್ಲಿ 'ಲೋಕಾಯತ'ರ ಮತ್ತು 'ಸಾಂಖ್ಯ'ರ ವಾದಗಳ ಬಗ್ಗೆ ತಿರಸ್ಕಾರ ಪೂರ್ವಕ ಪ್ರಸ್ತಾಪಗಳಿವೆ. ದೇಬಿಪ್ರಸಾದರು 'ಲೋಕಾಯತ'ರ ದರ್ಶನವನ್ನು ಪುನರ್‌ಕಟ್ಟಿಕೊಡುವಲ್ಲಿ ಆಕರವಾಗಿ ಬಳಸುವುದು ಈ ಗ್ರಂಥಗಳನ್ನೇ. ಈ ಗ್ರಂಥಗಳ ಕರ್ತೃಗಳು ಭೌತವಾದಿಗಳೆಂದರೆ ನೀತಿ-ಧರ್ಮಗಳಿಲ್ಲದೆ ಕೇವಲ ಸ್ವಚ್ಛಂದ ಬದುಕನ್ನು ಪ್ರತಿಪಾದಿಸುವ ಅಸುರೀಯ ಪ್ರವೃತ್ತಿಯವರೆಂದೂ ಕಥೆಗಳನ್ನೂ ಕಟ್ಟಿದ್ದಾರೆ. ಆದರೆ ದೇಬಿಪ್ರಸಾದರು ಈ ಕಥಾಹಂದರವನ್ನು ಚಾರಿತ್ರಿಕ ತರ್ಕಶೀಲತೆಯಿಂದ ಕೆಡವಿ ಅದೇ ಸಂದರ್ಭ, ವ್ಯಕ್ತಿ ಮತ್ತು ವಿಚಾರಗಳನ್ನು ಭೌತವಾದಿ ದೃಷ್ಟಿಕೋನದಿಂದ ಪುನರ್‌ವಿಶ್ಲೇಷಣೆ ಮಾಡಿ ಪುನರ್ ನಿರ್ಮಿಸಿ ಕೊಡುತ್ತಾರೆ.

ಉದಾಹರಣೆಗೆ ಪ್ರಾಚೀನ "ತಂತ್ರವಾದ"ದ ಬಗ್ಗೆ ಆದಿಶಂಕರ ಅಥವಾ ಮಾಧವರ ಗ್ರಂಥದಲ್ಲಿ ನಮಗೆ ಸಿಗುವ ಮಾಹಿತಿಯ ಪ್ರಕಾರ ಅವರು ನಿಗೂಢವಾದ ಬದುಕನ್ನು ನಡೆಸುವವರು ಮತ್ತು ಲೈಂಗಿಕತೆಯನ್ನೇ ಪ್ರಾಪಂಚಿಕ ದೃಷ್ಟಿಕೋನವನ್ನಾಗಿ ಪರಿಭಾವಿಸುವವರು ಎಂಬುದು. ಆದರೆ ದೇಬಿಪ್ರಸಾದರು ಇದೇ ಗ್ರಂಥಗಳನ್ನೇ ಭೌತವಾದಿ ದೃಷ್ಟಿಯಿಂದ ಪರಿಶೀಲಿಸಿ ಹೇಗೆ ಈ ತಾಂತ್ರಿಕರು ಭಾರತದ ಪ್ರಥಮ ಭೌತವಾದಿಗಳಾಗಿದ್ದಾರೆ ಎಂಬುದನ್ನು ನಿರೂಪಿಸುತ್ತಾರೆ. ಏಕೆಂದರೆ ಲೈಂಗಿಕತೆಯ ಬಗೆಗೆ ಅತಿ ಒತ್ತು ಪ್ರಾಚೀನ ವೈದಿಕರಿಗೂ ಇದ್ದೇ ಇತ್ತು. ಇದನ್ನು ಅವರು ವೇದಗಳ ಪಠ್ಯವನ್ನು ವ್ಯಾಖ್ಯಾನ ಮಾಡುವ ಮೂಲಕ ಸಾಬೀತುಪಡಿಸುತ್ತಾರೆ. ಹಾಗಿದ್ದಲ್ಲಿ ತಂತ್ರವಾದವನ್ನು ಭಾವನಾವಾದಿಗಳು ಏಕೆ ವಿರೋಧಿಸಿದರೆಂಬುದಕ್ಕೆ ಲೈಂಗಿಕ ಒತ್ತಿನ ಹಿನ್ನೆಲೆಯಲ್ಲಿ ಮರೆಮಾಚಲಾಗಿರುವ ತಂತ್ರವಾದಿಗಳ ಪ್ರಾಪಂಚಿಕ ದೃಷ್ಟಿಕೋನವನ್ನು ಹೆಕ್ಕಿ ತೆಗೆಯುತ್ತಾರೆ. ಮನುಷ್ಯನ ಬದುಕು ಮತ್ತು ಸಾವಿಗೆ ಮನುಷ್ಯನ "ದೇಹವೇ". ಮೂಲ. ಹೀಗಾಗಿ ಈ "ದೇಹ"ವನ್ನು ಅರ್ಥ ಮಾಡಿಕೊಂಡರೆ ಮತ್ತು ಅದರ ಪುನರುತ್ಪತ್ತಿಯನ್ನು ಅರ್ಥ ಮಾಡಿಕೊಂಡರೇ ಹೊರ ಜಗತ್ತಿನ ಸತ್ಯಗಳು ತಿಳಿಯುತ್ತವೆ ಎಂಬುದು ತಾಂತ್ರಿಕರ "ದೇಹವಾದ". ಅವರ ಮಟ್ಟಿಗೆ ಮೋಕ್ಷವೆಂದರೆ "ಕಾಯ ಸಾಧನವೇ". ಈ ದೇಹದ ಮತ್ತು ಹೊರಜಗತ್ತಿನ ಸರ್ವತೋಮುಖ ಬೆಳವಣಿಗೆಯನ್ನು ಮೀರಿದ "ಮೋಕ್ಷ"ವೆಂಬುದಿಲ್ಲ ಎಂಬುದು ಅವರ ವಾದ. ಹೀಗಾಗಿ ವೈದಿಕ ದರ್ಶನಗಳಲ್ಲೂ ಲೈಂಗಿಕತೆಯಿದ್ದರೂ, ಒಮ್ಮೊಮ್ಮೆ ವಿಕೃತ ಲೈಂಗಿಕತೆಯಿದ್ದರೂ, ಅದರ ಭೌತಿಕ ಅಭಿವ್ಯಕ್ತಿಯಾದ ದೇಹದ ನಿರಾಕರಣೆಯಿರುತ್ತದೆ. ಆದರೆ ಲೋಕಾಯತ ಮತ್ತು ತಾಂತ್ರಿಕರ ದರ್ಶನದಲ್ಲಿ ದೇಹಕ್ಕೆ "ದೇಹವಾದ"ವೆಂಬ ಭೌತವಾದಿ ತತ್ವಶಾಸ್ತ್ರೀಯ ವ್ಯಾಖ್ಯಾನವೇ ಸಿಗುತ್ತದೆ.



ಅದೇ ರೀತಿ "ಗಣಪತಿ" ಮತ್ತು "ಗೌರಿ"ಯೆಂಬ ದೈವೀ ಪರಿಕಲ್ಪನೆಗಳ ಹಿಂದಿನ ಗ್ರಹಿಕೆಯನ್ನು ಪರಿಶೋಧಿಸುತ್ತಾ ಪ್ರಾಚೀನ ಭಾರತದ ಇತಿಹಾಸವನ್ನು ದೇಬಿಪ್ರಸಾದರು ಕಟ್ಟಿಕೊಡುತ್ತಾರೆ. ... ಸವಾರಿ ಮಾಡುವ ಸ್ವರೂಪವುಳ್ಳ ... ವಾಸ್ತವದಲ್ಲಿ ಯಾವ ಸಾಮಾಜಿಕ ... ತೋರಿಸುತ್ತಿದ್ದವು ಎಂದು ಪ್ರಶ್ನಿಸುವ ದೇಬಿಪ್ರಸಾದರು, ಅದು ವಾಸ್ತವವಾಗಿ ಆಗಿಯನ್ನು ತಮ್ಮ ... ಬುಡಕಟ್ಟೊಂದು ಇಲಿಯನ್ನು ... ಬುಡಕಟ್ಟೊಂದರ ಮೇಲೆ ನಡೆಸಿದ ಯುದ್ಧದಲ್ಲಿ ಸಾಧಿಸಿದ ಗೆಲುವಿನ ಸಂಕೇತವೆಂದು ವ್ಯಾಖ್ಯಾನಿಸುತ್ತಾರೆ. ಹೀಗೆ ಗಣಪತಿಯನ್ನು ಶಿವನ ಪುತ್ರ- ಇತ್ಯಾದಿ ಪುರಾಣವಾಗಿ ನೋಡುವ ಭಾವನಾವಾದಿ ದೃಷ್ಟಿಕೋನಕ್ಕೆ ಬದಲಾಗಿ ಇಂಥ ಅಭಿವ್ಯಕ್ತಿಗಳನ್ನು ಗತದ ಸಾಂಕೇತಿಕ ಪಳೆಯುಳಿಕೆಗಳನ್ನಾಗಿ ನೋಡಬೇಕೆಂದು ಪ್ರತಿಪಾದಿಸುತ್ತಾರೆ. ಅದೇ ರೀತಿ "ಗೌರಿ" ಮತ್ತು ಆ ಹಬ್ಬದ ಆಚರಣೆ ನಮ್ಮ ಇತಿಹಾಸದಲ್ಲಿ ಮತ್ತು ಪುರಾಣದಲ್ಲಿ ವಿಕಸನಗೊಂಡ ರೀತಿಯನ್ನು ವಿಶ್ಲೇಷಿಸುತ್ತಾ ಗೌರಿ ಹಬ್ಬ ವಾಸ್ತವವಾಗಿ ನಮ್ಮ ಭಾರತೀಯ ಸಮಾಜದಲ್ಲಿ ವರ್ಗ ವಿಭೇದಗಳು ಹುಟ್ಟುವ ಮುನ್ನ ಇದ್ದ ಮಾತೃಪ್ರಧಾನ ಸಮಾಜದ ಪಳೆಯುಳಿಕೆಯೆಂದು ಸಾಬೀತುಪಡಿಸುತ್ತಾರೆ. ಅದೇ ರೀತಿ ಲೋಕಾಯತಕ್ಕಿಂತ ಭೌತವಾದಿ ತತ್ವಶಾಸ್ತ್ರದಲ್ಲಿ ಹೆಚ್ಚಿನ ಬೆಳವಣಿಗೆ ಹೊಂದಿದ ಸಾಂಖ್ಯ ದರ್ಶನವನ್ನು ಕೂಲಂಕಷವಾಗಿ ಪರಿಚಯಿಸುತ್ತಾರೆ. ಜೀವದ ಹುಟ್ಟು ಮತ್ತು ವಿಕಸನಗಳೆರಡಕ್ಕೂ ಹೇಗೆ ಲೌಕಿಕ ಮೂಲದ ಕಾರಣಗಳಿವೆಯೇ ವಿನಃ ಅಲೌಕಿಕ ಕಾರಣಗಳಿಲ್ಲವೆಂದು ಸಾಂಖ್ಯ ದರ್ಶನ ಸಾಬೀತು ಮಾಡುವುದನ್ನು ಎತ್ತಿತೋರಿಸುತ್ತಾರೆ.

ಆದರೆ ಕ್ರಮೇಣ ಸಾಂಖ್ಯ ದರ್ಶನಗಳಿಗೂ ಭಾವನಾವಾದಿಗಳು ಭಾವನಾವಾದದ ಲೇಪನ ಮಾಡಿದರು. ಪ್ರಬಲವಾದ ತಳಹದಿ ಹೊಂದಿದ್ದ ಲೋಕಾಯತ ಮತ್ತಿತರ ಭೌತವಾದೀ ಪರಂಪರೆಗಳನ್ನು ನಾಶ ಮಾಡಿ ನಾಮಾವಶೇಷಗೊಳಿಸಿದರು. ಇದಕ್ಕೆ ಕಾರಣವೇನು?


ದೇಬಿಪ್ರಸಾದರು ಇದಕ್ಕೆ ಅತ್ಯಂತ ಸಮಂಜಸವಾದ ಉತ್ತರವನ್ನು ನೀಡುತ್ತಾರೆ ಮಾತ್ರವಲ್ಲ, ಆಧುನಿಕ ಭೌತವಾದ ಗೆಲ್ಲಲು ಇರುವ ಏಕೈಕ ದಾರಿಯನ್ನು ತಿಳಿಸಿಕೊಡುತ್ತಾರೆ. ಭೌತವಾದಿಗಳ ಪ್ರಕಾರ ಜ್ಞಾನದ ಮೂಲ ಸಮಾಜ. ಹೀಗಾಗಿ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳೇ ತತ್ವಶಾಸ್ತ್ರದಲ್ಲೂ ಕಾಣಿಸಿಕೊಳ್ಳುತ್ತದೆ. ಎಲ್ಲಿಯತನಕ ಪ್ರಾಚೀನ ಸಮಾಜದಲ್ಲಿ ವರ್ಗ-ಲಿಂಗ ತಾರತಮ್ಯಗಳಿರಲಿಲ್ಲವೋ ಅಲ್ಲಿಯತನಕ ಭೌತವಾದದ ಬೆಳವಣಿಗೆಗೆ ಅಡ್ಡಿಯೇನಿರಲಿಲ್ಲ. ಆದರೆ ಸಮಾಜದಲ್ಲಿ ಯಾವಾಗ ಶೋಷಕ-ಶೋಷಿತ ಎಂಬ ಭೇದಗಳು ಹುಟ್ಟಿಕೊಂಡವೋ, ಯಾವಾಗ ಕುಂತುಣ್ಣುವ- ವಿರಾಮವಿರುವ ವರ್ಗವೊಂದು ಹುಟ್ಟಿಕೊಂಡಿತೋ, ಆಗಲೇ ಬೌದ್ಧಿಕ ಶ್ರಮ ಮತ್ತು ಭೌತಿಕ ಶ್ರಮದ ನಡುವೆ ಭೇದವೂ ಹುಟ್ಟಿಕೊಂಡಿತು. ಮಾತ್ರವಲ್ಲ, ಭೌತಿಕ ಶ್ರಮ ಕೀಳೆಂಬ ಅಭಿಪ್ರಾಯವೂ ಸಮಾಜದಲ್ಲಿ ಬೇರೂರಿತು. ಸಮಾಜದಲ್ಲಿ ಈ ರೀತಿ ದೈಹಿಕ ಮತ್ತು ಬೌದ್ಧಿಕ ಶ್ರಮದ ನಡುವೆ ತಾರತಮ್ಯ ಹುಟ್ಟಿಕೊಳ್ಳುತ್ತಿದ್ದಂತೆ ತತ್ವಶಾಸ್ತ್ರದಲ್ಲಿ ಭಾವನಾವಾದವೂ, ಜ್ಞಾನವೂ- ಭೌತವಾದಕ್ಕಿಂತ, ಕರ್ಮಕ್ಕಿಂತ ಶ್ರೇಷ್ಠವಾದದ್ದೆಂಬ ಅಭಿಪ್ರಾಯವೂ ಮನ್ನಣೆ ಪಡೆಯತೊಡಗಿತು.

ಹೀಗೆ ಭೌತವಾದದ ಸೋಲು ಸಾರಾಂಶದಲ್ಲಿ ದುಡಿಯುವ ಜನರು ದುಡಿಸಿಕೊಳ್ಳುವ ಜನರ ವಿರುದ್ಧ ಅನುಭವಿಸಿದ ಸೋಲಿನ ಪರಿಣಾಮವೇ ಆಗಿದೆ ಎಂಬುದು ದೇಬಿಪ್ರಸಾದರ ನಿಲುವು. ಆದ್ದರಿಂದಲೇ ಸಮಾಜದಲ್ಲಿ ದುಡಿಯುವ ಜನರ ವಿಜಯದೊಂದಿಗೇ ಆಧುನಿಕ ಭೌತವಾದವೂ ವಿಜಯೀಯಾಗುತ್ತದೆ ಎಂಬುದು ಅವರ ಖಚಿತವಾದ ಅಭಿಪ್ರಾಯ.

ಹೀಗೆ ದೇಬಿಪ್ರಸಾದ್ ಚಟ್ಟೋಪಾಧ್ಯಾಯರವರು ಮತ್ತು ಅವರ 'ಲೋಕಾಯತ' ಕೃತಿ ಜಗತ್ತಿನ ದುಡಿಯುವ ಜನರ ಬೌದ್ಧಿಕ ವಿಮೋಚನೆಯನ್ನು ಆಶಿಸುವ ಮತ್ತು ಅದಕ್ಕೆ ಪ್ರೇರಣೆ ಮತ್ತು ಪೋಷಣೆ ನೀಡುವ ಕೃತಿಯಾಗಿದೆ. 1959ರಲ್ಲಿ ಈ ಕೃತಿ ಪ್ರಕಟಣೆಯಾದಾಗಿನಿಂದ 1993ರಲ್ಲಿ ಅವರು ದಿವಂಗತರಾಗುವವರೆಗೆ ದುಡಿಯುವ ಜನರನ್ನು ತಾತ್ವಿಕವಾಗಿ ತಯಾರು ಮಾಡಲು ದೇಬಿಪ್ರಸಾದರು ಬೌದ್ಧಿಕವಾಗಿ ಅಹರ್ನಿಶಿ ಶ್ರಮಿಸಿದರು. ಈ ನಿಟ್ಟಿನಲ್ಲಿ ಮಾರ್ಕ್ಸ್‌ವಾದವೊಂದೇ ಎಲ್ಲಾ ದುಡಿಯುವ ಜನರ ವಿಮೋಚನೆಯನ್ನು ಸಾಧ್ಯವಾಗಿಸುವ ಸಿದ್ಧಾಂತವೆಂದು ಅವರು ಭಾವಿಸಿದ್ದರು. ತಮ್ಮ ಎಲ್ಲಾ ಕೃತಿಗಳನ್ನೂ ಮಾರ್ಕ್ಸ್‌ವಾದಿ ಸಿದ್ಧಾಂತ ಬೆಳಕಿನಲ್ಲೇ ರಚಿಸಿದರು.

ಆದ್ದರಿಂದಲೇ 'ಲೋಕಾಯತ'ವನ್ನೂ ಒಳಗೊಂಡಂತೆ ದೇಬಿಪ್ರಸಾದರ ... ಕೃತಿಗಳನ್ನು ... ಕನ್ನಡಕ್ಕೆ ತರುವ ಅಗತ್ಯವಿದೆ.

● ಶಿವಸುಂದರ್



ಸತ್ತ ಮಹಿಳೆಯ ಗುಟ್ಟು

ಯಾವುದೇ ನೋವು, ಯಾತನೆ ಇಲ್ಲದ ಸಾವು ಆ ಮಹಿಳೆಗೆ ಬಂದಿತ್ತು. ನಿಷ್ಕಳಂಕ ಬದುಕನ್ನು ಸಾಗಿಸಿದ್ದ ಮಹಿಳೆಯೊಬ್ಬಳಿಗೆ, ದಕ್ಕಬೇಕಾದಂತಹ ಸಾವು ಆಕೆಯದ್ದಾಗಿತ್ತು. ಈಗ ಆಕೆ ಕಣ್ಣುಮುಚ್ಚಿ ಯಾವುದೇ ಚಿಂತೆ ಇಲ್ಲದಂತೆ, ತನ್ನ ಉದ್ದನೆ ಬಿಳಿ ಕೂದಲನ್ನು ಸಾಯುವ ಹತ್ತು ನಿಮಿಷಗಳ ಮುನ್ನ ನೀಟಾಗಿ ಬಾಚಿದ್ದಂತೆ ಹಾಸಿಗೆ ಮೇಲೆ ಮಲಗಿದ್ದಳು. ಆ ಮಹಿಳೆಯ ಮುಖ ಎಷ್ಟು ನಿರ್ಮಲವಾಗಿ ಪ್ರಶಾಂತವಾಗಿತ್ತೆಂದರೆ ವಿರಕ್ತಿಯಿಂದ ಕೂಡಿತ್ತೆಂದರೆ ಆಕೆಯ ದೇಹ ಅದೆಂತಹ ಮಧುರ ಆತ್ಮವನ್ನು ಹೊಂದಿದ್ದಿರಬಹುದು ಎನಿಸುವಂತಿತ್ತು. ಈ ಮುದುಕಿ ಅದೆಷ್ಟು ನೆಮ್ಮದಿಯ ಬದುಕನ್ನು ಜೀವಿಸಿದ್ದಳು, ಈ ತಾಯಿ ಅದೆಷ್ಟು ಸುಲಭದ ಮತ್ತು ಪರಿಶುದ್ಧ ಸಾವನ್ನು ಕಂಡಿದ್ದಳು ಎಂದೂ ಅನ್ನಿಸುತ್ತಿತ್ತು.

ಆಕೆಯ ಹಾಸಿಗೆಯ ಪಕ್ಕ ತತ್ವನಿಷ್ಠ ನ್ಯಾಯಾಧೀಶನಾಗಿದ್ದ ಆಕೆಯ ಮಗ ಮತ್ತು ಸಂನ್ಯಾಸತ್ವವನ್ನು ಸ್ವೀಕರಿಸಿದ್ದ ಮಗಳು ತಮ್ಮ ಹೃದಯವೇ ಛಿದ್ರವಾಗುವಂತೆ ರೋದಿಸುತ್ತಿದ್ದರು. ಅವರಿಬ್ಬರೂ ಚಿಕ್ಕವರಾಗಿದ್ದಾಗಿನಿಂದಲೂ ಆ ತಾಯಿ ಅವರಿಗೆ ಧರ್ಮ ನಿಷ್ಠುರತೆಯನ್ನು, ನೀತಿಪ್ರಜ್ಞೆಯನ್ನು, ರಾಜಿ ಮಾಡಿಕೊಳ್ಳದೆ ತಮ್ಮ ಕರ್ತವ್ಯ ಪಾಲಿಸುವುದನ್ನು ಹೇಳಿಕೊಟ್ಟಿದ್ದಳು. ಪರಿಣಾಮವಾಗಿ, ಕಾನೂನನ್ನೇ ಅಸ್ತ್ರವಾಗಿಸಿಕೊಂಡು ಅಸಹಾಯಕರನ್ನೂ ಬಡಿದು ಹಾಕುವಂತಹ ನಿರ್ದಯಿ ನ್ಯಾಯಾಧೀಶನಾಗಿದ್ದ ಆಕೆಯ ಮಗ; ಹಾಗೆಯೇ ಪುರುಷರನ್ನು ದ್ವೇಷಿಸುತ್ತಾ ಆಕೆಯ ಮಗಳು ಚರ್ಚಿನಲ್ಲಿ ನನ್ ಆಗಿದ್ದಳು.

ತಮ್ಮ ತಂದೆ ತಮ್ಮ ತಾಯಿಗೆ ಅತೀವ ದುಃಖವನ್ನು ನೀಡಿದ್ದ ಎಂಬುದನ್ನು ಬಿಟ್ಟರೆ ಅವರಿಬ್ಬರಿಗೆ ಆತನ ಬಗ್ಗೆ ಹೆಚ್ಚೇನೂ ಗೊತ್ತಿರಲಿಲ್ಲ.

ನನ್ ತನ್ನ ಸತ್ತ ತಾಯಿಯ ಒಂದು ಕೈಹಿಡಿದು ಅದಕ್ಕೆ ಮುತ್ತಿಡುತ್ತಿದ್ದರೆ ಆ ಮಹಿಳೆಯ ಇನ್ನೊಂದು ಕೈ ಸಾವಿನ ಹೊಸ್ತಿಲಲ್ಲಿದ್ದಾಗ ಬೆಡ್‌ಶೀಟನ್ನು ಗಟ್ಟಿಯಾಗಿ ಹಿಡಿದಿದ್ದಂತೆ ಕಾಣಿಸುತ್ತಿತ್ತು. ಶಾಶ್ವತ ಸ್ಥಾವರ ಸ್ಥಿತಿಗೆ ಸಾಗುವ ಮುನ್ನದ ಕೆಲವೇ ಕ್ಷಣಗಳ ನೆನಪಿನಂತೆ ಬೆಡ್‌ಶೀಟಿನಲ್ಲಿನ ಸಣ್ಣ ಸುಕ್ಕುಗಳು ಇನ್ನೂ ಹಾಗೆಯೇ ಇದ್ದವು.

ಯಾರೋ ಬಾಗಿಲನ್ನು ನಿಧಾನವಾಗಿ ತಟ್ಟಿದಾಗ ಅವರಿಬ್ಬರು ತಲೆ ಎತ್ತಿ ನೋಡಿದರು. ಆಗತಾನೆ ಊಟ ಮುಗಿಸಿದ್ದ ಪಾದ್ರಿ ಅವರ ಮನೆಗೆ ಹಿಂದಿರುಗಿದ್ದ. ಕಳೆದ ಕೆಲವು ರಾತ್ರಿ ನಿದ್ದೆಗೆಟ್ಟಿದ್ದ ಆತ ಇನ್ನು ಮುಂದೆ ನಡೆಯಲಿರುವ ಹೆಣ ಕಾಯುವಿಕೆಯನ್ನು ನೆನೆದೇ ಸುಸ್ತಾಗಿದ್ದ. ದಣಿವಿನಿಂದ ಆತನ ಮುಖ ಕೆಂಪೇರಿತ್ತಲ್ಲದೆ ಆತ ಏದುಸಿರುಬಿಡುತ್ತಿದ್ದ. ತಿಥಿ ಆಚರಣೆಗಳನ್ನು ಮಾಡುವ ಮೂಲಕವೇ ಆತ ತನ್ನ ಜೀವನೋಪಾಯವನ್ನು ಕಂಡುಕೊಳ್ಳುತ್ತಿದ್ದರೂ ಆತ ದುಃಖಭರಿತನಾಗಿರುವವನಂತೆ ನಟಿಸಿದ. "ನನ್ನ ಮಕ್ಕಳೆ, ಈ ದುಃಖದ ಗಳಿಗೆಯಲ್ಲಿ ನಿಮಗೆ ನೆರವು ಮತ್ತು ಸಾಂತ್ವನ ನೀಡಲು ಬಂದಿದ್ದೇನೆ" ಎಂದ ಪಾದ್ರಿ. ಆಗ ಆಕೆ "ಬೇಡ ಫಾದರ್. ನಾನು ಮತ್ತು ನನ್ನ ಅಣ್ಣ ಮಾತ್ರ ಆಕೆಯೊಂದಿಗೆ ಇರಲು ಬಯಸುತ್ತೇವೆ. ಇದು ಆಕೆಯೊಂದಿಗೆ ಇರುವ ಕೊನೆ ಅವಕಾಶ ನಮಗೆ. ನಾವು ಒಟ್ಟಾಗಿ, ನಾವು ಮೂವರು ಮಾತ್ರ ಇದ್ದು ಹಳೆಯದನ್ನು ನೆನಪಿಸಿಕೊಂಡು, ನನ್ನ ಅಮ್ಮ......"

ದುಃಖ ಮತ್ತು ಕಣ್ಣೀರು ಉಮ್ಮಳಿಸಿ ಬಂದಿದ್ದರಿಂದ ಆಕೆ ಮಾತನ್ನು ಮುಂದುವರಿಸಲಾಗದೆ ಸುಮ್ಮನಾದಳು.

"ನಿಮ್ಮ ಇಚ್ಛೆಯಂತೆ ಆಗಲಿ ಮಕ್ಕಳೆ" ಎಂದ ಪಾದ್ರಿ, ಹಾಸಿಗೆಯ ಪಕ್ಕ ಮಂಡಿಯೂರಿ ಪ್ರಾರ್ಥನೆ ಸಲ್ಲಿಸಿ "ಈಕೆ ಪರಿಶುದ್ಧ ವ್ಯಕ್ತಿಯಾಗಿದ್ದಳು" ಎಂದು ಹೇಳಿ ಹೊರಟು ಹೋದ.

ಸತ್ತ ಮಹಿಳೆ ಮತ್ತಾಕೆಯ ಇಬ್ಬರು ಮಕ್ಕಳು ಮಾತ್ರ ಆ ಕೊಠಡಿಯಲ್ಲಿ ಉಳಿದರು. ಎಲ್ಲೋ ಅಡಗಿದ್ದ ಗಡಿಯಾರದ ಸದ್ದು ಕೇಳಿಸುವಷ್ಟು ಮೌನ ಆವರಿಸಿತು. ತೆರೆದಿದ್ದ ಕಿಟಕಿಯಿಂದ ಒಣಹುಲ್ಲು ಮತ್ತು ಮರಗಳ ವಾಸನೆಯೊಂದಿಗೆ ಚಂದಿರನ ಮಂದ ಬೆಳಕೂ ಹರಿದುಬರುತ್ತಿತ್ತು. ಆಗಾಗ ವಟಗುಟ್ಟುತ್ತಿದ್ದ ಕಪ್ಪೆ ಅಥವಾ ಕೀಟವೊಂದು ಮಾಡುತ್ತಿದ್ದ ಸದ್ದು ಬಿಟ್ಟರೆ ಬೇರಿನ್ನಾವ ಶಬ್ದವೂ ಕೇಳಿಬರುತ್ತಿರಲಿಲ್ಲ. ಅನಂತ ಶಾಂತಿ, ದೈವದತ್ತ ದುಮ್ಮಾನ, ಮೌನವಾದ ಪ್ರಶಾಂತತೆ ಆ ಸತ್ತ ಮಹಿಳೆಯನ್ನು ಆವರಿಸಿತ್ತು ಮತ್ತು ಪ್ರಕೃತಿಯನ್ನೇ ಶಾಂತಗೊಳಿಸುವಂತೆ ಅವೆಲ್ಲ ಆಕೆ ಹೊರಸೂಸಿರುವಂತೆ ಭಾಸವಾಗುತ್ತಿತ್ತು.

ಅವರಿಬ್ಬರೂ "ಅಮ್ಮಾ, ಅಮ್ಮಾ" ಎಂದು ಕರೆಯುತ್ತಾ ಜೋರಾಗಿ ಅಳಲಾರಂಭಿಸಿದರು. ಮಗಳಂತೂ "ಅಯ್ಯೋ ದೇವರೇ" ಎನ್ನುತ್ತಾ ತನ್ನ ಹಣೆಯನ್ನು ದುಃಖಭರಿತಳಾಗಿ ಬಡಿದುಕೊಳ್ಳುತ್ತಿದ್ದಳು. ಅಪ್ಪಳಿಸಿ ಬರುತ್ತಿದ್ದ ದುಃಖದಿಂದಾಗಿ

ಕತೆ

ಮೂಲ: ಗೈ ದೆ ಮೊಪಸಾ
ಕನ್ನಡಕ್ಕೆ: ಗೌರಿ ಲಂಕೇಶ್

ಅವರಿಬ್ಬರು ಏದುಸಿರುಬಿಡುತ್ತಾ ಆ ದುಃಖವನ್ನು ಕಷ್ಟಪಟ್ಟು ನುಂಗಲು ಪ್ರಯತ್ನಿಸುತ್ತಿದ್ದರು. ಬಿರುಗಾಳಿ ಬೀಸಿದ ನಂತರ ಸಮುದ್ರ ಹೇಗೆ ಶಾಂತ ಸ್ಥಿತಿಗೆ ಮರಳುತ್ತದೋ ಹಾಗೆಯೇ ಅವರೂ ಸ್ವಲ್ಪ ಹೊತ್ತಿನ ನಂತರ ಶಾಂತಗೊಂಡು ನಿಶಬ್ದವಾಗಿ ಕಣ್ಣೀರಿಡುತ್ತಾ ಕೂತರು.

ಅದೆಷ್ಟೋ ಹೊತ್ತು ಉರುಳಿದ ನಂತರ ಅವರಿಬ್ಬರೂ ಎದ್ದು ನಿಂತು ಹೆಣವಾಗಿದ್ದ ತಮ್ಮ ತಾಯಿಯತ್ತ ನೋಡಿದರು. ಆಗ ಗತಕಾಲದ ನೆನಪುಗಳು, ಪ್ರೀತಿ ತುಂಬಿದ್ದ ನಿನ್ನೆ, ದುಃಖಭರಿತ ಇಂದು ಎಲ್ಲವೂ ಸಮ್ಮಿಳಗೊಂಡು ಅಗಲಿರುವವರು ಜೀವಂತವಾಗಿದ್ದಾರೆ ಎನಿಸುವಷ್ಟು ಸ್ಪಷ್ಟವಾಗಿ ತಮ್ಮ ಎಲ್ಲ ವಿವರಗಳೊಂದಿಗೆ, ಪರಿಚಿತ ಆತ್ಮೀಯತೆಯೊಂದಿಗೆ ಮಾಸಿ ಹೋಗಿದ್ದರೂ ಮತ್ತೆ ಮಾಸಿಹೋಗಿದ್ದ ನೆನಪುಗಳೆಲ್ಲ ಹರಿದುಬಂದವು. ಅವರಿಬ್ಬರು ಹಲವಾರು ಘಟನೆಗಳನ್ನು, ಅಗಲಿದ್ದ ಅಮ್ಮನ ಮಾತು, ನಗೆ, ಧ್ವನಿಯ ಏರಿಳಿತ, ಯಾವುದೇ ವಿಷಯಕ್ಕೆ ಒತ್ತುಕೊಟ್ಟು ಹೇಳುವಾಗ ಆಕೆ ಕೈಯಾಡಿಸುತ್ತಿದ್ದ ರೀತಿ ಇತ್ಯಾದಿಗಳನ್ನೆಲ್ಲ ಮೆಲುಕು ಹಾಕಿದರು.

ಆಕೆಯ ಬಗ್ಗೆ ಅವರಿಬ್ಬರಲ್ಲೂ ಪ್ರೀತಿ ಉಕ್ಕೇರಿ ಬಂತು. ಆ ಪ್ರೀತಿಯ ಹಿನ್ನೆಲೆಯಲ್ಲಿ ತಮ್ಮ ದುಃಖದ ಆಳವನ್ನು ಮತ್ತು ಮುಂದೆ ಕಾಡಲಿರುವ ಏಕಾಂಗಿತನವನ್ನು ಅಳೆದರು. ತಮ್ಮ ಬೆಂಗಾವಲಾಗಿದ್ದ, ಮಾರ್ಗದರ್ಶಿಯಾಗಿದ್ದ, ತಮ್ಮ ಯೌವನ, ತಮ್ಮ ಬದುಕಿನ ಮುಖ್ಯ ಭಾಗವಾಗಿದ್ದ ಎಲ್ಲವೂ ಈಗ ಕಣ್ಮರೆ ಆಗುತ್ತಿರುವಂತೆ; ತಮ್ಮ ಪೂರ್ವಜರೊಂದಿಗಿನ ಕೊಂಡಿಯಾಗಿದ್ದ ತಾಯಿಯೇ ಇಲ್ಲದಿರುವುದರಿಂದ ಆ ನಂಟೇ ಕಳೆದುಹೋದಂತೆ, ಇನ್ನೆಂದೂ ಹಿಂದೆ ತಿರುಗಿ ನೋಡದಂತಹ, ಸಂಗಾತಿಗಳಿಲ್ಲದ ಏಕಾಂಗಿಗಳಾಗಿದ್ದೇವೆ ಎಂದವರಿಗೆ ಅನ್ನಿಸಿತು.

ಆಗ ನನ್ ತನ್ನ ಸಹೋದರನಿಗೆ "ಅಮ್ಮ ನಮ್ಮಿಬ್ಬರಿಗೂ ಹಳೇ ಪತ್ರಗಳಿಂದ ಓದುತ್ತಿದ್ದದ್ದು ನಿನಗೆ ನೆನಪಿದೆಯಾ? ಆ ಪತ್ರಗಳೆಲ್ಲ ಇಲ್ಲೇ ಕಪಾಟಿನಲ್ಲಿದೆ. ಅವುಗಳನ್ನು ತೆಗೆದು ಓದೋಣ. ಹಾಗೆ ಓದುವ ಮೂಲಕ ಆಕೆಯ ಬದುಕನ್ನು ಈ ರಾತ್ರಿ ಮತ್ತೆ ನೆನಪಿಸಿಕೊಳ್ಳೋಣ. ಆಕೆಯ ತಾಯಿ, ನಮಗೆ ಗೊತ್ತಿಲ್ಲದಿದ್ದ ಅಜ್ಜ-ಅಜ್ಜಿ ಅವರೆಲ್ಲರನ್ನು ಆ ಪತ್ರಗಳ ಮೂಲಕ ಮತ್ತೊಮ್ಮೆ ಭೇಟಿ ಆಗೋಣ" ಎಂದು ಹೇಳಿದಳು.

ಬಹಳ ಜತನದಿಂದ ಒಂದರ ಪಕ್ಕ ಮತ್ತೊಂದನ್ನು ಜೋಡಿಸಿ ಹಳದಿ ಕಾಗದದಲ್ಲಿ ಕಟ್ಟಿಟ್ಟಿದ್ದ ಹತ್ತು ಪೊಟ್ಟಣಗಳನ್ನು ಕಪಾಟಿನಿಂದ ಹೊರತೆಗೆದರು. ಅವುಗಳನ್ನೆಲ್ಲ ಹಾಸಿಗೆಯ ಮೇಲೆ ಹರಡಿ ಕವರ್ ಮೇಲೆ 'ಅಪ್ಪ' ಎಂದು ಬರೆದಿದ್ದ ಒಂದು ಪೊಟ್ಟಣವನ್ನು ಆಯ್ಕೆ ಮಾಡಿಕೊಂಡು ಅದನ್ನು ತೆರೆದು ಓದಲಾರಂಭಿಸಿದರು.

ಹಳೆ ಕಾಲದ ಶೈಲಿಯಲ್ಲಿ ರಚಿಸಲ್ಪಟ್ಟಿದ್ದು, ಯಾವುದೋ ಹಳೆ ಯುಗವನ್ನು ನೆನಪಿಸುವಂತಿದ್ದವು ಆ ಪತ್ರಗಳು. ಮೊದಲನೆ ಪತ್ರ "ನನ್ನ ಪ್ರೀತಿಯ" ಎಂಧು ಪ್ರಾರಂಭವಾಗಿದ್ದರೆ, ಇನ್ನೊಂದರಲ್ಲಿ "ನನ್ನ ಸುಂದರ ಪುಟ್ಟ ಮಗಳೇ" ಎಂದಿತ್ತು, ಮತ್ತೊಂದರಲ್ಲಿ "ನನ್ನ ಪ್ರೀತಿಯ ಮಗಳೆ" ಎಂದಿದ್ದರೆ, ಇನ್ನೊಂದರಲ್ಲಿ "ನನ್ನ ಪ್ರೀತಿಯ (ನಗು)" ಎಂದಿತ್ತು, ನನ್ ಇದ್ದಕ್ಕಿದ್ದಂತೆ ಆ ಪತ್ರಗಳನ್ನು ಜೋರಾಗಿ ಓದಲಾರಂಭಿಸಿದಳು; ಸತ್ತಿದ್ದ ಮಹಿಳೆಯ ಇಡೀ ಜೀವನಗಾಥೆಯನ್ನು, ಆಕೆಯ ಮಧುರ ನೆನಪುಗಳನ್ನು ಓದಲಾರಂಭಿಸಿದಳು. ಆಕೆಯ ಮಗ ತನ್ನ ಮೊಣಕೈಯನ್ನು ಶವದ ಪಕ್ಕ ಊರಿ ತನ್ನ ತಾಯಿಯ ಮುಖವನ್ನು ದಿಟ್ಟಿಸುತ್ತ ಕೇಳುತ್ತಿದ್ದ. ತನ್ನ ಬದುಕಿನ ನೆನಪುಗಳನ್ನು ಕೇಳಿ ನಿಶ್ಚಲವಾಗಿದ್ದ ಆಕೆಯ ದೇಹ ಸಂತೋಷಗೊಂಡಂತಿತ್ತು.

ಇದ್ದಕ್ಕಿದ್ದಂತೆ ಓದುವುದನ್ನು ನಿಲ್ಲಿಸಿದ ನನ್: "ಇವೆಲ್ಲವನ್ನು ಅವಳ ದೇಹದೊಂದಿಗೆ ಹೂಳಿಬಿಡಬೇಕು. ಅವಳ ಹೆಣದ ಮೇಲೆ ಇವನ್ನೇ ಹೊದಿಕೆಯಾಗಿಸಬೇಕು" ಎಂದು ಉದ್ಗಾರವೆತ್ತಿದಳು.

ಕವರ್ ಮೇಲೆ ಯಾವುದೇ ಹೆಸರು ಬರೆಯದೇ ಇದ್ದ ಇನ್ನೊಂದು ಪೊಟ್ಟಣವನ್ನು ತೆಗೆದುಕೊಂಡು ಓದಲಾರಂಭಿಸಿದಳು: "ನನ್ನ ಪ್ರಿಯತಮೆ, ನಿನ್ನನ್ನು ನಾನು ಗಾಢವಾಗಿ ಪ್ರೇಮಿಸುತ್ತೇನೆ. ನಮ್ಮಿಬ್ಬರ ನೆನಪುಗಳು ನನ್ನನ್ನು ನಿನ್ನೆಯಿಂದ ಅಪಾರವಾಗಿ ಕಾಡುತ್ತಿದ್ದು ನೀನಿಲ್ಲದೆ ನಾನು ಶಾಪಗ್ರಸ್ತನಾಗಿದ್ದೇನೆ ಎನಿಸುತ್ತಿದೆ. ನನ್ನ ತುಟಿಯ ಮೇಲೆ ನಿನ್ನ ತುಟಿಗಳು, ನನ್ನ ಕಣ್ಣಲ್ಲಿ ನಿನ್ನ ಕಣ್ಣುಗಳು, ನಿನ್ನ ಎದೆಯ ಮೇಲೆ ನನ್ನ ಎದೆಯ ನೆನಪುಗಳನ್ನು ಆಸ್ವಾದಿಸುತ್ತಿದ್ದೇನೆ. ಐ ಲವ್ ಯೂ, ಐ ಲವ್ ಯೂ! ನೀನು ನನ್ನನ್ನು ಹುಚ್ಚು ಪ್ರೇಮಿ ಆಗಿಸಿದ್ದೀಯ. ನನ್ನ ತೋಳಿನಲ್ಲಿ ನಿನ್ನನ್ನು ತೀವ್ರ ಕಾಮನೆಯಿಂದ ಬಂಧಿಸುವ ಆಸೆ. ನನ್ನ ಇಡೀ ದೇಹ ನಿನಗಾಗಿ ಹಂಬಲಿಸುತ್ತಿದೆ, ನನ್ನ ಇಡೀ ಆತ್ಮ ನಿನಗಾಗಿ ಆಶಿಸುತ್ತಿದೆ. ನಿನ್ನ ಮುತ್ತಿನ ರುಚಿ ಇನ್ನೂ ನನ್ನ ಬಾಯಲ್ಲಿದೆ..."

ನ್ಯಾಯಾಧೀಶ ತನ್ನ ಬೆನ್ನನ್ನು ನೆಟ್ಟಗಾಗಿಸಿ ಕೂತ. ನನ್ ಓದುವುದನ್ನು ನಿಲ್ಲಿಸಿದಳು. ಆ ಪತ್ರವನ್ನು ಆಕೆಯಿಂದ ಕಿತ್ತುಕೊಂಡ ಆತ ಅದಕ್ಕೆ ಸಹಿ ಹಾಕಿರುವವರು ಯಾರೆಂದು ಹುಡುಕಿದ. ಪತ್ರದ ಅಂತ್ಯದಲ್ಲಿ "ನಿನ್ನನ್ನು ಅತಿಯಾಗಿ ಪ್ರೀತಿಸುವವ" ಎಂದಿತ್ತಲ್ಲದೆ, ಆನಂತರ "ಹೆನ್ರಿ" ಎಂದಿತ್ತು. ಅವರಿಬ್ಬರ ತಂದೆಯ ಹೆಸರು ರೆನೆ ಎಂಬುದಾಗಿತ್ತು. ಆದ್ದರಿಂದ ಆ ಪತ್ರಗಳು ಅವರ ತಂದೆ ಬರೆದದ್ದಾಗಿರಲಿಲ್ಲ. ಮಗ ಆ ಪತ್ರಗಳ ಪೊಟ್ಟಣದಿಂದ ಮತ್ತೊಂದನ್ನು ತೆಗೆದು ಓದಿದ. ಅದರಲ್ಲಿ "ನಿನ್ನ ಸ್ಪರ್ಶವಿಲ್ಲದೆ ನಾನು ಬದುಕಲಾರೆ" ಎಂದು ಬರೆಯಲಾಗಿತ್ತು. ಕೋರ್ಟಿನಲ್ಲಿ ಹೇಗೆ ಆತ ತನ್ನ ಮುಖದ ಮೇಲೆ ಯಾವ ಭಾವನೆಯೂ ಇಲ್ಲದೆ ಕೂರುತ್ತಿದ್ದನೋ, ಹಾಗೆಯೇ ಯಾವ ಭಾವನೆಯೂ ಇಲ್ಲದೆ ಮಹಿಳೆಯ ಶವವನ್ನು ದಿಟ್ಟಿಸಿ ನೋಡಿದ. ಪ್ರತಿಮೆಯಂತೆ ತಟಸ್ಥವಾಗಿ ನಿಂತಿದ್ದ ನನ್‌ಳ ಕಣ್ಣಂಚಿನಲ್ಲಿ ಕಣ್ಣೀರು ತುಂಬಿಕೊಂಡು ಆತ ಏನು ಮಾಡುತ್ತಾನೆ, ಏನು ಹೇಳುತ್ತಾನೆ ಎಂದು ಕಾಯುತ್ತಿದ್ದಳು. ಆತ ಕಿಟಕಿಯ ಮುಂದೆ ನಿಂತು ಕತ್ತಲ ರಾತ್ರಿಯನ್ನು ಸುಮ್ಮನೆ ನೋಡುತ್ತಾ ನಿಂತ. ಆತ ಹಿಂದಿರುಗಿ ನೋಡಿದಾಗ ಆತನ ತಂಗಿ ಇನ್ನೂ ಮಂಚದ ಪಕ್ಕ ತಲೆ ಬಾಗಿಸಿ ನಿಂತಿದ್ದಳು. ಆದರೀಗ ಆಕೆಯ ಕಣ್ಣುಗಳು ಬತ್ತಿ ಹೋಗಿದ್ದವು. ಆ ಪತ್ರಗಳನ್ನೆಲ್ಲ ಅವಸರ ಅವಸರವಾಗಿ ಸಂಗ್ರಹಿಸಿ ಕಪಾಟಿನೊಳಗೆ ಎಸೆದ. ಮುಂಜಾನೆ ಆಗುತ್ತಿದ್ದಂತೆ ಟೇಬಲ್ ಮೇಲಿದ್ದ ಮೊಂಬತ್ತಿಯ ಬೆಳಕು ಕ್ಷೀಣಗೊಂಡಿತು. ತಾನು ಕೂತಿದ್ದ ಕುರ್ಚಿಯಿಂದ ಎದ್ದ ಮಗ, ಸತ್ತಿದ್ದ ತಾಯಿಗೆ ತನ್ನ ಈ ಇಬ್ಬರು ಕುಡಿಗಳೊಂದಿಗೆ ಇದ್ದ ನಂಟನ್ನು ನಿರ್ದಾಕ್ಷಿಣ್ಯವಾಗಿ ಕಡಿದು ಹಾಕುವ ತೀರ್ಪನ್ನು ಕೊಟ್ಟವನಂತೆ ಆಕೆಯ ಶವದತ್ತ ಕಣ್ಣುಹರಿಸದೇ "ಬಾ, ಹೊರಡೋಣ" ಎಂದ. ●

ತೊಟ್ಟು...

ಪ್ರಕೃತಿಯ ಈ ಮಹಾ ಆಲದಲ್ಲಿ
ತೊಟ್ಟು ಕಳಚಿದ ಹಣ್ಣು ನಾನು
ತೊಟ್ಟು ಕಳಚಿಕೊಂಡಷ್ಟು ಮಾತ್ರಕ್ಕೆ
ನಾನು ತಬ್ಬಲಿಯೇ?

ನಾನು ನೆಲಕ್ಕೆ ಬಿದ್ದ ಬೀಜ
ಈಗ ನನ್ನ ಸಂಬಂಧ
ನೆಲದವ್ವನ ಎದೆಯಲ್ಲಿ
ಇಳಿಯುತ್ತೇನೆ ಇನ್ನೂ.... ಆಳ ಪಾತಾಳ.

ಹೀರುತ್ತೇನೆ
ನೆಲ ಗಂಗೆಯ ಎದೆಹಾಲು
ನನ್ನ ಮೈಯಲ್ಲಿ ಪರಂಪರೆಯ
ಹುಣ್ಣುಗಾಯಗಳಿವೆ
ತಬ್ಬಿಕೊಂಡಿದ್ದೇನೆ ನೆಲದ ಮೈಯನ್ನು
ಬಿಗಿಯಾಗಿ... ಇನ್ನೂ ಬಿಗಿಯಾಗಿ

ಮಣ್ಣ ಕರುಳ ಬಳ್ಳಿಯಲ್ಲಿ
ಉಸಿರಿಡಿದು ಕೊಂಡಿದ್ದೇನೆ
ನೆಲಸೀಳಿ ನೆಲದೊಳಗಿನ
ಕತ್ತಲ ಕಣ್ಣು ತುಂಬಿಸಿಕೊಳ್ಳಲು

ಈಗ ಎಲೆ ಕಳಚಿ ಹೂವಾಗಿದ್ದೇನೆ.
ನನ್ನಲ್ಲಿ ಜವ್ವನೆಯ ರಸ ಉಕ್ಕುತ್ತಿದೆ
ಮತ್ತೆ ಕಳಚಿಕೊಳ್ಳುತ್ತೇನೆ ಹಣ್ಣಾಗಿ
ನೆಲಕ್ಕೆ ಉದುರಲು.

● ಗಂಗಪ್ಪ ತಳವಾರ





ನಂಜುಂಡಸ್ವಾಮಿನೇ ಇದ್ದಿದ್ರೆ ರೈತರ ಮುಟ್ಟಕ್ಕಾಯಿತ್ತೇ?

ಹೆತಾತ್ತನೆ ನೋಡ ಮುಟ್ಟಕೊಂದಿದ್ದೂ ಅಲ್ಲದೆ ದಾಳಿದ್ದ ಹರಿ ನೆನೆಯುವಂತೆ ಸುರಿದ ಸೋನೆ ನೆಯಿಂದ ರೋಸಿದ ಕಾಳಮಾವ.

"ಥೂ ಇದರ ಮನಿಯಾಳಾಗ. ಈ ಹರಿಗೆದಿಸಿ ನೆಯ ಯಾರಪ್ಪ ಕರದೋರು. ನಾವ್ಗೊಂದು ದಿದ್ರೆ ಇದೊಂದು ಮಾಡ್ತದಲ್ಲ ಹೇಳೂ"

ಕಟ್ಟೆಪುರಾಣ

▸ಬಿ. ಚಂದ್ರೇಗೌಡ

ವ. ಅದಕ್ಕೆ ಉಗ್ರಿ,

"ದೇಸದ ಹವಾಮಾನಕ್ಕೂ ನಿನ್ನ ಬ್ಯಾಸಾಯಕ್ಕೂ ಬಂಧ ಇಲ್ಲ ಕಣಮಾವ. ಕಾಳೇಗೌಡ ರಾಗಿ ದು ಮ್ಯದೆ ಹಾಕ್ಯವುನೆ, ಈಗ ಹುಯ್ಯಬಾರದು ಗ್ಯಾನ ಮಳಿಗಿರಬೇಕಿತ್ತು ಅನ್ನಂಗೆ ಮಾತಾಡ್ತಿ ದು."

"ಇಸಿಸಿ. ಕಾಲ ಇರದ್ಯಾಕ್ಲ. ಕಾಲಕ್ಕೆ ತಕ್ಕಂಗೆ ಮಾನ ಬದ್ಲಾಗಬೇಕೊ, ಮಳೆ ಬಂದು ಯ್ಯಬೇಕೊ ಹೇಳು" ಎಂದು ಕಾಳಮಾವ ಂಡುವಾದ ಮಾಡಿದ.

"ನೀನೇಳದು ನಿನ್ನ ಭಾಗಕ್ಕೆ ಸರಿ ಇರಬವುದು ಮಾವ. ಆದ್ರೆ ರೈತ ಬಂದದ್ದನ್ನಲ್ಲ ಅನುಭವುಸ್ಲೇ ಬು. ಇಲ್ಲಿ ವಲಕೂದು ಮ್ಯದೆ ಹಾಕನ ಅಂತ ದ್ರೆ ಮಳೆ ಬಂದು ಹರಿಕೆಡುಸ್ತ ಕುಂತದೆ. ಚಾಮರಾಜನಗರದಲ್ಲಿ ರೈತರು ನ್ಯಾಯ ಕೊಡಿ ತ ಕೇಳಿದ್ರೆ ಲಾಟಿ ತಗಂಡು ರುಬ್ಬಿ ಕಳಿಸ್ಯವುರೆ. ರಿಗೇಳನಾ?"

"ಯಾರ್ರ್ಲ ರುಬ್ಬಿರೋರು?"

"ಇನ್ಯಾರು, ಎಡೂರಪ್ಪನ ಪೊಲೀಸ್‌ನೋರು ಮಾವ. ವಡದವುರೆ ಅಂದ್ರೆ ಅಂಗಿಂಗಲ್ಲ. ಪ ತಲಿಯಲ್ಲಾ ತೂತುಬಿದ್ದು, ಮೈಲ್ಯಲ್ಲ ಮಿಂಡೆ ಬರಂಗೆ ವಡದವುರೆ."

"ಅಯ್ಯೋ ಅವುರ ಮನಿಯಾಳಾಗ. ಅದ್ಯಾಕ್ಲ ಡುದ್ರು?" ಎಂದು ಜುಮ್ಮಿ ಚಗರಿದಳು.

"ಯಾಕಂಗೆ ವಡುದ್ರು ಅಂದ್ರೇ ಇವತ್ತು ಲೋರ್ಯಾರಿದ್ದರೇಳು? ಆಗೇನೊ ನಂಜುಂಡಸ್ವಾಮಿ, ವರೇಶ್, ರುದ್ರಪ್ಪ, ಅವುರ್ಯಲ್ಲ ಇದ್ರು. ೀಸ್‌ನೋರು ರೈತರಿಗೆ ವಡಿಯಕ್ಕೆ ಹೆದ್ರಿಕತಿದ್ರು. ಆದ್ರಿವತ್ತು ಅಂಗಿದ್ವತೇ? ಎಡೂರಪ್ಪ ಹೇಳಿದ್ವೇ ತಡ ದನಾ ಬಡದಂಗೆ ಬಡದವುರೆ."

"ಎಡೂರಪ್ಪನೆ ಹೇಳಿದ್ವನೆ?" ಎಂದ ಕಾಳಮಾವ ಆಚ್ಚರಿ ದನಿಯಲ್ಲಿ.

"ಊ ಕಣಮಾವ."

"ತರಿಯಕ್ಕೆ ಹ್ಯಗಲಮ್ಯಾಲೆ ಹಸುರು ಶಾಲಾಯ್ಕಂಡು ಪ್ರಮಾಣವಚನ ತಗಂಡನೆ!"

"ಹಸುರು ಶ್ಯಾಲು ಅಂದ್ರೆ ಅದು ಪ್ಯೂರ್ ಹಸುರು ಶಾಲಾಗಿರಲಿಲ್ಲ ಕಣಮಾವ. ಕತ್ಲೆವಳಗೆ ಹಿಡಕಂಡು ನೋಡಿದ್ರೆ ಕೇಸರಿ ಕಲರ್ ಕಾಣದಂತೆ. ಆದ್ರೆ ಬಿಸ್ಲಿಗಿಡದ್ರೆ ತಿಳಿಹಸುರು ಬಣ್ಣಕೆ ತಿರಿಕಳದಂತೆ. ಅದು ನಮ್ಮ ಜನಕೆ ಗೊತ್ತಾಗಲಿಲ್ಲ."

"ನಿಜವೇನ್ಲ ನೀನೇಳದು?"

"ನಿಜ ಕಣೆ. ಎಡೂರಪ್ಪ ಪ್ರಮಾಣವಚನ ತಗಳುವಾಗ ರೈತರ ಹಸುರುಶಾಲನೆ ಹಾಯ್ಕಬೇಕು ಅನ್ನಿಸಿದ್ರೆ ನಿಜವಾದ ರೈತರ ಶಾಲನೆ ಹಾಯ್ಕಬವುದಿತ್ತು. ಆದ್ರೆ ಅಂಗೆ ಮಾಡ್ಳಿಲ್ಲ. ಡಬಲ್ ಕಲರ್ ಶಾಲಾಯ್ಕಂಡಿದ್ದೇ ಇವುತ್ತು ರೈತರು ಆಸುಪತ್ರೆ ಸೇರಂಗ ವಡಿಸ್ಯವುನೆ."

"ರೈತರ ಮ್ಯಾಲೆ ಇವುನ ದಾಳಿ ಮಾಡ್ತಯಿರದ ನೋಡಿದ್ರೆ ಗುಂಡೂರಾಯನ ಕಾಲ ಗೆಪ್ತಿಗೆ ಬತ್ತಾ ಅದೆ ಕಂಡ್ಳ" ಎಂದ ಸೀರ.

"ನಿನಗೊಬ್ಬನಿಗೇ ಅಲ್ಲ ಯಲ್ಲಾರಿಗೂ ಅಂಗನ್ನುಸ್ತಾ ಅದೆ ಕಣೊ. ಡಿಸಿನೆ ಕೈಲಿ ದ್ವಣ್ಣೆ ಹಿಡಕಂಡು ರೈತರ ಓಡಿಸ್ಯಾಡ್ಯವುನೆ ಅಂದ್ರೆ ಲ್ಯಕ್ಕಹಾಕು."

"ನೋಡು ಮತ್ತೆ ಇನ್ನೆಂಥಾ ದಿ.ಸಿ. ಇದ್ದನವುನು."

"ಅವುನು ಡಿ.ಸಿ. ಅಲ್ಲ ಚಿಗಪ್ಪ ಪಿ.ಸಿ." ಎಂದುಕೊಂಡು ವಾಟಿಸ್ಸೆ ಬಂದ.

"ಮತ್ತೆ ದಿ.ಸಿ. ಅಂತ ಹೇಳ್ತರಲ್ಲಾ?"

"ಡಿ.ಸಿ.ನೆ ಹೌದು. ಆದ್ರೆ ಒಬ್ಬ ಡಿ.ಸಿ. ವಳಗಡೆ ಎಸ್ಪಿಯಿಂದ ಹಿಡುದು ಪಿ.ಸಿ.ವರೆಗೂ ಇರತರೆ ಅಂದ್ರೆ ಇಡೀ ಜಿಲ್ಲೆ ಪವರ್ ಡಿ.ಸಿ. ಕೈಲಿರತದೆ. ಈ ಚಾಮರಾಜನಗರದ ಡಿ.ಸಿ. ಭಾಳ ಹಿಂದೆ ಪಿ.ಸಿ.ಯಾಗಿ ಜನ ಚಚ್ಚಿರಬೇಕು. ಅದ್ಕೆ ಪೊಲೀಸ್‌ನೋರ ಕೈಲಿದ್ದ ಲಾಟಿ ಈಸಗಂಡು ಇಳ್ಳೆಕೋಲಾಡೋನಂಗೆ ಓಡಾಡಿ ಕಾಂಪ್ಲಿಕೇಶನ್ ಮಾಡಿಕಂಡವುನೆ."

"ರೈತರ ಮುಟ್ಟದ ಸರಕಾರ ಉಳದವೇ?" ಎಂದ ಕಾಳಮಾವ.

"ನಿಜ ದ್ವಡಪ್ಪ, ಈ ಹಿಂದೆ ಸರಕಾರ ಬಲಿಯಾಗಿರದ ನೋಡಿದ್ರೆ ಯಲ್ಲಾರಿಗೂ ಗೊತ್ತಾಯ್ತದೆ. ಎಡೂರಪ್ಪನಿಗೆ ಯಾಕೆ ಗೊತ್ತಾಯ್ತಯಿಲ್ಲ ಅಂತ."

"ಎಡೂರಪ್ಪ ತಾನೆ ಯಾವ ಯಾವ ಕಡೆ ಅಂತ ಬೇಯ್ತನೊ. ಆ ಕಡೆ ರೆಡ್ಡಿಗಳು ಪವರ್ ಕಿತಗಂಡವುರೆ, ಈ ಕಡೆ ತಿರಗ ಅತೃಪ್ತರ್ಯಲ್ಲ ಸೇರಿಕಂಡು ಹಕನಾಯಿಸಿಗತ್ತಾಯಿದ್ದರಂತೆ. ಎಮ್ಮೆಲ್ಸಿ ಯಲಕ್ಷನ್ ಬ್ಯಾರೆ ಬಂದದೆ. ಇನ್ನ ಕುಮಾರಣ್ಣ ಸರಕಾರನೆ ಬದ್ಲಾಸಿ ಸಿದರಾಮಣ್ಣನ್ನ ಮುಖ್ಯಮಂತ್ರಿ ಮಾಡ್ತನಂತೆ" ಎಂದು ಉಗ್ರಿ ಹೇಳುವಾಗ ಕಾತುರಗೊಂಡ ಕಾಳಮಾವ,

"ನಿಜವೇನ್ಲ ನೀನು ಹೇಳ್ತಾಯಿರದು?" ಎಂದ.

"ವಾಟಿಸ್ಸನೆ ಕೇಳು ಮಾವ."

"ಅದು ಸರಿಯಾಗದಿಲ್ಲ ಬುಡು."

"ಬುದ್ದಿಲ್ಲಾ ಅಂದ್ರೆ ರೆಡ್ಡಿಗಳು ಇಡೀ ಕರ್ನಾಟಕನೆ ಹಾಳು ಮಾಡಿ ದೂಳುಯ್ತರಲ್ಲಾ ಹೇಳು" ಎಂದಾಗ ಕಾಳಮಾವ ಸುಮ್ಮನಾದ. ಆಗ ವಾಟಿಸ್ಸೆ,


"ದೇವೇಗೌಡ್ರೂ ಒಂದು ಮಾತ ಯಸ್ತವುರೆ ದ್ವಡಪ್ಪ. ಅದ ಕೇಳಿ ಸಿದರಾಮಯ್ಯನ ಕಡಿಯೋರಿಗೆ ಕೂದಲ್ಯಲ್ಲ ನ್ಯಟ್ಟಗಾಗಿದ್ದವಂತೆ ಪಾಪ."

"ಪಾಪ ಅಂತ ಯಾಕಂತಿಲ?" ಎಂದಳು ಜುಮ್ಮಿ.

"ಅಲ್ಲಾ ಕಣಕ್ಕ ದ್ಯಾವೇಗೌಡ್ರು ಮಾತ್ನ ನಂಬಕ್ತಿಯಲ್ಲಾ, ಅವುನ ಪ್ಲ್ಯಾನೇನು ಗೊತ್ತೆ ಈಗ?"

"ಏನೂ?"

"ಸಿದರಾಮಯ್ಯನ್ನ ಎತ್ತಿಡಿಯದು. ಆಗ ಕಾಂಗ್ರೆಸ್ಸಲ್ಲೇ ಒಂದು ಗುಜುಗುಂಪು ತಯಾರಾಯ್ತದೆ. ಕ್ರಮೇಣ ಅವು ಜೋರಾಗಿ ಮಾತಾಡ್ತವೆ. ಅಂದ್ರೆ ಸಿದರಾಮಯ್ಯನೆ ಯಾಕಾಗಬೇಕು, ಮೂಲ ಕಾಂಗ್ರೆಸಿಗರಲ್ಲೆ ಯಾರ್ನಾರ ಮಾಡಿ ಅನ್ನೋ ದನಿ ಜೋರಾಗಬವುದು. ಆಗ ದೇವೇಗೌಡ್ರು ಸ್ಮೈಲ್ ಮಾಡ್ತರೆ."



"ಅದು ನ್ಯಟ್ಟಗೇಳದಿಲ್ಲ ನೀನೆ ಹೇಳ್ಳೆ."

"ಸಿದರಾಮಯ್ಯ ಮುಖ್ಯಮಂತ್ರಿಯಾದ್ರೆ ನಮ್ಮದೇನು ತಕರಾರಿಲ್ಲ ಅಂದವುನೆ ಕುಮಾರಣ್ಣ."


"ಆ ಸುದ್ದಿ ಈಗ್ಯಾಕೆ. ಯಲಕ್ಸನ್ ಇನ್ನು ಮುಂದದಲವೆ."

"ಮುಂದದೆ ಸರಿ, ಆದ್ರೆ ಇವತ್ತು ಸರಕಾರವೇ ಇಲ್ದಂಗಾಗ್ಯದಂತೇ. ಅದ್ಕೆ ಈ ಸರಕಾರ ತಗದು ಆ ಸರಕಾರ ತರನಾ ಅಂತ ವಂಟವುರೆ."

"ಆಹಹ ನಿಜವಾಗ್ಲು ನೀನು ದ್ಯಾವೇಗೌಡನ ವಟ್ಟೆಲೆ ಹುಟ್ಟಬೇಕಾಗಿತ್ತು ಕಣೊ."

"ಹುಟ್ಟಿದ್ರೆ ರಮೇಶ್‌ನಂಗೊ, ಬಾಲಕೃಷ್ಣನಂಗೋ ವೇಸ್ಟಾಯ್ತಿದ್ದೆ ಕಣೊ. ಈಗಿರದೆ ಸರಿ" ಎಂದು ವಾಟಿಸ್ಸೆ ಹೊರಟ.

ರ್ಮಲ್ ವರ್ಮ



ಮೊನ್ನೆ ಖ್ಯಾತ ಹಿಂದಿ ಲೇಖಕ ನಿರ್ಮಲ್ ವರ್ಮ ಬಂದಿದ್ದರು. ಗೆ ಬಹಳ ಹಿಂದೆ ಪರಿಚಯವಾದ ವ್ಯಕ್ತಿ ಈತ. ಅರವತ್ತು ಮೂರು ದ, ಸುಮಾರು ಎಂಭತ್ತರ ವೃದ್ಧರಂತೆ ಕಾಣುವ, ಹಿಂದಿಯಲ್ಲಿ ನವ್ಯಕಥಾ ರೂಪಿಸಿದ ವ್ಯಕ್ತಿ ಈತ. ಕಮ್ಯುನಿಸ್ಟ್ ಆಡಳಿತ ಹೊಂದಿದ್ದ ಸ್ಲೊವಾಕಿಯಾದಲ್ಲಿ ಅನೇಕ ವರ್ಷ ಇದ್ದರು. ಅಲ್ಲಿ ತಮ್ಮ ಪ್ರೀತಿಯ ಖಕರನ್ನು ಭಾಷಾಂತರಿಸಿದರು. ಅವರು ಈ ಚಟುವಟಿಕೆಯಲ್ಲಿ ತಗಿದ್ದಾಗಲೇ ಕಮ್ಯುನಿಸಂ ವಿರುದ್ಧ ಬಂಡಾಯ ಶುರುವಾಗಿತ್ತು. ಸರ್ಕಾರಿ ತ್ರ ಕುಸಿಯತೊಡಗಿತ್ತು. ವರ್ಮ ಅಲ್ಲಿಂದ ಹೊರಡುವಷ್ಟರಲ್ಲಿ ಚೋವ್ ಚೆಕಾಸ್ಲೊವಾಕಿಯಾಕ್ಕೆ 'ಸ್ವಾತಂತ್ರ್ಯ' ಕೊಟ್ಟು ಕಮ್ಯುನಿಸಂ ದು ಬಿತ್ತು, ಎಕ್ಲಾವ್ ಹ್ಯಾವೆಲ್ ಪ್ರಧಾನಿಯಾಗಿ ಆಯ್ಕೆಗೊಂಡ.


ನನಗೆ 'ಮಾಯಾದರ್ಪಣ'ದಂಥ ಸರ್‍ರಿಯಲಿಸ್ಟಿಕ್ ಕಾದಂಬರಿ ಬರೆದ ಮ್ಯುನಿಸ್ಟ್ ವರ್ಮನಿಗಿಂತ ಹ್ಯಾವೆಲ್ ಬಗ್ಗೆ ಹೆಚ್ಚು ಕುತೂಹಲ; ಕಣ್ಣುಮುಚ್ಚಿಕೊಂಡು ಹಾಲು ಕುಡಿಯುತ್ತಿದ್ದ ಈ ಮುಹಂಥ ಲೇಖಕರ 'ಧರ್ಮಸಂಕಟ'ದಲ್ಲಿ ಹೆಚ್ಚು ಆಸಕ್ತಿ. ಹ್ಯಾವೆಲ್ ನಾಟಕಕಾರ; ಶಾಂತಿಪ್ರಿಯ; ಮೊನ್ನೆ ಬರ್ಮಾದ ಳಿಗೆ ನೊಬೆಲ್ ಬಹುಮಾನ ಬರುವಲ್ಲಿ ಆತ ವಹಿಸಿದ ಪಾತ್ರ ದೊಡ್ಡದು. ಈತ ಎಂಥವನು? ಎಂಥ ನಾಟಕಕಾರ? ು ಕೇಳಿದೆ. "ಮಹಾ ಧೈರ್ಯವಂತ-ಪ್ರಚಂಡ ರಾಜಕಾರಣಿ" ಅಂದರು ವರ್ಮಾ. "ಆತ ನಾಟಕಕಾರನಾಗಿ ನೊಬೆಲ್ ಹುಮಾನ ಪಡೆಯಬಹುದೋ, ರಾಜಕಾರಣಿಯಾಗಿಯೋ?" ಅಂತ ಕೇಳಿದೆ. ವರ್ಮಾ ಅವರಲ್ಲಿ ಉತ್ತರವಿರಲಿಲ್ಲ. ಸ್ಲೊವಾಕಿಯಾದ ಬದಲಾವಣೆ ಒಳ್ಳೆಯದು ಅನ್ನಿಸುತ್ತಾ?" ಅಂದೆ. ವರ್ಮಾ ಬಸಿಯಾದರು. ಗಟ್ಟಿಯಾಗಿ ಹೇಳಿದರು. ಂದಿತ ಅಲ್ಲ! ಅಲ್ಲಿಯ ಬದಲಾವಣೆ ಒಳ್ಳೆಯದಲ್ಲ!"

"ಏಕೆ?"

"ಮುಖದ ವಿಷಯವೇನೆಂದರೆ, ಮನುಷ್ಯ ಕಮ್ಯುನಿಸಂನಿಂದಲೂ ಪಾಠ ಕಲಿಯೋಲ್ಲ, ಬಂಡವಾಳಶಾಹಿಯ ಕೆಡುಕನ್ನು ಕಲಿಯೋಲ್ಲ" ಅಂದರು.

ಆದರೆ ಒಂದು ಮಾತು ನಿಜ. ಬಂಡವಾಳಶಾಹಿ ಲೇಖಕರು ಸ್ವಸ್ತುತಿಯಿಂದ ಬೀಗುತ್ತಿದ್ದಾರೆ; ವಾಮಪಂಥದ ಖಕರು ಗೊಂದಲಗೊಂಡಿದ್ದಾರೆ.

ಬೂದಿಯಾಗುವವರೆಗೆ!



ಮರೆಯುವ ಮುನ್ನ

▸ಪಿ.ಲಂಕೇಶ್

ಮಾತಿಗೆ ಮಾತು ಬೆಳೆದು ಜೊತೆಗಿದ್ದ ಮಿತ್ರರೊಬ್ಬರು ಒಂದು ಜಾನಪದ ಕತೆ ಹೇಳಿದರು:

ಒಂದಾನೊಂದು ಕಾಲದಲ್ಲಿ ಒಬ್ಬ ರಾಜ ತನ್ನ ಪ್ರಜೆಗಳ ಜೀವನ ವಿಧಾನವನ್ನು ಖುದ್ದು ನೋಡಲು ಹೊರಟ. ಪಟ್ಟಣದ ಬಡಾವಣೆಯೊಂದರಲ್ಲಿ ಸಾಗುತ್ತಿದ್ದಾಗ ಒಂದು ಗುಡಿಸಲ ಬಾಗಿಲು ತೆರೆದಿತ್ತು. ಸುಮಾರು ಎಪ್ಪತ್ತು ವರ್ಷದ ಒಬ್ಬ ಮುದುಕ ಮತ್ತು ಮುದುಕಿ ಗಾಢ ಪ್ರೇಮದಲ್ಲಿ ಮೈಮರೆತಿದ್ದರು. ದೊರೆ ಬಂದದ್ದೂ ಅವರಿಗೆ ಗೊತ್ತಾಗಲಿಲ್ಲ. ಯಾರೂ ಅವರ ಪ್ರೇಮಕ್ಕೆ ಭಂಗ ತರಲಿಲ್ಲ. ರಾಜ ಖಿನ್ನವಾಗಿ ಅರಮನೆಗೆ ಬಂದ.

ಯೋಚಿಸಿ ಆ ಮುದುಕ ಮತ್ತು ಮುದುಕಿಗೆ ಹೇಳಿಕಳುಹಿಸಿದ. ಮುದುಕ ಒಂದು ಹಿಡಿ ಉಪ್ಪು, ಒಂದು ಹಿಡಿ ಮೆಣಸಿನಕಾಯಿ ಪುಡಿ ತಂದಿದ್ದ. ಮುದುಕಿ ಒಂದು ಹಿಡಿ ಬೂದಿ ತಂದಿದ್ದಳು.

ದೊರೆ ಹೇಳಿದ: "ನಿಮಗೆ ಸಾಕಷ್ಟು ವಯಸ್ಸಾಗಿದೆ, ಆದರೂ ಲಜ್ಜೆಗೆಟ್ಟು ಪ್ರೇಮಿಸುತ್ತಿದ್ದೀರಿ. ಬಾಗಿಲು ಹಾರು ಹೊಡೆದುಕೊಂಡು ಮೈಮೇಲೆ ಎಚ್ಚರವಿಲ್ಲದೆ ಸಂಭೋಗದಲ್ಲಿ ಮುಳುಗಿದ್ದೀರಿ. ಇದಕ್ಕೆ ಏನು ಹೇಳುತ್ತೀರಿ?"

ಮುದುಕ ಹೇಳಿದ, "ಸ್ವಾಮಿ, ನನ್ನ ಕೈಯಲ್ಲಿರುವ ಉಪ್ಪು, ಖಾರ ನೋಡಿ. ಇದನ್ನು ತಿನ್ನುವವರೆಗೆ ನನ್ನಿಂದ ಸಂಭೋಗಿಸದೆ ಇರಲು ಸಾಧ್ಯವಿಲ್ಲ"

ಮುದುಕಿ ಹೇಳಿದಳು, "ಸ್ವಾಮಿ ನೀವು ಏನೇ ಹೇಳಿ. ನನ್ನ ಕೈಯಲ್ಲಿರುವುದನ್ನು ನೋಡಿ. ನಾನು ಸುಟ್ಟು ಬೂದಿಯಾಗುವವರೆಗೆ ಅದನ್ನು ಬಿಡಲಾರೆ!"


ಇದನ್ನು ಕೇಳಿದ ರಾಜ ಏನು ಹೇಳುವುದೆಂದು ತೋಚದೆ, "ಸರಿ, ಹೋಗಿ-ಬಾಗಿಲು ಹಾಕಿಕೊಂಡು ಏನಾದರೂ ಮಾಡಿಕೊಳ್ಳಿ" ಅಂದು ಕಳಿಸಿದ.

-ಫೆಬ್ರವರಿ 16, 1992

ಜಲಬಾಧೆ ಮಲಬಾಧೆಗೂ ಮುಹೂರ್ತ

ಯಡ್ಯೂರಪ್ಪನವರಿಗೆ ಪ್ರಜಾಪ್ರಭುತ್ವದಲ್ಲಿ ಅಪಾರ ನಂಬಿಕೆ. ಯಾವುದೇ ಪ್ರಮುಖ ವಿಷಯ ಬಂದರೂ ಅದು ವಿಧಾನಮಂಡಲದಲ್ಲಿ ವಿಪುಲ ಚರ್ಚೆಗೆ ಒಳಗಾಗಬೇಕು ಅನ್ನೊ ಆಸೆ ಇಟ್ಟುಕೊಂಡಿರುವವರು. ಅದಕ್ಕೇ ನವೆಂಬರ್‌ನಲ್ಲಿ ಅಧಿವೇಶನ ಕರೀತಿನಿ ಅಂದ್ರು. (ನರಶಕ್ತಿ ಬುದ್ಧಿಶಕ್ತಿಗಿಂತಲೂ ಮಿಗಿಲಾದುದು ಎಂದೇ ಅರ್ಥೈಸಿಕೊಂಡಿರುವ ಸಿ.ಟಿ. ರವಿ ಮಹಾನುಭಾವರು ಅಧಿವೇಶನ ಕರೆಯುವುದು ಸರ್ಕಾರ ಅಲ್ಲ ಎನ್ನುವ ಮಾತು ಹೇಳಿದ್ದಾರೆ. ಸಂವಿಧಾನದ ಅರಿವಿನ ಪ್ರತೀಕ ಇದು ಅನ್ನಬಹುದು!) ಏಪ್ರಿಲ್ ತಿಂಗಳಿಂದಲೇ ಪಕ್ಷ ವಾದ್ಯಗಳಿಗೆ ಶೃತಿ ನೀಡಲು ಪ್ರಾರಂಭಿಸಿದರು. ಇದರ ನಡುವೆ ತುರ್ತು ಪರಿಸ್ಥಿತಿ ಉದ್ಭವಿಸುತ್ತಿತ್ತು, ಉದಾಹರಣೆಗೆ ಸಂಸ್ಕೃತ ವಿಶ್ವವಿದ್ಯಾನಿಲಯದ ಸ್ಥಾಪನೆ. ಸದನ ನಡೆಯುವವರೆವಿಗೂ

ಅಣಕ



▸ ಎಚ್.ಎಲ್. ಕೇಶವಮೂರ್ತಿ

ಕಾಯುತ್ತಾ ಕುಳಿತಿದ್ದರೆ ವಿಶ್ವವಿದ್ಯಾನಿಲಯವನ್ನೇ ಆಸೆಗಣ್ಣುಗಳಿಂದ ನೋಡುತ್ತಿರುವವರ ಪಾಡು ನಾಯಿಪಾಡು ಆಗುವುದಿಲ್ಲವೆ. ರಾಜ್ಯಪಾಲರ ಒಪ್ಪಿಗೆಗಾಗಿ ಮಸೂದೆಯನ್ನು ಕಳುಹಿಸಿದರು. ಹೀಗೇ ಇಂತಹ ತುರ್ತು ಅಗತ್ಯಗಳಿಗೆ ಮುಕ್ತಿ ತೋರಲು ಹಲವು ಕ್ರಮಗಳು ಅನಿವಾರ್ಯ ಆಗಿತ್ತು, ಆದರೂ ಅಧಿವೇಶನದ ಜಪ ನಿರಂತರವಾಗಿ ಮುಂದುವರೆಯುತ್ತಲೇ ಇತ್ತು. ಗಣಿ ಹಗರಣ ಅಂದರೆ ಸಾಕು. 'ಸದನದಲ್ಲಿ ಸೂಕ್ತ ಉತ್ತರ ನೀಡುವೇನು' ಅನ್ನುವರು. ರೈತರ ಮೇಲಿನ ಗೋಲಿಬಾರ್‌ಗೂ ಇಂತಹದ್ದೇ ಉತ್ತರ. ವಿದ್ಯುತ್ ಕೊರತೆ ಮಾತೆತ್ತಿದ್ದರೆ ಸದನ ನೆನಪು ಮಾಡುವರು. ಕೊನೆಗೆ 'ಸಾರ್ ಟಾಯಿಲೆಟ್‌ನಲ್ಲಿ ಸಮಾಧಿಸ್ಥರಾಗಿದ್ದೀರಲ್ಲ, ಮಲಬದ್ಧತೆ ಕಾಟವೆ' ಎಂದು ಪ್ರಶ್ನಿಸಿದರೂ ಅದಕ್ಕೂ 'ಸದನದಲ್ಲಿ ಉತ್ತರಿಸುತ್ತೇನೆ' ಎಂದೇ ಹೇಳುತ್ತಿದ್ದರೇನೋ. ಯಾಕೆಂದರೆ ಸದನ ಅಂದರೆ ಅಷ್ಟೊಂದು ಗೌರವ ಅವರಿಗೆ!

ನವೆಂಬರ್ ತಿಂಗಳು ಬಂದಿತು. ಅಧಿಕಾರಸ್ಥರಿಗೆ ಇಂತಹದ್ದೇ ಸಂಕಟ ಎಂದು ಹೇಳಲಾಗುವುದಿಲ್ಲವಲ್ಲಾ. ಹೋಯಿತು. ವಿಧಾನಮಂಡಳದ ಅಧಿವೇಶನ ಕರೆಯಲಿಲ್ಲ, ಆದರೂ ಸದನ ಜಪ ನಿಲ್ಲಿಸಲಿಲ್ಲ. ಕೊನೆಗೂ ಡಿಸೆಂಬರ್ 14 ರಂದು ಅದಕ್ಕೆ ಕಂಕಣ ಕೂಡಿ ಬಂದಿತು. ಆಹಾ ಈಗ ನೋಡಿ ಯಡ್ಯೂರಪ್ಪನವರ ಬತ್ತಳಿಕೆಯಿಂದ ಎಂತೆಂತಹ ಬಾಣಗಳು ಹೊರಬರುತ್ತೆ ಅನ್ನೋದನ್ನ ಅನ್ನಬೇಕು. ಬತ್ತಳಿಕೆ ಎತ್ತುವಷ್ಟರಲ್ಲೇ ಖೇಲ್ ಕಲಾಸ್ ನಾಟಕ್ ಬಂದ್ ಆಗಿಹೋಯಿತು!

ಒಂದು ದಿನದ ಅಧಿವೇಶನ ಅಂದರೆ ಸುಮಾರು ನಲವತ್ತು ಲಕ್ಷ ರೂಪಾಯಿ ಖರ್ಚಾಗುತ್ತಂತೆ. ಸದನ ಪ್ರಾರಂಭ-ಮುಕ್ತಾಯ ಅನ್ನೋಕೆ ಇಷ್ಟೊಂದು ಸಾರ್ವಜನಿಕರ ಹಣ/ಖರ್ಚು ಮಾಡಬೇಕಿತ್ತು ಅಂತ ಕೆಲವರು ಕುಹಕ ಆಡ್ತಿದಾರೆ. ಸದನ ಅಂದ್ರೇನು, ಅದರ ಸದಸ್ಯರು ಅಂದ್ರೇನು... ನಲವತ್ತು ಲಕ್ಷ ಜುಜುಬಿ... ನಲವತ್ತು ಸಾವಿರ ಕೋಟಿ ಮಂಜೂರು ಮಾಡುವ ಅಧಿಕಾರ ಇದೆ ಎಂದು ಹಿರಿಯ ಮುತ್ಸದ್ದಿ ಎಂ.ಸಿ. ನಾಣಯ್ಯ ಅಪ್ಪಣೆ ಕೊಡಿಸಿದ್ದಾರೆ. ಸಾರ್ವಜನಿಕ ಹಣಾನ ಬಲೇ ಎಚ್ಚರಿಕೆಯಿಂದ ಖರ್ಚು ಮಾಡಬೇಕು, ಒಂದೊಂದು ಪೈಸೆಗೂ ಲೆಕ್ಕ ಇಡಬೇಕು ಅಂತ ಹೇಳ್ತಿದ್ನಲ್ಲ ಆ ಮುದುಕ, ಹಿಂಗೆ ಮಾತಾಡೇ ಆಡೇ ಗುಂಡು ಹೊಡೆಸಿಕೊಂಡು 'ಹೇರಾಮ್' ಆದ್ನಲ್ಲ ಅವನ ವಂಶಜರಲ್ಲ ಬಿಡಿ ಇವರು.

ವಿಧಾನ ಪರಿಷತ್ತಿನ ಚುನಾವಣೆಗಳು ಹತ್ತಿರ ಬಂದಿದ್ದು ಹಲವು ಶಾಸಕರು ಅದರಲ್ಲಿ ತೊಡಗಿಸಿಕೊಂಡಿರುವುದರಿಂದ ಸದನ ನಡೆಸುವುದು ತರವಲ್ಲ ಎಂದು ಮುಂದೂಡಲಾಯಿತೆಂದು ಹೇಳಲಾಗುತ್ತಿದೆ. ಆದರೆ ಇದು ಸುಳ್ಳಂತೆ. ಹರದನಹಳ್ಳಿ ದೇವೇಗೌಡ ರೇವಣ್ಣ ಇದಾರಲ್ಲ ಅದೇ ನಮ್ಮ ಮೇಧಾವಿ ರಾಜಕಾರಣಿ, ಅವರ ಪ್ರಕಾರ ಇದಕ್ಕೆ ಬೇರೆಯದೇ ಕಾರಣ ಇದೆಯಂತೆ. ಅದು ಏನಪ್ಪಾ ಅಂದರೆ ಈ ಬಿಜೆಪಿ ಮುಂಡೇಮಕ್ಕಳಿಗೆ ಜ್ಯೋತಿಷ್ಯ ಜ್ಞಾನವೇ ಇಲ್ಲದೆ ಸರಿಯಾದ ಮುಹೂರ್ತದಲ್ಲಿ ಸದನ ಪ್ರಾರಂಭ ಮಾಡಿಲ್ಲವಂತೆ. ಸದನ ಪ್ರಾರಂಭ ಆದದ್ದು ಸೋಮವಾರ ಬೆಳಿಗ್ಗೆ ಹತ್ತು ಗಂಟೆಗೆ ಅಲ್ವಾ. ಅದು ಯಮಗಂಡ ಕಾಲ! ಅದರ ಪ್ರಭಾವದಿಂದ ಸದನ ಮುಂದೂಡುವಂತಾಯಿತಂತೆ! ಅವರ ಮನೆಯ ಹೆಂಗಸರು ಮಕ್ಕಳಿಗೆ ಜಲಬಾಧೆ, ಮಲಬಾಧೆ ಇರಬಹುದಾ ಎಂಬುದು ಕೆಲವರ ಸಂಶಯವಾಗಿದೆ. ಯಾಕೆಂದರೆ ಜ್ಯೋತಿಷ್ಯ ರೋಗಿ ಅವರು ಉಚ್ಚೆ ಹುಯ್ಯಲು, ಕಕ್ಕಸ್ಸಿಗೆ ಹೋಗಲು ಮುಹೂರ್ತ ನಿಷ್ಕರ್ಷಿಸುತ್ತಾನೇನೋ... ಉಚ್ಚೆ ಮುಹೂರ್ತದಲ್ಲಿ ಉಚ್ಚೆ ಹುಯ್ಯಬೇಕು, ಕಕ್ಕಸು ಮುಹೂರ್ತದಲ್ಲಿ ಮಾತ್ರ ಕಕ್ಕಸ್ಸಿಗೆ ಹೋಗಬೇಕು ಅಂತಾವ ಎನ್ನುತ್ತಾರೆ ಅವರು. ಈ ಜನನಾಯಕನ ಮಿದುಳನ್ನು ವೈಜ್ಞಾನಿಕ ಪ್ರಯೋಗಕ್ಕೆ ಒಳಪಡಿಸಿದರೆ ಒಳಿತು. ಸಾಧ್ಯವಾದರೆ ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಿದರೆ ಬಲೇಕ್ಷೇಮ ಎಂದೂ ಹೇಳುತ್ತಾರೆ. ಯಾವುದು ಸರಿ, ಯಾವುದು ತಪ್ಪು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ, ಉತ್ತರಕ್ಕಾಗಿ ಸದನ ಪ್ರವೇಶ ಹಕ್ಕು ದೊರೆತವರನ್ನು ಸಂಪರ್ಕಿಸಿ ಎಂದು ಮಾತ್ರ ಸಲಹೆ ನೀಡಬಹುದಾಗಿದೆ.

ಒಂದು ದಿನದ ಅಧಿವೇಶನ ನಡೆಸಲು ಯಾವುದೋ ಬಲವತ್ತರವಾದ ಕಾರಣ ಇದ್ದಿರಲೇಬೇಕು ಎಂಬುದು ನನ್ನ ಖಚಿತವಾದ ನಂಬಿಕೆ. ಅದನ್ನು ತಿಳಿಯಲು ಜಾಸೂಸಿ ಕೆಲಸ ಮಾಡಿದೆ. ಆಗ ತಿಳಿದುಬಂದದ್ದೇನೆಂದರೆ.... ಅಂದಿನ ಕಲಾಪವನ್ನು ಸೂಕ್ಷ್ಮವಾಗಿ ಗಮನಿಸಿದರೆ... ಅಂದು ಅಗಲಿದ ಗಣ್ಯರಿಗೆಲ್ಲ ಶ್ರದ್ಧಾಂಜಲಿ ಅರ್ಪಿಸಲಾಯಿತು. ಈ ಗಣ್ಯರ ಆತ್ಮಗಳೆಲ್ಲ ಗುಣಗಾನ ಕೇಳುವವರೆವಿಗೂ ವಿಧಾನಸೌಧದ ಸುತ್ತಲೂ ಗಸ್ತು ಹೊಡೆಯುತ್ತಿದ್ದವು. ಗುಣಗಾನ ಕೇಳಿ ತೃಪ್ತಿಗೊಂಡ ಆತ್ಮಗಳು ಸ್ವರ್ಗದೆಡೆ ಮುಖ ಮಾಡಿದವು! ಮುಂದಿನ ಅಧಿವೇಶನದಲ್ಲೇ ಈ ಕಾರ್ಯ ನಡೆಸಬಹುದಿತ್ತಲ್ಲ ಎಂದರೆ... ಪಾಪ



ಅಲ್ಲಿಯವರೆಗೂ ಅವು ಅಂತರಪಿಶಾಚಿಗಳಾಗಿರಬೇಕಾಗುತ್ತಿತ್ತು...! ಈ ಪಿಶಾಚಿಗಳು ಒಂದು ದಿನದ ಕಲಾಪವನ್ನೇ ನುಂಗಿ ಹಾಕುತ್ತಾವಲ್ಲ ಅಂದರೆ ಅದು ಅವಕ್ಕೆ ನೀಡುವ ಗೌರವ!

ಹರಾಜು ಯಾವಾಗ?

ರೆಡ್ಡಿಗಳ ದಯೆ.

ಇದುವರೆವಿಗೆ ಹಣದ ಚಳಕ ಶಾಸಕರಿಗೆ ಮೀಸಲಾಗಿತ್ತು. ರೆಸಾರ್ಟ್‌ಗಳಲ್ಲಿನ ಮೋಜಿನ ಭಾಗ್ಯ ಸ್ಥಳೀಯ ಸಂಸ್ಥೆಗಳ ಸದಸ್ಯರಿಗೆ ಇರಲಿಲ್ಲ.

ಧನಕೋರ ಅನ್ಯಾಯ ಅಲ್ಲವೆ ಇದು?

ರೆಡ್ಡಿಗಳು ಅನ್ಯಾಯದಿಂದ ನೊಂದಿರಬೇಕು. ಬಳ್ಳಾರಿಯ ಸ್ಥಳೀಯ ಸಂಸ್ಥೆಗಳ ಸದಸ್ಯರಿಗೂ ಈ ಸೌಲಭ್ಯ ವಿಸ್ತರಿಸಿದರು. ಅವರನ್ನು ಕರೆತಂದು ಧಾರವಾಡದ ರೆಸಾರ್ಟ್‌ಗಳಲ್ಲಿ ಮೋಜು ಮಾಡಿಸಿದರು! ಆದರೆ... ಇದಕ್ಕೂ, ವಿಧಾನ ಪರಿಷತ್ತಿನ ಚುನಾವಣೆಗೂ ಯಾವುದೇ ಸಂಬಂಧ ಇಲ್ಲ ಅಂತಾರೆ ತತ್ವ ಆದರ್ಶಗಳ ಪಕ್ಷದ ಯಡ್ಯೂರಪ್ಪನವರು!

ಹಾಗಿದ್ದಲ್ಲಿ ಒಟ್ಟಿಗೆ ಯಾಕೆ ಇದ್ದಾರೆ?

ಯಾವುದೋ ಸಮಾರಂಭಕ್ಕೆಂದು ಬಂದವರು ಒಟ್ಟಿಗಿದ್ದಾರೆ!

ಧಾರವಾಡವೇ ಯಾಕೆ?

ಜಗದೀಶ್ ಶೆಟ್ಟರ ಅಭಯಹಸ್ತ ಇದೆ ಅಂತಲ್ಲ!

ಬಳ್ಳಾರಿ ಸಮಾರಂಭ ಧಾರವಾಡದಲ್ಲಿ ನಡೆಯಬಾರದ? ಇಲ್ಲಿ ನಡೆಯುವ ಸಮಾರಂಭಕ್ಕೆ ಬೇರೆಲ್ಲಿಗೋ ಹೋಗಲು ಆದೀತೆ?

ಇದನ್ನು ಅರಿಯಲಾಗದ ವಿಪಕ್ಷಗಳು ಚುನಾವಣಾ ಆಯೋಗಕ್ಕೆ ದೂರು ನೀಡಿದವು. ಆಯೋಗ ವಿಡಿಯೋ ಚಿತ್ರೀಕರಣ ಮಾಡಲು ರೆಸಾರ್ಟಿಗೆ ತೆರಳಿತು. ಆದರೆ.... ಬಳ್ಳಾರಿ ಸ್ಥಳೀಯ ಸಂಸ್ಥೆಗಳ ಸದಸ್ಯರು ಇರಲೇ ಇಲ್ಲ!

ಹೇಗೆ ಸಂಭವಿಸಿತು ಈ ಪವಾಡ?

ವಿಡಿಯೋ ಚಿತ್ರೀಕರಣದ ಸುದ್ದಿ ಅವರಿಗೆ ತಕ್ಷಣವೇ ತಲುಪಿತ್ತು! ಇದು ರೆಡ್ಡಿಗಳ ದಿವ್ಯದೃಷ್ಟಿ!

ಅದಿರಲಿ. ಯಡ್ಯೂರಪ್ಪ ಬಾಯಿಂದ ಹೊರಬಿದ್ದ 'ಸಮಾರಂಭ' ಏನಾಯಿತು!

ಧಾರವಾಡದಿಂದ ಗೋವಾಕ್ಕೆ ಶಿಫ್ಟ್ ಆಯಿತು!

ಬಳ್ಳಾರಿಯ ಫಲಿತಾಂಶ ನಿರ್ಧಾರ ಆಗಿದೆ ಎಂದಾಯಿತು.

ಶಾಸಕರನ್ನು ಕೊಂಡದ್ದು ಆಯ್ತು.


ಸ್ಥಳೀಯ ಸಂಸ್ಥೆಯ ಸದಸ್ಯರನ್ನು ಖರೀದಿಗೆ ಕೆಡವಿದ್ದಾಯ್ತು.

ಯಡ್ಯೂರಪ್ಪ ಸರ್ಕಾರ ಎಂದೋ ಮಾಯ ಆಗಿ ರೆಡ್ಯೂರಪ್ಪ ಸರ್ಕಾರ ಬಂದಿದ್ದಾಯ್ತು. ಈಗ ಇರುವುದು ಒಂದೇ ಪ್ರಶ್ನೆ-ರೆಡ್ಡಿ ಸರ್ಕಾರ ಯಾವಾಗ? ಅರ್ಥಾತ್ ಮುಖ್ಯಮಂತ್ರಿ ಕುರ್ಚಿ ಹರಾಜು ಯಾವಾಗ ಎಂಬುದು ಅಷ್ಟೆ!

ಈ ವಾರದ 'ನಿಷ್ಕ್ರಿಯ ಕನ್ನಡಿಗರು' ಲೇಖನಕ್ಕೆ ಪ್ರತಿಕ್ರಿಯೆ. ಅಕ್ರಮ ಗಣಿಗಾರಿಕೆಯಿಂದ ದಿನಕ್ಕೆ ಇಪ್ಪತ್ತು ಕೋಟಿಗೂ ಹೆಚ್ಚು ಆದಾಯವಿರುವ ಗಣಿ ರೆಡ್ಡಿಗಳು ಆಡಳಿತಾಂಗವನ್ನೇ 'ಮನೆಯ ಸೇವಕ' ಮಾಡಿಕೊಂಡಿರುವುದರ ವಿರುದ್ಧ, ಗಣಿ ಧೂಳು ಮೆತ್ತಿಕೊಂಡಿರುವ ಕಾಂಗ್ರೆಸ್-ಜೆಡಿಎಸ್‌ಗಳಿಂದ ಪ್ರಬಲ ಹೋರಾಟದ ನಿರೀಕ್ಷೆ ಅಸಾಧ್ಯ. ಆದರೆ ಕನ್ನಡ ಸಾಹಿತ್ಯ ಪರಿಷತ್ತು, ಚಳವಳಿಗಾರರು, ಕನ್ನಡಪರ ಸಂಘಟನೆಗಳಿಗೆ ಏನಾಗಿದೆ? ಕೆಲ ಕಾಟಾಚಾರದ ಹೋರಾಟಗಳು, ಉಗ್ರಪ್ಪ ಹಾಗೂ ಟಪಾಲ್ ಗಣೇಶ್‌ರಂತಹ ಏಕವ್ಯಕ್ತಿಯ ನಿರಂತರ ಹೋರಾಟಗಳು ಗಣಿ ಧಣಿಗಳ ಮುಂದೆ ತೃಣಕ್ಕೆ ಸಮಾನ ಎಂಬ 'ಪತ್ರಿಕೆ'ಯ ಕಾಳಜಿಯ ಜೊತೆಗೆ, ನಾಡಿನ ಹಿರಿಯರು ಕಿರಿಯರಿಗೆ ಮಾರ್ಗದರ್ಶಕರಾಗಿ ಪ್ರಬಲ 'ಆಂದೋಲನ' ಹುಟ್ಟುಹಾಕಲು 'ಲಂಕೇಶ್'ನಲ್ಲಿ ಪುರಾವೆ ಸಹಿತ ಬಂದ ವರದಿಗಳೇ ಸಾಕಾಗುತ್ತಿತ್ತು, ಸಕಲ ಕನ್ನಡಿಗರೂ ಈಗಲಾದರೂ ಎಚ್ಚರಗೊಳ್ಳದಿದ್ದರೆ ಬಳ್ಳಾರಿ, ಅನಂತಪುರ ಒಳಗೊಂಡ 'ಪ್ರತ್ಯೇಕ ರಾಷ್ಟ್ರ' ಬೇಡಿಕೆಗೆ ರೆಡ್ಡಿಗಳು ಮುಂದಾಗುವ ಕಾಲ ದೂರವಿಲ್ಲ!?

ಅಂದಹಾಗೆ, ನಾನು ಈಗ ಆಂಧ್ರದಲ್ಲಿ ವಾಸಿಸುತ್ತಿದ್ದು ಸುಮಾರು ಒಂದೂವರೆ ವರ್ಷದಿಂದ ಪತ್ರಿಕೆ ತರಿಸಿಕೊಳ್ಳುತ್ತಿರುವೆ. ಆದರೆ ಪತ್ರಿಕೆ ನನ್ನ ಕೈ ಸೇರಲು ಹತ್ತರಿಂದ ಮೂವತ್ತಕ್ಕೂ ಹೆಚ್ಚು ದಿನಗಳನ್ನು ತೆಗೆದುಕೊಳ್ಳುತ್ತಿತ್ತು, ಇದರಿಂದ ಬೇಸರವಾಗಿ ಎರಡೂ ಕಡೆ ದೂರಿತ್ತೆ ಯಾವ ಪ್ರಯೋಜನವಾಗಲಿಲ್ಲ, ಪತ್ರಿಕೆ ಬಿಡಲಾಗದೆ ಸುಮ್ಮನೆ ತಂಗಳನ್ನೆ ಓದುತ್ತಿದ್ದೆ, ಆದರೆ ಈ ವಾರದ ಪತ್ರಿಕೆ ಸೋಮವಾರವೇ ತಲುಪಿ ದಾಖಲೆ ನಿರ್ಮಿಸಿದೆ!

- ಬಿ. ಎಲ್. ಮಂಜು, ಹೈದ್ರಾಬಾದ್



ಗಣಿ ಉಳಿಸಲು ಎಚ್ಚೆತ್ತುಕೊಳ್ಳೋಣ

ಈ ವಾರದ ಪತ್ರಿಕೆಯಲ್ಲಿ ಮೂಡಿಬಂದ 'ನಿಷ್ಕ್ರಿಯ ಕನ್ನಡಿಗರು' ಮತ್ತು 'ಕಳಚಿದ ರಾಘವೇಷ' ಎಂಬ ಎರಡೂ ಪ್ರಮುಖ ವರದಿಗಳು ಸಕಾಲಿಕವಾಗಿವೆ. ನಾಡು, ನುಡಿ, ದೇಶಾಭಿಮಾನ, ಮಹಿಳೆ, ತಾಯಿ, ಸಂಸ್ಕೃತಿಯನ್ನೆಲ್ಲ ತಾವೇ ಗುತ್ತಿಗೆ ಹಿಡಿದವರಂತೆ ಮಾತಾನಾಡುತ್ತಿದ್ದ ಕನ್ನಡದ ಹೋರಾಟಗಾರರು ಈಗ ಬಾಯಿಮುಚ್ಚಿ ಕೂತಿರುವುದರ ಹಿಂದಿನ ಅಸಲಿ ಉದ್ದೇಶ ಜನರಿಗೆ ಅರ್ಥವಾಗಿರಬೇಕು.

ಇನ್ನು ರಾಜಕಾರಣಿಗಳಿಗೆ ಮತ್ತು ಸಾಹಿತಿಗಳಿಗೇನಾಗಿದೆ ಎಂದಿದ್ದೀರಲ್ಲವೇ? ಅವರಲ್ಲೂ ಹೆಚ್ಚಿನವರು ಮಾಡುವುದೆಲ್ಲ ಅಧಿಕಾರಕ್ಕಾಗಿ, ಸ್ವಾರ್ಥಕ್ಕಾಗಿ. ಇನ್ನು ಕ್ರಿಮಿನಲ್‌ಗಳಂತೂ ಇವತ್ತು ತಮ್ಮ ರಕ್ಷಣೆಗಾಗಿ ಕನ್ನಡ ಪರ ಸಂಘಟನೆಗಳನ್ನು ಕಟ್ಟಿಕೊಂಡಿದ್ದಾರೆ. ಅಂದರೆ ಅವರನ್ನು ಕನ್ನಡ ನಾಡು ಮತ್ತು ನುಡಿ ಕಾಪಾಡಬೇಕು ಎಂದೇ ಅರ್ಥ. ರೆಡ್ಡಿಗಳು ಒಂದು ಮೈಲಿ ಅಗಲದ ಅದಿರು ಕದ್ದಿದ್ದರೆ ಈ ಕ್ರಿಮಿನಲ್‌ಗಳು ಅವಕಾಶ ಸಿಕ್ಕಿದ್ದರೆ ಇಡೀ ನಾಡನ್ನೇ ಮಾರುತ್ತಿದ್ದರೆಂಬುದು ಎಲ್ಲರಿಗೂ ಗೊತ್ತು.

ಇನ್ನು ಕಾಂಗ್ರೆಸ್ ಮತ್ತು ಜೆಡಿಎಸ್‌ಗಳು ಒಮ್ಮನಸ್ಸಿನಿಂದ ಹೋರಾಡುವುದಿಲ್ಲವೆಂದೂ, ಕಳ್ಳರು ಎಂದೂ ಕಳ್ಳರನ್ನು ಹಿಡಿದುಕೊಡುವುದಿಲ್ಲವೆಂದೂ ಎಲ್ಲರಿಗೂ ಗೊತ್ತಿದೆ. ಇವತ್ತು ದಳ, ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಇರುವ ವ್ಯತ್ಯಾಸ ಕೇವಲ ಚಿಹ್ನೆಯಷ್ಟೇ ಎಂಬುದು ಜನಸಾಮಾನ್ಯರಿಗೆ ಗೊತ್ತು.



ಅದೇ ಸಂಚಿಕೆಯಲ್ಲಿ ಚಿಡ್ಡಿ ರಾಘವೇಶನ ಮುಖವಾಡ ಕಳಚಿದ ಹರ್ಷಕುಮಾರ್ ಅವರಿಗೆ ಧನ್ಯವಾದಗಳು. ಗೋವುಗಳ ಬಗ್ಗೆ ಬಹುಪ್ರೀತಿ ತೋರುವ ಸ್ವಾಮೀಜಿ ಇಂದು ತನ್ನ ಮಠವನ್ನು ಎಳೆಯ ಕಂದಮ್ಮಗಳ ಜೀವನ ಹಾಳು ಮಾಡುವ ಪಾಪಿಗಳ ಆಶ್ರಯ ತಾಣವಾಗಿ ಪರಿವರ್ತಿಸಿದ್ದಾನೆ. ಇದು ಯಾವ ರೀತಿಯಿಂದಲೂ ಮಠಕ್ಕೆ ಶೋಭೆ ತರುವುದಿಲ್ಲ, ಕಳೆದ ಚುನಾವಣಾ ಸಮಯದಲ್ಲಿ ಮಾಜಿ ಮುಖ್ಯಮಂತ್ರಿ ಬಂಗಾರಪ್ಪನವರು ಸ್ವಾಮೀಜಿಯ ಬಗ್ಗೆ ಹಗುರವಾಗಿ ಮಾತಾಡಿದರೆಂದು ಹಲವರು ಪ್ರತಿಭಟಿಸಿದ್ದರು. ಆದರೆ ಈಗ ಅದೇ ಮಠದಲ್ಲಿ ಸ್ವಕುಲದ ಹೆಣ್ಣು ಮಕ್ಕಳ ಮಾನ ಹರಾಜಾಗುತ್ತಿರುವಾಗ ಅವರೆಲ್ಲ ಮೌನ ವಹಿಸಿದ್ದಾರೆ. ಇದು ಏನನ್ನು ತೋರಿಸುತ್ತದೆ? 'ಸೂಜಿ ನನ್ನದೆಂದು ಕಣ್ಣಲ್ಲಿಟ್ಟುಕೊಳ್ಳಲು ಬರುವುದಿಲ್ಲ' ಎಂದಲ್ಲವೇ?

ಈಗಾಗಲೇ ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡಿರುವ ಸ್ವಾಮಿಗೆ ಅದೆಷ್ಟು ಮುಖಗಳಿವೆಯೋ ಆ ಶಿವನೇ ಬಲ್ಲ, ಆದರೂ ನಿಮ್ಮ ಪ್ರಯತ್ನದಿಂದ ಈ ಸ್ವಾಮಿ ಮಠ ತೊರೆದು ಜೈಲು ಸೇರುವ ದಿನಗಳಿಗಾಗಿ ಆಶಿಸುತ್ತೇನೆ. ಖಾವಿ ಕಳಚಿ ಜೈಲು ಬಟ್ಟೆಯ ತೊಟ್ಟಿರುವ ರಾಘವೇಷನ ಫೋಟೋ ಪತ್ರಿಕೆಯಲ್ಲಿ ಬರಲಿ, ಆ ಮೂಲಕ ಕಾನೂನಿನ ಕಣ್ಣಲ್ಲಿ ಎಲ್ಲರೂ ಸಮಾನರು ಎಂದು ಸಾಬೀತಾಗಲಿ ಎಂಬ ಆಶಯ ಈಡೇರಲಿ.

- ಮಂಜಣ್ಣ ಸೊರಬ

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)

ಮೆಂಟಾಲಜಿ ಅಣ್ಣನ 'ಜೀವಭಯ' ಡ್ರಾಮಾ



ಅತೀ ಸಣ್ಣ ವಯಸ್ಸಿಗೇ ನಾಯಕನಟಿಯಾಗಿ ಚಿತ್ರರಂಗದಲ್ಲಿ ಗಟ್ಟಿಯಾಗಿ ನೆಲೆನಿಲ್ಲಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವ ನಿಜ ಪ್ರತಿಭೆ ಅಮೂಲ್ಯ.

ಎಸ್.ನಾರಾಯಣ್ ನಿರ್ದೇಶನದ 'ಚೆಲುವಿನ ಚಿತ್ತಾರ'ದ ಮೂಲಕ ನಾಯಕನಟಿಯಾಗಿ ಪಾದಾರ್ಪಣೆ ಮಾಡಿದ ಅಮೂಲ್ಯ ಇಂದು ಪ್ರಕಾಶ್ ರೈನಂತ ದೈತ್ಯ ನಟ ನಿರ್ದೇಶಿಸುತ್ತಿರುವ 'ನಾನು ನನ್ನ ಕನಸು' ಚಿತ್ರದಲ್ಲಿ ಕೂಡಾ ಅವಕಾಶ ಪಡೆದಿರುವ ಅದೃಷ್ಟವಂತೆ.

ಆದರೆ ಆಕೆಯ ಅದೃಷ್ಟ, ಪ್ರತಿಭೆಗಳೆಲ್ಲಾ ಆಕೆಯ ಅಣ್ಣನಿಗೆ ಬಂಡವಾಳವಾಗಿ ಮಾರ್ಪಡುತ್ತಿದೆ ಎಂಬುದೂ ನಿಜ.

ಅಮೂಲ್ಯಳಿಗೆ ಇಬ್ಬರು ಅಣ್ಣಂದಿರು. ಅದರಲ್ಲಿ ಚಿಕ್ಕವನಾದ ಪವನ್ ಅನಿಮೇಷನ್ ಗ್ರಾಫಿಕ್ ಕಲಿಯುತ್ತಿದ್ದಾನೆ. ತಾನಾಯಿತು ತನ್ನ ಪಾಡಾಯಿತು ಎಂದು ಎಲ್ಲರೊಂದಿಗೆ ಅನ್ಯೋನ್ಯವಾಗಿರುವ ಪವನ್ ಬಗ್ಗೆ ಯಾವುದೇ ನೆಗೆಟಿವ್ ಮಾತುಗಳಿಲ್ಲ. ಆದರೆ ಅಪಸ್ವರವಿರುವುದು ಅಮೂಲ್ಯಳ ಹಿರಿಯ ಅಣ್ಣ ದೀಪಕ್ ಬಗ್ಗೆ.



ಹಾಗೆಂದು ದೀಪಕ್ ತೀರ ದೊಡ್ಡ ಲಂಪಟ ಎಂದಲ್ಲ. ಸಿನಿಮಾ ಮಾಡುತ್ತೇನೆ ಎಂದು ಹೇಳಿ ಕೆಲಸ ಮಾಡಿಸಿಕೊಂಡು, ಒಂದಷ್ಟು ಜನ ಬಡ ಹುಡುಗರಿಗೆ ದುಡ್ಡು ಕೊಡದೇ ಟಕಾಯಿಸುತ್ತಿದ್ದಾನೆ. ಕಳೆದ ಏಳೆಂಟು ತಿಂಗಳ ಹಿಂದಷ್ಟೇ ದೀಪಕ್ 'ಸಿನಿ ಸ್ಪರ್ಶ' ಎಂಬ ಎಡಿಟಿಂಗ್ ಸ್ಟುಡಿಯೋವೊಂದನ್ನು ಆರಂಭಿಸಿದ. ಶೇಷಾದ್ರಿಪುರಂನಲ್ಲೊಂದು ಬಾಡಿಗೆ ಜಾಗ ಹಿಡಿದು ಒಂದೇ ಒಂದು ಎಡಿಟಿಂಗ್ ಯೂನಿಟ್ ಹಾಕಿರುವ ದೀಪಕ್‌ಗೆ ಈವರೆಗೆ ರತ್ನಜನ 'ಪ್ರೇಮಿಸಂ', ಸುದೀಪ್ ಅಭಿನಯದ 'ತೀರ್ಥ' ಚಿತ್ರಗಳನ್ನು ಹೊರತುಪಡಿಸಿದರೆ ಬೇರಾವ ಸಿನಿಮಾಗಳೂ ದೊರೆತಿಲ್ಲ, ಹಾಗಾಗಿ ಕೆಲಸಗಾರರಿಗೂ ಸರಿಯಾಗಿ ಸಂಬಳ ಕೊಟ್ಟಿಲ್ಲ.

ಈ ನಡುವೆ 'ಹೈದ್ರಾಬಾದಿ ಬಿರಿಯಾನಿ' ಎಂಬ ಹೊಟೆಲ್‌ನಲ್ಲಿ ಕ್ಯಾಷಿಯರ್ ಆಗಿರುವ ತನ್ನ ಸ್ನೇಹಿತ ಅನಿಲ್ ಎಂಬಾತನೊಂದಿಗೆ 'ಮನಸಾಲಜಿ' ಎಂಬ ಸಿನಿಮಾ ನಿರ್ಮಾಣ ಮಾಡಲು ಮುಂದಾದ ದೀಪಕ್ ಮದ್ದೂರು ಮೂಲದ ಬಡ ಸ್ಕ್ರಿಪ್ಟ್ ರೈಟರ್ ಅಶೋಕ್ ಮತ್ತು ಕಥೆಗಾರ ರಾಜು ಎಂಬ ಮತ್ತೊಬ್ಬ ಹುಡುಗನ ಬಳಿ ಆರೇಳುಗಳ ತಿಂಗಳಿನಿಂದ ಬಿಟ್ಟಿ ಚಾಕರಿ ಮಾಡಿಸಿಕೊಂಡಿದ್ದಾನೆ.

ಈಗಾಗಲೇ ಸ್ಕ್ರಿಪ್ಟ್ ಪೂಜೆ ಮಾಡಿ ಛಾಯಾಗ್ರಾಹಕ ಜ್ಞಾನಮೂರ್ತಿ, ಸಂಗೀತ ನಿರ್ದೇಶಕ ಅನೂಪ್ ಸಿಳೀನ್ ಸೇರಿದಂತೆ ಎಲ್ಲರಿಗೂ ಸಣ್ಣಮೊತ್ತದ ಟೋಕನ್ ಅಡ್ವಾನ್ಸ್‌ಅನ್ನೂ ನೀಡಲಾಗಿದೆ. ಆದರೆ ಬಿರಿಯಾನಿ ಕ್ಯಾಷಿಯರ್ ಅನಿಲ್ ಮತ್ತು ದೀಪಕ್ ನಡುವೆ ಅದೇನು ಭಿನ್ನಾಭಿಪ್ರಾಯ ಮೂಡಿತೋ ಈಗ ದೀಪಕ್ ನಿರ್ದೇಶಿಸಲು ಉದ್ದೇಶಿಸಿದ್ದ 'ಮನಸಾಲಜಿ' ಚಿತ್ರ ಆರಂಭಕ್ಕೆ ಮುನ್ನವೇ ಡ್ರಾಪ್ ಆಗಿದೆ.

ಇತ್ತ ಸಿನಿಮಾಗಾಗಿ ದುಡಿದವರಿಗೂ ಸರಿಯಾಗಿ ದುಡ್ಡು ಕೊಡದ ದೀಪಕ್ ಅತ್ತ ಸ್ಟುಡಿಯೋ ಮಾಡಲು ಹೋಗಿ ಅಲ್ಲೂ ಒಂದಷ್ಟು ಸಾಲ ಸೋಲ ಮಾಡಿಕೊಂಡಿದ್ದಾನೆ.

ಜೀವ ಬೆದರಿಕೆ ಎಂಬ ನಾಟಕ

ಅಣ್ಣನ ವ್ಯವಹಾರ, ತಕರಾರುಗಳ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದ ಅಮೂಲ್ಯ ಬಾಬಾಬುಡನ್‌ಗಿರಿಯಲ್ಲಿ ನಡೆಯುತ್ತಿರುವ 'ನಾನು ನನ್ನ ಕನಸು' ಚಿತ್ರದ ಶೂಟಿಂಗ್‌ನಲ್ಲಿ ಮಗ್ನಳಾಗಿದ್ದಾಳೆ. ಇತ್ತ ದೀಪಕ್ ಮಾತ್ರ 'ಅಮೂಲ್ಯಳಿಗೆ ಜೀವ ಬೆದರಿಕೆ' ಎಂದು ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ, ತನ್ನ ಸುತ್ತಲಿನವರ ಗಮನವನ್ನು ಡೈವರ್ಟ್ ಮಾಡುತ್ತಿದ್ದಾನೆ.

ಅಸಲಿಗೆ ಅಮೂಲ್ಯಳಿಗೆ ಯಾವುದೇ ಜೀವ ಬೆದರಿಕೆಯೂ ಬಂದಿಲ್ಲ. ಯಾರೋ ತಲೆತಿರುಕನೊಬ್ಬ ಒಂದೆರಡು ಬಾರಿ ಶಿವಾಜಿನಗರ ಮತ್ತು ಆಸುಪಾಸಿನ ಸ್ಥಳದ ಕಾಯಿನ್ ಬೂತ್‌ಗಳಿಂದ ಕರೆ ಮಾಡಿ 'ನಾನು ಅಮೂಲ್ಯಳ ಅಭಿಮಾನಿ. ನಾನು ಆಕೆಯೊಂದಿಗೆ ಮಾತಾಡಬೇಕು' ಎಂದಿದ್ದಾನೆ. ಮತ್ತೊಮ್ಮೆ ಅಮೂಲ್ಯಳ ಮನೆಯವರೆಲ್ಲಾ ಯಾವುದೋ ಮದುವೆಗೆಂದು ಹೋದ ದಿನ ಅವರ ಮನೆಯ ಟೆರೇಸ್‌ಗೆ ಹೋಗಿ ಆಕೆಯ ಫೋಟೋವನ್ನು ಇರಿಸಿ, ಇದ್ದ ಕಸ, ಕಡ್ಡಿ, ತೆಂಗಿನ ಚಿಪ್ಪಿನಲ್ಲಿ 'ಅಮೂಲ್ಯ' ಎಂದು ಜೋಡಿಸಿಟ್ಟಿದ್ದಾನೆ.

ಇದನ್ನೇ ಕಾರಣವನ್ನಾಗಿಸಿಕೊಂಡು ದೀಪಕ್ ಪೊಲೀಸ್ ಠಾಣೆಗೆ ಹೋಗಿ ಕಂಪ್ಲೇಂಟು ಕೊಟ್ಟಿದ್ದಾನೆ. ಅಭಿಮಾನಿಯೊಬ್ಬನ ಹುಚ್ಚು ವರ್ತನೆಯನ್ನು ದಾಖಲಿಸಿಕೊಳ್ಳಲು ಯಾವ ಸೆಕ್ಷನ್ನೂ ಇಲ್ಲ ಎಂದು ವೈಯಾಲಿಕಾವಲ್ ಪೊಲೀಸರು 'ಜೀವ ಬೆದರಿಕೆ' ಕೇಸನ್ನು ದಾಖಲಿಸಿಕೊಂಡಿದ್ದಾರೆ. ಇದು ಪತ್ರಿಕೆಗಳಲ್ಲಿ ಮುಖಪುಟ ಸುದ್ದಿಯೂ ಆಗಿದೆ.

ಇದನ್ನೇ ನೆಪ ಮಾಡಿಕೊಂಡ ದೀಪಕ್ ತನಗೆ ಕೆಲಸ ಮಾಡಿದ್ದಕ್ಕಾಗಿ ದುಡ್ಡು ಕೇಳಿದವರಿಗೆಲ್ಲಾ 'ನನ್ನ ತಂಗಿಗೆ ಜೀವ ಬೆದರಿಕೆಯಿದೆ' ಎಂದು ಹೇಳಿ ಅವರ ಗಮನ ಬೇರೆಡೆ ಸೆಳೆಯುತ್ತಿದ್ದಾನೆ.

ಇತ್ತೀಚೆಗಷ್ಟೇ ತೀರಿಕೊಂಡ ಅಮೂಲ್ಯಳ ತಂದೆ ಕೆಂಪರಸು ಅವರು ಇದ್ದ ತನಕ ತೆಪ್ಪಗಿದ್ದ ದೀಪಕ್‌ನ ಇತ್ತೀಚಿನ ನಡವಳಿಕೆಗಳು ಆತನ ಸುತ್ತಲಿನವರಿಗೆ ಬೇಸರ ತರಿಸಿರುವುದಂತೂ ಸತ್ಯ. ಕೆಂಪರಸು ಕೊನೆಯುಸಿರೆಳೆಯುವ ಒಂದುವಾರ ಮುಂಚೆಯೂ ತನ್ನ ಮಗನೊಂದಿಗೆ ಕೆಲಸ ಮಾಡುವವರ ಕೈಗಳನ್ನು ಹಿಡಿದು 'ಆತ ಏನೇ ತಪ್ಪು ಮಾಡಿದರೂ ಅವನ ಕೈ ಬಿಡಬೇಡಿ' ಎಂದು ಕಣ್ಣೀರು ಸುರಿಸಿದ್ದರು.

ಇನ್ನಾದರೂ ದೀಪಕ್ ಇಲ್ಲದ ಸುದ್ದಿ ಹಬ್ಬಿಸುತ್ತಾ ಚಿಲ್ಲರೆ ವ್ಯವಹಾರ ಮಾಡುವುದನ್ನು ಬಿಡಬೇಕು. ಇಲ್ಲದಿದ್ದಲ್ಲಿ ಹಾಳಾಗುವುದು ತನ್ನ ಮುದ್ದು ತಂಗಿ ಅಮೂಲ್ಯಳ ಹೆಸರು ಮತ್ತು ಭವಿಷ್ಯ. ಅದನ್ನು ಆತ ಅರಿತುಕೊಳ್ಳಲಿ. ●

ಅಂಬಿ ಬೇಸರ

ದಾನಶೂರಕರ್ಣ, ಅಜಾತ ಶತ್ರು, ರೆಬೆಲ್ ಸ್ಟಾರ್, ಮಂಡ್ಯದ ಗಂಡು ಎಂಬಿತ್ಯಾದಿ ಬಿರುದುಗಳನ್ನು ಹೊಂದಿರುವ ಅಂಬರೀಷ್‌ರನ್ನು ಕಂಡರೆ ಉದ್ಯಮದ ಜನರಿಗೆ ಎಲ್ಲಿಲ್ಲದ ಪ್ರೀತಿ ಮತ್ತು ಭಯ. ಹೀಗಾಗಿ ಅಂಬರೀಷ್ ಒಂದು ಕರೆಕೊಟ್ಟರೂ ಸಾಕು, ಇಡೀ ಉದ್ಯಮ ಅವರ ಮನೆಬಾಗಿಲಿಗೆ ಬಂದು ನಿಲ್ಲುತ್ತಿತ್ತು, ಆದರೆ ಈಗ ಇದೆಲ್ಲವೂ ಗತಕಾಲದ ಕತೆ. ಯಾಕೆಂದರೆ ಇತ್ತೀಚೆಗೆ ಕಲಾವಿದರ ಸಂಘದ ಆಶ್ರಯದಲ್ಲಿ ನಡೆದ ರಾಜ್ಯೋತ್ಸವ ಸಂದರ್ಭದಲ್ಲಿ ಅಂಬರೀಷ್ ತುಂಬಾ ಬೇಸರದಿಂದ ಮಾತನಾಡಿದರು. ಅದಕ್ಕೆ ಮುಖ್ಯಕಾರಣ ಆ ಸಮಾರಂಭಕ್ಕೆ ಯುವ ನಾಯಕ ನಟರುಗಳೇ ಚಕ್ಕರ್ ಹಾಕಿದ್ದು ಒಂದೆಡೆಯಾದರೆ, ಮತ್ತೊಂದೆಡೆ ಅಂಬರೀಷ್ ಸಮಕಾಲೀನ ನಟನಟಿಯರೂ ಸಮಾರಂಭಕ್ಕೆ ಗೈರುಹಾಜರಾಗಿದ್ದು, ಅಷ್ಟೇ ಅಲ್ಲ ಸನ್ಮಾನಕ್ಕೆ ಆಯ್ಕೆಯಾದವರಲ್ಲಿ ಇಬ್ಬರು ವ್ಯಕ್ತಿಗಳು ಬಾರದಿದ್ದುದನ್ನು ನೋಡಿ ಅಂಬಿ ಬಹಳಷ್ಟು ದುಃಖವನ್ನು ತೋಡಿಕೊಂಡರಂತೆ.



ಇದರರ್ಥ ಅಂಬರೀಷ್‌ಗೆ ಚಿತ್ರರಂಗದ ಮೇಲಿರುವ ಹತೋಟಿ ನಿಧಾನವಾಗಿ ಜಾರಿ ಹೋಗುತ್ತಿದೆ ಎಂದಾಯಿತು. ಡಾ. ರಾಜ್‌ಕುಮಾರ್ ಕಲಾವಿದರ ಸಂಘದ ಅಧ್ಯಕ್ಷರಾಗಿದ್ದಾಗ ಇಂತಹ ಸಮಾರಂಭಗಳು ಅತ್ಯಂತ ವರ್ಣರಂಜಿತವಾಗಿ ನಡೆಯುತ್ತಿದ್ದವು. ಅಷ್ಟೇ ಅಲ್ಲ, ಬಹುತೇಕ ಎಲ್ಲಾ ಕಲಾವಿದರು ಆ ಸಂದರ್ಭದಲ್ಲಿ ಹಾಜರಿರು ತ್ತಿದ್ದರು. ಆದರೆ ಅಂಬಿ ಅಧ್ಯಕ್ಷರಾದ ನಂತರ ನಡೆಯುತ್ತಿರುವ ಕಲಾವಿದರ ಸಂಘದ ಸಮಾರಂಭಗಳಿಗೆ ಕಲಾವಿದರೇ ಕೈಕೊಡುತ್ತಿದ್ದಾರೆ. ರಾಜಕೀಯದಲ್ಲಿ ಸೋಲಿನ ಸುರಿಮಳೆಯನ್ನು ಅನುಭವಿಸಿದ ಅಂಬರೀಷ್ ಉದ್ಯಮದಲ್ಲೂ ಈಗ ಯಾರಿಗೂ ಬೇಡವಾಗಿ ಏಕಾಂಗಿಯಾಗಿ ಕಾಣಿಸು ತ್ತಿದ್ದಾರೆ.

ಅಂದಿನ ಸಮಾರಂಭದಲ್ಲಿ ಕಾಣಿಸಿಕೊಂಡ ಎರಡು ಮುಖಗಳೆಂದರೆ ರಮೇಶ್ ಅರವಿಂದ್ ಮತ್ತು ವಿಜಯ್ ಮಾತ್ರ. ಕಲಾವಿದರ ಸಂಘ ಕೂಡಾ ಒಡೆದ ಮನೆಯಾಗಿದೆಯೋ ಎಂಬ ಸಂಶಯವಂತೂ ಕಾಡುತ್ತಿದೆ.


ಜಯಮಾಲಾ ಕ್ರಾಂತಿ

ಇತ್ತೀಚೆಗೆ ಜಯಮಾಲಾ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಸದ್ದಿಲ್ಲದೇ ಒಂದು ಮೌನ ಕ್ರಾಂತಿಯನ್ನು ಮಾಡಿಬಿಟ್ಟಿದ್ದಾರೆ. ಅದು ವಾಣಿಜ್ಯ ಮಂಡಳಿಯ ಚುನಾವಣೆ ಮತ್ತು ಸಂವಿಧಾನಕ್ಕೆ ಸಂಬಂಧಪಟ್ಟಿದ್ದು. ಅದೇನೆಂದರೆ ವಾಣಿಜ್ಯ ಮಂಡಳಿಯಲ್ಲಿ ಪ್ರದರ್ಶಕರು, ವಿತರಕರು ಮತ್ತು ನಿರ್ಮಾಪಕರು ಎಂಬ ಮೂರು ಅಂಗಸಂಸ್ಥೆಗಳಿವೆ. ಪ್ರತಿ ವರ್ಷ ಈ ಮೂರು ವಿಭಾಗಗಳಿಂದ ಅಭ್ಯರ್ಥಿಗಳು ಚೇಂಬರಿಗೆ ಆಯ್ಕೆಯಾಗುತ್ತಾರೆ.



ಆದರೆ ಕೆಲವು ಆಸಾಮಿಗಳು ಕಳೆದ ಎಷ್ಟೋ ವರ್ಷಗಳಿಂದ ಚೇಂಬರನ್ನು ತಮ್ಮ ಮನೆಯನ್ನಾಗಿಸಿದ್ದಾರೆ. ಒಂದು ವರ್ಷ ಪ್ರದರ್ಶಕರ ಖೋಟಾದಿಂದ ಆಯ್ಕೆಯಾಗುವ ಈ ಮಂದಿ, ಮುಂದಿನ ವರ್ಷ ನಿರ್ಮಾಪಕರು ಅಥವಾ ವಿತರಕರ ಖೋಟಾದಲ್ಲಿ ಆಯ್ಕೆಯಾಗಿರುತ್ತಿದ್ದರು. ಹೀಗೆ ಪ್ರತಿವರ್ಷ ಒಂದಲ್ಲ ಒಂದು ಖೋಟಾದಲ್ಲಿ ಆಯ್ಕೆಯಾಗಿ ಚೇಂಬರ್‌ನಲ್ಲಿ ಅವರು ಪರ್ಮನೆಂಟ್ ಮೊಕ್ಕಾಂ ಹೂಡುತ್ತಿದ್ದರು. ಹೀಗಾಗಿ ಚೇಂಬರ್‌ನಲ್ಲಿ ಅವರದೇ ರಾಜ್ಯಭಾರವಾಗಿರುತ್ತಿತ್ತು, ಅದೇ ಜನ ಹೊಸಹೊಸ ವೇಷದಲ್ಲಿ ಚೇಂಬರ್ ಕಟ್ಟೆಯಲ್ಲಿ ಕುಳಿತುಕೊಳ್ಳುತ್ತಿದ್ದರು.

ಈಗ ಜಯಮಾಲಾ ಅದರ ಸಂವಿಧಾನವನ್ನು ತಿದ್ದುಪಡಿ ಮಾಡಿದ್ದಾರೆ. ಒಬ್ಬ ವ್ಯಕ್ತಿ ಒಂದು ವಲಯದಿಂದ ಅಭ್ಯರ್ಥಿಯಾಗಲು ಬಯಸಿದರೆ ಆತ ಮುಂದಿನ ವರ್ಷ ಅದೇ ವಲಯದಿಂದ ಸ್ಪರ್ಧಿಸಬೇಕೆ ವಿನಃ ಬೇರೆ ವಲಯಕ್ಕೆ ಹೋಗಲು ಸಾಧ್ಯವಿಲ್ಲ. ಉದಾಹರಣೆಗೆ ಒಂದು ವರ್ಷ ನಿರ್ಮಾಪಕನಾಗಿ ಆಯ್ಕೆಯಾಗುತ್ತಿದ್ದ ಸಾ.ರಾ.ಗೋವಿಂದು ಮುಂದಿನ ವರ್ಷ ವಿತರಕರಾಗಿ ಆಯ್ಕೆಯಾಗುತ್ತಿದ್ದರು. ಹಾಗೆಯೇ ಥಾಮಸ್ ಡಿಸೋಜ ಎಂಬ ವ್ಯಕ್ತಿ ಒಂದು ವರ್ಷ ಪ್ರದರ್ಶಕರಾಗಿಯೂ ಮತ್ತೊಂದು ವರ್ಷ ವಿತರಕರ ಖೋಟಾದಲ್ಲಿ ಆಯ್ಕೆಯಾಗುತ್ತಿದ್ದರು. ಈಗ ಇವರೆಲ್ಲ ಒಂದೇ ವಲಯವನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಅದರೆ ಜಯಮಾಲಾ ಅವರ ಈ ಸೂತ್ರದಿಂದಾಗಿ ಅನೇಕರು ನಿರುದ್ಯೋಗಿಗಳಾಗುವ ಸಾಧ್ಯತೆ ಇದೆ. ಹಾಗೆಯೇ ಈ ಮುದಿ ಹುಲಿಗಳ ಸ್ಥಾನದಲ್ಲಿ ಹೊಸಬರು ಬಂದು ಕುಳಿತುಕೊಳ್ಳುವ ಅವಕಾಶ ಸೃಷ್ಟಿಯಾಗಿದೆ. ಅಂದರೆ ಇನ್ನು ಮುಂದೆ ಚೇಂಬರ್ ಹೊಸಬರ ಚಿಂತನೆಯ ವಾಹಿನಿಯಾಗಿ ರೂಪುಗೊಳ್ಳುವ ಸಾಧ್ಯತೆ ಇದೆ. ಇದೊಂದು ಸ್ವಾಗತಾರ್ಹ ಬೆಳವಣಿಗೆ ಎನ್ನೋಣವೇ? ●



ಪತ್ನಿಯ ಕನಸು

'ನಾನು ನನ್ನ ಕನಸು' ಚಿತ್ರದ ಮೂಲಕ ಸಹಾಯಕ ನಿರ್ದೇಶಕಿಯಾಗಿ ರಮಾ ಎಂಬಾಕೆ ಚಿತ್ರರಂಗಕ್ಕೆ ಕಾಲಿಟ್ಟಿದ್ದಾರೆ. ಸಹಾಯಕ ನಿರ್ದೇಶಕಿಯಾಗುವುದು ಅಂತಹ ದೊಡ್ಡ ಬ್ರೇಕಿಂಗ್ ನ್ಯೂಸ್ ಏನೂ ಅಲ್ಲ. ಯಾಕೆಂದರೆ ಇತ್ತೀಚೆಗೆ ಅನೇಕ ಹೆಣ್ಣುಮಕ್ಕಳು ನಿರ್ದೇಶಕಿಯರಾಗಿ ಚಿತ್ರರಂಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ರಮಾ ಸದ್ದುಗದ್ದಲವಿಲ್ಲದೇ ನಟ-ನಿರ್ದೇಶಕ ಪ್ರಕಾಶ್ ರೈ ಜೊತೆ ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡುತ್ತಿರುವುದು ಒಂದು ವಿಚಿತ್ರ ಕುತೂಹಲಕ್ಕೆ ಎಡೆ ಮಾಡಿಕೊಟ್ಟಿದೆ.

ಈ ರಮಾ ಯಾರು ಗೊತ್ತೇ? ಕೆಲವು ವರ್ಷಗಳ ಹಿಂದೆ ಸುಬ್ರಮಣ್ಯ ಮಠದ ವಿದ್ಯಾಭೂಷಣ ಸ್ವಾಮೀಜಿ ಪೀಠತ್ಯಾಗ ಮಾಡಿ ವೈವಾಹಿಕ ಜೀವನಕ್ಕೆ ಕಾಲಿಟ್ಟ ಘಟನೆ ಕರ್ನಾಟಕದಲ್ಲೆಲ್ಲಾ ಚರ್ಚೆಯ ವಿಷಯವಾಗಿತ್ತಲ್ಲವೇ? ಅಂದು ವಿದ್ಯಾಭೂಷಣ ಸ್ವಾಮೀಜಿಯನ್ನು ಸಂಸಾರ ಜೀವನಕ್ಕೆ ಎಳೆದು ತಂದ ರಮಾ ಅವರೇ ಈಗ ಈ ಕನಸಿನ ಲೋಕದಲ್ಲಿ ಸಹಾಯಕ ನಿರ್ದೇಶಕಿಯಾಗಿ ಕೆಲಸ ಮಾಡುತ್ತಿರುವವರು!

ಮೂಲತಃ ರಮಾ ಹಾಡುಗಾರ್ತಿ. ಈಕೆಯ ಮಧುರ ಕಂಠವೇ ವಿರಕ್ತ ಭಾವನೆಯ ಸ್ವಾಮೀಜಿಯಲ್ಲಿ ಪ್ರೀತಿಯ ಕಾಮನೆಯನ್ನು ಹುಟ್ಟಿಸಿದ್ದು. ಅಂತಹ ಅದ್ಭುತ ಕಂಠವಿರುವ ರಮಾ ಆ ನಂತರ ಹಾಡುಗಾರ್ತಿಯಾಗಿ ಪ್ರಸಿದ್ಧಿಯನ್ನೇನೂ ಪಡೆಯಲಿಲ್ಲ. ಹಾಗೆಯೇ ಸ್ವತಃ ಹಾಡುಗಾರರಾದ ವಿದ್ಯಾಭೂಷಣ ಮತ್ತು ರಮಾ ಜೊತೆಗೂಡಿ ಸಂಗೀತ ಕಛೇರಿಗಳನ್ನು ನಡೆಸಿದ ಉದಾಹರಣೆಗಳು ಕೂಡಾ ಇಲ್ಲವೇ ಇಲ್ಲ. ಹೀಗಿರುವಾಗ ಈ ರಮಾ ಸಂಗೀತ ಲೋಕದಿಂದ ಸಿನಿಮಾ ಲೋಕಕ್ಕೆ ಕಾಲಿರಿಸಿದ್ದು ವಿಶೇಷವಾಗಿ ಕಾಣಿಸುತ್ತಿದೆ.

ಕಳೆದ ಮೂರು ನಾಲ್ಕು ತಿಂಗಳಿನಿಂದ ರೈ ತಂಡದ ಜೊತೆ ಅಹೋರಾತ್ರಿ ಕೆಲಸ ಮಾಡುತ್ತಿದ್ದ ರಮಾಗೆ ಈಗ ಕನಸಿನ ಲೋಕದಲ್ಲಿ ಏನಾದರೂ ದೊಡ್ಡ ಸಾಧನೆ ಮಾಡಬೇಕು ಎಂಬ ಹುಮ್ಮಸ್ಸು ಹುಟ್ಟಿಕೊಂಡಿದೆಯಂತೆ. ಹೀಗಾಗಿ ಅನಿರುದ್ಧ್ ಮತ್ತು ಮೇಘ ಎಂಬ ಎರಡು ಮಕ್ಕಳ ತಾಯಿಯಾಗಿರುವ ರಮಾ ಸಂಸಾರ ಲೋಕದಿಂದ ಕನಸಿನ ಲೋಕಕ್ಕೆ ಹೈಜಂಪ್ ಮಾಡಿದ್ದಾರೆ.

ಕೆಲವು ಗಾಳಿ ಸುದ್ದಿಗಳ ಪ್ರಕಾರ ಸ್ವಾಮೀಜಿ ಮತ್ತು ಆಕೆಯ ನಡುವಿನ ಸಂಸಾರದಲ್ಲಿ ಈಗ ಅಪಸ್ವರ ಕಾಣಿಸಿದೆಯಂತೆ. ಆದರೆ ಇಂತಹ ಗಾಳಿಸುದ್ದಿಗೆ ಯಾವುದೇ ಆಧಾರಗಳಿಲ್ಲ, ಯಾಕೆಂದರೆ ಈಗಲೂ ಅವರು ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ.

ಮಹಾ ಕನಸುಗಾರ್ತಿಯಾದ ರಮಾಗೆ ಮುಂಬರುವ ದಿನಗಳಲ್ಲಿ ಟಿವಿ ಅಥವಾ ಸಿನಿಮಾ ರಂಗದಲ್ಲಿ ನಿರ್ದೇಶಕಿಯಾಗಿ ಹೊರಹೊಮ್ಮುವ ಆಸೆಯಂತೆ. ಆ ಕಾರಣಕ್ಕಾಗಿ ಈಗ 'ನಾನು ನನ್ನ ಕನಸು' ಚಿತ್ರದ ತಂಡದಲ್ಲಿ ನಿರ್ದೇಶನ ಕೆಲಸದ ಎಲ್ಲಾ ಕರಾಮತ್ತುಗಳನ್ನು ಕಲಿಯುತ್ತಿದ್ದಾರಂತೆ.

ಹಾಗೇ ನೋಡಿದರೆ, ಹಾಡುಗಾರ್ತಿಯಾಗಿದ್ದ ರಮಾ ಹಾಡುವ ಸ್ವಾಮೀಜಿಯನ್ನು ಮದುವೆಯಾಗಿದ್ದು, ಅನಂತರ ಎರಡು ಮಕ್ಕಳ ತಾಯಿಯಾಗಿದ್ದು, ಇದೀಗ ಸಿನಿಮಾಲೋಕಕ್ಕೆ ಕಾಲಿರಿಸಿದ್ದು... ಇವೆಲ್ಲಾ ಘಟನೆಗಳೇ ಒಂದು ಸಿನಿಮಾಕ್ಕೆ ಬೇಕಾದ ಕಥಾವಸ್ತುವಿನಂತೆ ಕಾಣಿಸುತ್ತದಲ್ಲವೇ?! ಮಾಜಿ ಸ್ವಾಮೀಜಿಯ ಹಾಡು ಮತ್ತು ಅವರ ಪತ್ನಿಯ ನಿರ್ದೇಶನದ ಚಿತ್ರ ಮುಂದಿನ ವರ್ಷ ಕನ್ನಡ ಪ್ರೇಕ್ಷಕರ ಮುಂದೆ ಬಂದರೆ ಆಶ್ಚರ್ಯ ಪಡಬೇಕಾಗಿಲ್ಲ.

● ಶೆಣೈ

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 30-12-2009 RNI No. KARKAN2005/1464

ಛಾಲೆಂಜಿಂಗ್ ಸ್ಟಾರ್ ಇನ್ ಐಟಂ ಸಾಂಗ್




ಅತೀಶ್ ಕಪ್ಪದ್ ನಿರ್ದೇಶನದ 'ಸಿಪಿಮುತ್ತು' ಚಿತ್ರದ ಹಾಡೊಂದರಲ್ಲಿ ಬಾಲಿವುಡ್‌ನ ಅಭಿಷೇಕ್ ಬಚ್ಚನ್ ಕಾಣಿಸಿಕೊಳ್ಳಲಿದ್ದಾರೆ ಎಂಬ ಸುದ್ದಿಯನ್ನು ಆ ಚಿತ್ರದ ತಂಡದವರು ಹಬ್ಬಿಸಿದ್ದರು. ಸ್ವಲ್ಪ ದಿನಗಳ ನಂತರ "ಇಲ್ಲ, ಆ ಹಾಡಲ್ಲಿ ಅಭಿಷೇಕ್ ಬದಲಿಗೆ ಸಲ್ಮಾನ್ ಖಾನ್ ಕುಣಿಯಲಿದ್ದಾರೆ" ಎಂದು ಪ್ಲೇಟ್ ಬದಲಾಯಿಸಿದ್ದರು.

ಹೀಗೆ ಪುಕ್ಕಟೆಯಾಗಿ ಇಷ್ಟೆಲ್ಲಾ ಪ್ರಚಾರ ಪಡೆದ ನಂತರ, ಹಾಲಿವುಡ್ ಮತ್ತು ಬಾಲಿವುಡ್‌ಗಳೆಲ್ಲಾ ಕಟ್ ಆಗಿ ಅಂತಿಮವಾಗಿ ಆ ಹಾಡಿನಲ್ಲಿ ನಮ್ಮ ಕನ್ನಡದ ನಾಯಕನಟ ಛಾಲೆಂಜಿಂಗ್ ಸ್ಟಾರ್ ದರ್ಶನ್ ನಟಿಸುವುದಾಗಿ ಸುದ್ದಿ ಬಂದಿದೆ. ಇದಕ್ಕಾಗಿ ದುಬಾರಿ ಸೆಟ್ ಕೂಡಾ ಸಿದ್ಧಗೊಂಡಿದೆ ಯಂತೆ.

ಅಂದಹಾಗೆ, ಮೂರು ದಿನ ಚಿತ್ರೀಕರಣಗೊಳ್ಳುವ ಈ ಹಾಡಿಗಾಗಿ ದರ್ಶನ್ ತೆಗೆದುಕೊಂಡಿರುವ ಸಂಭಾವನೆ ಬರೀ ಐದು ಲಕ್ಷ ಮಾತ್ರ!

ಚಂದೂಲಾಲ್ ಕಣ್ಮರೆ



ಪುರಾತನ ನಿರ್ಮಾಪಕ ಚಂದೂಲಾಲ್ ಜೈನ್ ಇನ್ನಿಲ್ಲ.

ರಾಜಸ್ಥಾನ ಮೂಲದಿಂದ ಬಂದು ಕನ್ನಡ ನೆಲದಲ್ಲಿ ಬದುಕು ಕಟ್ಟಿಕೊಂಡವರು ಚಂದೂ ಲಾಲ್ ಜೈನ್. ಹೀಗೆ 'ಎಲ್ಲಿಂದಲೋ ಬಂದ' ಜೈನ್ ಕನ್ನಡ ಚಿತ್ರ ನಿರ್ಮಾಪಕನಾಗಿ ಈ ನಾಡಿಗೆ ನೀಡಿದ ಸೇವೆ ಅಷ್ಟಿಷ್ಟಲ್ಲ.

'ಭೂತಯ್ಯನ ಮಗ ಅಯ್ಯು', 'ತಬ್ಬಲಿ ನೀನಾದೆ ಮಗನೇ', 'ವೀರಪ್ಪನ್', 'ಗಂಗವ್ವ ಗಂಗಮಾಯಿ', 'ಹೇಮಾವತಿ', 'ಭಕ್ತಸಿರಿಯಾಳ', ನಲ್ವತ್ತೆಂಟು ಗಂಟೆಗಳಲ್ಲಿ ತೆಗೆದ 'ಇದು ಸಾಧ್ಯ' ಚಿತ್ರವೂ ಸೇರಿದಂತೆ ಸುಮಾರು 45ಕ್ಕೂ ಹೆಚ್ಚು ಸದಭಿರುಚಿಯ ಸಿನಿಮಾಗಳನ್ನು ನಿರ್ಮಿಸಿದ ಕೀರ್ತಿ ಚಂದೂಲಾಲ್ ಅವರದ್ದು. ಕೌಟುಂಬಿಕ ಚಿತ್ರಗಳನ್ನು ನಿರ್ಮಿಸಿ ಪ್ರೇಕ್ಷಕರಿಂದ ಕಣ್ಣೀರ ಧಾರೆ ಹರಿಸುತ್ತಿದ್ದ ಜೈನ್ ಅನಂತ್ ನಾಗ್-ಲಕ್ಷ್ಮಿ, ಡಾ.ರಾಜ್-ಭಾರತಿ ಜೋಡಿಯಿಂದ ಹಿಡಿದು ರವಿಚಂದ್ರನ್, ದೇವರಾಜ್‌ರ ತನಕ ಕನ್ನಡ ಚಿತ್ರರಂಗದ ಎಲ್ಲ ನಾಯಕನಟರ ಸಿನಿಮಾಗಳನ್ನೂ ನಿರ್ಮಿಸಿದ್ದರು.



ಏಳೆಂಟು ಬಾರಿ ರಾಜ್ಯ ಪ್ರಶಸ್ತಿ ಮತ್ತು ಎರಡು ಬಾರಿ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದ್ದ ಚಂದೂಲಾಲ್ ಜೈನ್ ಎಂಬ ಹಿರಿಯ ನಿರ್ಮಾಪಕ ಕಡೆಗಾಲದವರೆಗೂ ಬೆಂಗಳೂರಿನಲ್ಲಿ ಸ್ವಂತದ್ದೊಂದು ನಿವೇಶನ ಪಡೆಯಲಿಲ್ಲ ಎಂದರೆ ನಂಬಲೇಬೇಕು.

ಕಳೆದ ಜನವರಿ 21ರಂದು ಚಂದೂಲಾಲ್ ಎಳೀ ಮಗುವಿನಂತೆ ತನ್ನ ಎಪ್ಪತ್ನಾಲ್ಕನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದರು. ಅದು ಅವರ ಐವತ್ತನೇ ವರ್ಷದ ವಿವಾಹ ವಾರ್ಷಿಕೋತ್ಸವವೂ ಆಗಿದ್ದರಿಂದ ಅವರ ಪತ್ನಿಯೂ ಜೊತೆಗಿದ್ದರು. ಅಂದು ಚಂದೂಲಾಲ್‌ರ ಸಮಕಾಲೀನರು ಮತ್ತು ಅವರ ಪರಮಾಪ್ತ ಮಿತ್ರರೂ ಆಗಿದ್ದ ಆರ್.ಲಕ್ಷ್ಮಣ್ ಮತ್ತು ಪಾಲ್ ಎಂಬ ಇನ್ನಿಬ್ಬರು ನಿರ್ಮಾಪಕರು ಜೈನ್ ದಂಪತಿಗಳಿಗೆ ಶುಭ ಹಾರೈಸಿದರು. ಅದಾದ ಕೆಲವೇ ದಿನಗಳಲ್ಲಿ ಲಕ್ಷ್ಮಣ್ ತೀರಿಕೊಂಡಿದ್ದರು.

ಚಂದೂಲಾಲ್ ಜೈನ್ ದೇಹದಲ್ಲಿ ಎರಡು ವರ್ಷಗಳ ಹಿಂದೆ ಕ್ಯಾನ್ಸರ್ ಕಾಣಿಸಿಕೊಂಡಿತ್ತು. ಆಗ ತೀವ್ರ ಅನಾರೋಗ್ಯದಿಂದ ಬಳಲಿದ ಜೈನ್ ಆಶ್ಚರ್ಯಕರ ರೀತಿಯಲ್ಲಿ ಸುಧಾರಿಸಿಕೊಂಡು ಹೊಸ ಉತ್ಸಾಹ- ಹುಮ್ಮಸ್ಸಿನಿಂದ ಮತ್ತೆ ಸಿನಿಮಾ ಮಾಡಲು ಹೊರಟಿದ್ದರು. ನಡೆದಾಡಲೂ ಅಶಕ್ತರಾಗಿ ಊರುಗೋಲಿನ ಸಹಾಯದೊಂದಿಗೆ ಹೆಜ್ಜೆಯಿರಿಸುತ್ತಿದ್ದ ಚಂದೂಲಾಲ್‌ರ 'ಕತೆ ಮುಗಿದೇ ಹೋಯಿತು' ಎನ್ನುವ ಹೊತ್ತಿಗೇ ಫೀನಿಕ್ಸ್‌ನಂತೆ ಎದ್ದುನಿಂತ ಈ ಮಾರ್ವಾಡಿ ಅಜ್ಜ 'ಮತ್ತೆ ಚಿತ್ರ ನಿರ್ಮಾಣ ಮಾಡುತ್ತೇನೆ' ಎಂದು ಜಿಗಿಯುತ್ತಿತ್ತು. 'ವಿದೇಶ' ಎಂಬ ಚಿತ್ರವನ್ನು ಅನೌನ್ಸ್ ಮಾಡಿದ್ದ ಜೈನ್ ಅದನ್ನು ಭಾರತ ಮತ್ತು ಲಂಡನ್‌ನಲ್ಲಿ ಚಿತ್ರೀಕರಿಸುವ ಪ್ಲಾನ್ ಮಾಡಿದ್ದರು.

ಇನ್ನೊಂದು ತಿಂಗಳು ಕಳೆದಿದ್ದರೆ ಚಂದೂಲಾಲ್ ಮತ್ತೆ ಹೊಸ ಬಟ್ಟೆ ತೊಟ್ಟು, ಮುಗ್ಧ ಮಗುವಿನಂತೆ ಕೈಲಿ ಚಾಕು ಹಿಡಿದು ಕೇಕು ಕತ್ತರಿಸಲು ನಿಲ್ಲುತ್ತಿದ್ದರು. ವಿಪರ್ಯಾಸವೆಂದರೆ 75ನೇ ವರ್ಷದ ಬರ್ತ್‌ಡೇ ಕೇಕು ಸಿದ್ಧಗೊಳ್ಳುವ ಮೊದಲೇ ಚಂದೂಲಾಲ್ ಲೋಕ ತ್ಯಜಿಸಿದ್ದಾರೆ.

ತಮ್ಮ ನೂರಾರು ಅದ್ದೂರಿ ಮತ್ತು ಸದಭಿರುಚಿಯ ಸಿನಿಮಾ ನಿರ್ಮಾಣದಿಂದ ಕನ್ನಡ ಚಿತ್ರರಂಗವನ್ನು ಶ್ರೀಮಂತಗೊಳಿಸಿದ ಈ ಮಾರ್ವಾಡಿ ನಿರ್ಮಾಪಕ ಚಂದೂಲಾಲ್ ಜೈನ್ ಇನ್ನು ಕೇವಲ ನೆನಪು ಮಾತ್ರ.

● ಅರುಣ್

ಭಾರತದ ಸೆಕ್ಸೀ ಮಹಿಳೆಯರು



ಬಾಲಿವುಡ್ ನಟಿ ಕತ್ರಿನಾ ಕೈಫ್ ಇದೀ ವಿಶ್ವಾಗೇ ನಂ.1 ಸೆಕ್ಸೀ ಮಹಿಳೆಯಂತೆ! ವಿಶ್ವಾದ ಟಾಪ್ ಟೆನ್ ಸೆಕ್ಸೀ ಮಹಿಳೆಯರಲ್ಲಿ ಎಂಟು ಜನ ಭಾರತೀಯರೇ ಇರುವುದು ವಿಶೇಷ. ಹೀಗಾಗಿ ವಿಶ್ವದ ಎಲ್ಲ ಗಂಡಸರ ಕಣ್ಣು ಈಗ ಭಾರತೀಯ ಮಹಿಳೆಯರ ಮೇಲೆ ಬದ್ದಿದೆ.

ಕತ್ರಿನಾ ನಂ.1 ಸ್ಥಾನದಲ್ಲಿದ್ದರೆ, ಎರಡನೇ ಸ್ಥಾನ ಪ್ರಿಯಾಂಕಾ ಛೋಪ್ರಾಳ ಪಾಲಾಗಿದೆ. ಉಳಿದ ಸ್ಥಾನಗಳಲ್ಲಿ 'ಸ್ಲಂಡಾಗ್' ಖ್ಯಾತಿಯ ಫ್ರೀಡಾ, ಕರೀನಾ ಕಪೂರ್, ಬಿಪಾಷಾ ಬಸು, ಲಾರಾದತ್ತ ಮತ್ತು ಐಶ್ವರ್ಯಾ ರೈ ಇದ್ದಾರೆ. ಕೊನೇ ಸ್ಥಾನವನ್ನು ಕನ್ನಡದ ಹುಡುಗಿ ದೀಪಿಕಾ ಪಡುಕೋಣೆ ಗಿಟ್ಟಿಸಿಕೊಂಡಿದ್ದಾರೆ.

ಕಟ್ಟಾನ ಹೊಸ ಪಾರ್ಟ್!



ಅರಮನೆ ಹೊತ್ತಿ ಉರಿಯುತ್ತಿದ್ದರೂ ಪಿಟೀಲು ಕುಯ್ಯುವ ರಾಜನಂತಾಡುತ್ತಿದ್ದಾನೆ ಮಂತ್ರಿ ಕಟ್ಟಾ ಸುಬ್ರಮಣ್ಯ ನಾಯ್ಡು.

ಜಗ್ಗೇಶ್ ಮತ್ತು ಕೋಮಲ್ ನಟಿಸುತ್ತಿರುವ 'ಲಿಫ್ಟ್ ಕೊಡ್ಲಾ' ಚಿತ್ರದಲ್ಲಿ ಕಟ್ಟಾ ಗೃಹ ಮಂತ್ರಿಯ ಪಾರ್ಟ್ ಮಾಡುತ್ತಿದ್ದಾರಂತೆ..

ಮುಖದ ತುಂಬ ಪೌಡ್ರು, ಮೈತುಂಬ ಸೆಂಟು, ತಲೆಮೇಲೊಂದು ಎಂಜಿಆರ್ ಟೋಪಿ ಹಾಕಿಕೊಂಡು ಒಳ್ಳೇ ಕಂಪೆನಿ ಡ್ರಾಮಾ ಕಲಾವಿದನಂತಿರುವ ಕಟ್ಟಾ ಸುಬ್ರಮಣ್ಯನಿಗೆ ಸಚಿವನಾಗಿದ್ದುಕೊಂಡು ಜನತೆಯ ಹಿತ ಕಾಪಾಡುವ ಕೆಲಸ ಬಿಟ್ಟು ಹೀಗೆ ಮೇಕಪ್ಪು ಬಳಿದುಕೊಂಡು ಪೋಸು ಕೊಡುವ ಅಗತ್ಯವಾದರೂ ಏನಿತ್ತು?

ಈ ರಾಜಕಾರಣಿಗಳಿಗೆ ಯಾವಾಗ ಯಾವ ತೆವಲು ಶುರುವಾಗುತ್ತೋ ಯಾರು ಬಲ್ಲರು!

ಆದಿ LOWಕೇಶನ ಮೊಬೈಲ್ ಲಿಫ್ಟಿಂಗ್ ಪ್ರಕರಣ



ಎರಡು ವಾರಗಳ ಹಿಂದಷ್ಟೇ ನಟ ಆದಿ ಲೋಕೇಶನ 'ಸೆಕ್ಸ್ ಮೇನಿಯಾ' ಬಗ್ಗೆ 'ಲಂಕೇಶ್' ವಿಸ್ತಾರವಾದ ವರದಿ ಮಾಡಿತ್ತು. ಇದಾದನಂತರ ಪತ್ರಿಕೆಗೆ ಕರೆ ಮಾಡುವ ಆದಿಯ ನಿಕಟವರ್ತಿಗಳು ಈತನ ಇನ್ನಿತರ ಮೇನಿಯಾ, ಫೋಬಿಯಾಗಳ ಬಗೆಗೂ ರೋಚಕ ಮಾಹಿತಿಗಳನ್ನು ನೀಡಲು ಆರಂಭಿಸಿದ್ದಾರೆ.

ಅಂಥದ್ದೇ ಒಂದು ಸುದ್ದಿ ಇಲ್ಲಿದೆ.

ರಘು ಆಚಾರ್ಯ ಎಂಬ ಯುವ ರಾಜಕಾರಣಿ ತನ್ನ ಕುಟುಂಬದ ಮದುವೆ ಕಾರ್ಯವೊಂದಕ್ಕೆ ಈ ಆದಿ ಲೋಕೇಶ್ ಸೇರಿದಂತೆ ಸಿನಿಮಾ, ಸೀರಿಯಲ್ ಗಳಲ್ಲಿ ಸಣ್ಣ ಪುಟ್ಟ ಪಾತ್ರಮಾಡುವ ಪುಡಿ ಸೆಲೆಬ್ರೆಟಿಗಳನ್ನೆಲ್ಲಾ ಕರೆದಿದ್ದರಂತೆ.

ಮದುವೆ ನೆಪದಲ್ಲಿ ಬಂದಿದ್ದ ಈ ಎಲ್ಲ ಸೆಲೆಬ್ರೆಟಿಗಳು ರಾತ್ರಿ ಕಂಠಮಟ್ಟ ಕುಡಿದು, ಇಸ್ಪೀಟು ಆಡುತ್ತಾ ಜಾಲಿ ಮಾಡಿದ್ದಾರೆ. ಬೆಳಿಗ್ಗೆ ಏಳುವುದರೊಳಗೆ ಇವರ ಪೈಕಿ ಒಬ್ಬನ ನಲವತ್ತು ಸಾವಿರ ರುಪಾಯಿಯ ದುಬಾರಿ ಮೊಬೈಲ್ ಕಾಣೆಯಾಗಿಬಿಟ್ಟಿದೆ. ಇದ್ದ ಮಂದಿಯಲ್ಲಿ ಕದ್ದವರಾರು ಎಂದು ತಲೆಕೆಡಿಸಿಕೊಂಡಾಗ ಎಲ್ಲರ ಕಣ್ಣೂ ಆದಿಯತ್ತ ಬದ್ದಿದೆ. ನೇರವಾಗೇ ಕೇಳಿದರೂ 'ನನಗೆ ಗೊತ್ತೇ ಇಲ್ಲ' ಎಂದು ವಾದಿಸಿಬಿಟ್ಟಿದೆ ಈ ಆದಿ ಲೋಕೇಸು.

ಬಹುಶಃ ಆದಿ ಒಂದೇ ಒಂದು ಪೆದ್ದು ಕೆಲಸ ಮಾಡದಿದ್ದರೆ ಕದ್ದ ವಿಚಾರ ಹೊರಬರುತ್ತಿರಲಿಲ್ಲವೇನೋ?

ಹೆಣ್ಣುಮಕ್ಕಳ ಮೊಬೈಲ್ ನಂಬರ್ ಸಿಕ್ಕರೂ ಮೈ ಕೊಡವುತ್ತಾ ನುಲಿಯುವ ಆದಿಯ ಕಣ್ಣಿಗೆ ಕದ್ದ ಮೊಬೈಲ್‌ನಲ್ಲಿ ಹುಡುಗಿಯೊಬ್ಬಳ ನಂಬರ್ ಕಣ್ಣಿಗೆ ಬದ್ದಿದೆ. ತಕ್ಷಣ ಮಣಿಪಾಲದಲ್ಲಿ ಎಂಬಿಬಿಎಸ್ ಓದುತ್ತಿದ್ದ ಆ ಹುಡುಗಿಗೆ 'ನಾನು ಪಾಪ್ಯುಲರ್ ಹೀರೋ ಆದಿ ಲೋಕೇಶ್. ನಾವಿಬ್ಬರೂ ಫ್ರೆಂಡ್ಸ್ ಆಗೋಣ ಬರ್ತಿಯಾ' ಎಂದು ಮೆಸೇಜು ಮಾಡಿಬಿಟ್ಟಿದ್ದಾನೆ.

ಅಲ್ಲಿಗೆ ಕಳ್ಳ ಸಿಕ್ಕಿಬಿದ್ದಂತಾಗಿದೆ. ವಿಷಯ ಆದಿಯೊಂದಿಗಿದ್ದ ಎಲ್ಲರಿಗೂ ಗೊತ್ತಾಗಿಬಿಟ್ಟಿದೆ. ಅವರೆಲ್ಲರೂ ಮುಖಾಮೂತಿ ನೋಡದೆ ಆದಿಗೆ ಗೂಸಾ ಕೊಟ್ಟು, ಮೊಬೈಲನ್ನು ಕಿತ್ತುಕೊಂಡು, ಆದಿಯನ್ನು ಮದುವೆಮನೆಯಿಂದ ಒದ್ದೋಡಿಸಿದ್ದಾರೆ.

ಕಲಾವಿದ ಎಂದು ಕರೆದರೆ ಕಳ್ಳತನಕ್ಕೂ ಇಳಿಯುವ ಆದಿಯ ಬಳಿ ಮೊಬೈಲು ಹೊಂದಿರುವವರು ಇನ್ನುಮುಂದೆ ಹುಷಾರಾಗಿದ್ದರೆ ಒಳ್ಳೆಯದು! ●



ಆಸ್ಕರ್ ಆಶೋಕ್, ಕಬ್ಬಡಿ ಪ್ರಿಯಾ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44